
ಗೌರಿ ಲಂಕೇಶರ
ಲಂಕೇಶ್
ಮೇ 17, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ

ಬಿಜೆಪಿಗೆ ಸ್ತ್ರೀ ಕಾಟ



ಸಾರಂಗಿ ಜೊತೆ ಚೆಲ್ಲಾಟ



ಶೋಭಾ ಸುತ್ತ ಕಾದಾಟ

ವರಾಜ್‌ಕುಮಾರ್ ಆತ್ಮಕಥೆ

ಅಪ್ಪನಿಗೇ ನಾನು 'ಅಪ್ಪಾಜಿ' ಆಗಿದ್ದಾಗ





ಮೇಯರಮ್ಮಗಳು

ದೇವಿ-ದೆವ್ವ ಕಾಟ



ನೈಸ್ ಟೌನ್‌ಶಿಪ್ ಬರುತ್ತಿದ್ದರೂ ಕುಮಾರಸ್ವಾಮಿ ಟೌನ್‌ಶಿಪ್ ಏಕೆ?:



ಕರ್ನಾಟಕವೆಂದರೆ ಬೆಂಗಳೂರೇ ಎಂದುಕೊಂಡಿರುವ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಬೆಂಗಳೂರಿಗೆಂದು ದಿನ ಬೆಳಗಾದರೆ ಒಂದಾದ ಮೇಲೊಂದರಂತೆ ಹೊಸಹೊಸ ಯೋಜನೆಗಳನ್ನು ಘೋಷಿಸುತ್ತಲೇ ಇದ್ದಾರೆ. ಮೊನ್ನೆ ಮೆಟ್ರೋ ಆಯಿತು. ನಿನ್ನೆ ಎರಡು ವರ್ತುಲ ರಸ್ತೆ ಮತ್ತು ಬೆಂಗಳೂರಿನ ಮೇಲಿನ ಒತ್ತಡ ಕಡಿಮೆ ಮಾಡಲು ಇದೀಗ ಅದರ ಸುತ್ತಾ ಐದು ಟೌನ್‌ಶಿಪ್‌ಗಳು. 60,000 ಸಾವಿರ ಎಕರೆಯಷ್ಟು ರೈತರ ಜಮೀನುಗಳನ್ನು ಇದಕ್ಕಾಗಿ ವಶಪಡಿಸಿಕೊಳ್ಳಲಾಗುವುದಲ್ಲದೇ ಇದಕ್ಕೆಂದೇ 36,000 ಕೋಟಿ ಹಣವನ್ನು ವಿನಿಯೋಗಿಸಲಾಗುವುದು. ಇದು ಯಾವುದೇ ಒಂದು ಯೋಜನೆಗೆಂದು ಸರ್ಕಾರ ವೆಚ್ಚ ಮಾಡುತ್ತಿರುವ ಅತಿ ಹೆಚ್ಚು ಹಣ. ಅಲ್ಲದೆ ಕರ್ನಾಟಕ ಸರ್ಕಾರ ಗ್ರಾಮೀಣ ಅಭಿವೃದ್ಧಿಗೆಂದು 10 ವರ್ಷಗಳ ಕಾಲ ವೆಚ್ಚ ಮಾಡಿದಷ್ಟು ಹಣವಾಗುತ್ತೆ. ಎಷ್ಟೇ ಆದರೂ ಕರ್ನಾಟಕವೆಂದರೆ ಬೆಂಗಳೂರಲ್ಲವೇ?

ಇರಲಿ. ಇದರಲ್ಲಿ ಇನ್ನೊಂದು ಪ್ರಶ್ನೆಯೂ ಇದೆ. ಯಾವ್ಯಾವ ಜಾಗದಲ್ಲಿ ಈ ಹೊಸ ಯೋಜನೆಯಂತೆ ಹೊಸ ಟೌನ್‌ಶಿಪ್‌ಗಳು ಮತ್ತು ರಿಂಗ್ ರಸ್ತೆಗಳು ಬರುತ್ತಿವೆಯೋ, ಅವೆಲ್ಲ ನೈಸ್ ಕಂಪನಿ ಕಟ್ಟುತ್ತಿರುವ ಪೆರಿಫೆರಲ್ ಮತ್ತು ಕಟ್ಟುತ್ತೇನೆಂದು ಹೇಳಿಕೊಳ್ಳುತ್ತಿರುವ ಟೌನ್‌ಶಿಪ್‌ಗಳ ಪಕ್ಕದಲ್ಲಿಯೇ. ನೈಸ್ ಟೌನ್‌ಶಿಪ್ ಪಕ್ಕದಲ್ಲೇ ಸರ್ಕಾರದ ಟೌನ್‌ಶಿಪ್ ಬರುವುದಾದರೆ ನೈಸ್ ಕಂಪನಿಯನ್ನು ಮೂಸಿ ಅವರ ಯೋಜನೆಗೆ ಸಾಲ ಕೊಡುವವರು ಯಾರು? ಸುಪ್ರೀಂ ಕೋರ್ಟಿನಲ್ಲಿ ನೈಸ್ ವಿರುದ್ಧ ಸೋತ ಸರ್ಕಾರ ಈ ರೀತಿ ಕುಮಾರಸ್ವಾಮಿ ಟೌನ್‌ಶಿಪ್ ಕಟ್ಟುವುದರ ಮೂಲಕ ಸೇಡು ತೀರಿಸಿಕೊಳ್ಳುತ್ತಿರಬಹುದೇ?


ಚಾರ್ವಾಕ

- ಶಿವಸುಂದರ್-

ಸುಮಾರು 1985ರಿಂದಲೂ ಕರ್ನಾಟಕದಲ್ಲಿ ನಕ್ಸಲೈಟ್ ಚಟುವಟಿಕೆ ನಡೆಯುತ್ತಿದೆಯೋ ಇಲ್ಲವೋ ಎಂಬ ಬಗ್ಗೆ ಕರ್ನಾಟಕದ ವಿಧಾನ ಸೌಧದಲ್ಲಿ ಚರ್ಚೆ ನಡೆಯುತ್ತಿದೆ. ತೀರಾ ಇತ್ತೀಚಿನ ತನಕ ಅಂದರೆ 1999ರಲ್ಲಿ ರಾಯಚೂರಿನ ಹಳ್ಳಿಯಲ್ಲಿ ಭಾಸ್ಕರ್ ಎಂಬ ನಕ್ಸಲ್ ನಾಯಕನ ಎನ್‌ಕೌಂಟರ್ ಆಗುವ ತನಕ ಕರ್ನಾಟಕದಲ್ಲಿ ನಕ್ಸಲ್ ಚಟುವಟಿಕೆ ನಡೆಯುತ್ತಲೇ ಇಲ್ಲ; ಅವರೆಲ್ಲಾ ಯಾರೋ ಹೊರಗಿನವರು ಎಂದೋ, ಅಥವಾ ಯಾರೋ ನಕ್ಸಲರ ಹೆಸರನ್ನು ಬಳಸಿಕೊಳ್ಳುತ್ತಿದ್ದಾರೆ ಎಂದೋ ಹೇಳಿಕೆ ನೀಡುತ್ತಿದ್ದರು. ಆ ಎನ್‌ಕೌಂಟರ್ ನಂತರ ಆಂಧ್ರದ ನಕ್ಸಲೈಟರು ಬಂದು ಗಡಿ ಭಾಗದಲ್ಲಿ ತೊಂದರೆ ಕೊಡುತ್ತಿದ್ದಾರೆ ಎಂದು ಹೇಳಿದರೇ ವಿನಃ ಕರ್ನಾಟಕದಲ್ಲಿ ನಕ್ಸಲ್ ಚಳವಳಿ ಇದೆ ಎಂದು ಒಪ್ಪಿಕೊಳ್ಳಲು ಸರ್ಕಾರ ತಯಾರಿರಲಿಲ್ಲ. ಮಲೆನಾಡಿನಲ್ಲಿ ನಕ್ಸಲ್ ಹೋರಾಟ ಪ್ರಾರಂಭವಾದ ಮೇಲೆ ನಕ್ಸಲ್ ಚಳವಳಿ ಇದೆ ಎಂದು ಒಪ್ಪಿಕೊಳ್ಳಲೇ ಬೇಕಾಯಿತಾದರೂ ಎಲ್ಲವೂ ನಿಯಂತ್ರಣದಲ್ಲಿದೆ ಎಂದೇ ಹೇಳುತ್ತಾ ಬಂದರು. ಇಡೀ ಒಂದು ದಶಕದಲ್ಲಿ ಎಂದೂ ಕರ್ನಾಟಕದಲ್ಲಿ ನಕ್ಸಲ್ ಚಳವಳಿ ಪ್ರಬಲವಾಗಿದೆ ಎಂದು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ.

ಆದರೆ ಹೊಸ ಕೋ-ಜಾ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಸರ್ಕಾರ ಕರ್ನಾಟಕವನ್ನು ನಕ್ಸಲ್ ಪೀಡಿತ ರಾಜ್ಯ ಎಂದು ಘೋಷಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ದುಂಬಾಲು ಬಿದ್ದಿದೆ. ಈ ಪಟ್ಟವನ್ನು ಯಾವ ರಾಜ್ಯದಲ್ಲಿ ಆಂಧ್ರ-ಬಿಹಾರ್-ಚತ್ತೀಸ್‌ಘಡದಂತ ರೀತಿಯಲ್ಲಿ ನಕ್ಸಲ್ ಚಳವಳಿ ಅತ್ಯಂತ ತೀವ್ರವಾಗಿರುತ್ತದೋ ಅಂತಹ ರಾಜ್ಯಗಳಲ್ಲಿ ಮಾತ್ರ ಘೋಷಿಸಲಾಗುತ್ತದೆ. ಇದರಿಂದಾಗಿ ಆ ರಾಜ್ಯಗಳು ನಕ್ಸಲ್ ನಿಗ್ರಹಕ್ಕೆ ಖರ್ಚು ಮಾಡುವ ಸಂಪೂರ್ಣ ಹಣಕಾಸನ್ನು ಕೇಂದ್ರ ಸರ್ಕಾರವೇ ಭರಿಸುತ್ತದೆ. ಅಲ್ಲದೆ ನಕ್ಸಲ್ ಪೀಡಿತ ಪ್ರದೇಶಗಳ ಅಭಿವೃದ್ಧಿಗೆಂದು ವಿಶೇಷ ಅನುದಾನ ಕೊಡುತ್ತದೆ. ಆದರೆ ಅದರ ಬದಲಿಗೆ ನಕ್ಸಲ್ ನಿಗ್ರಹದ ಉಸ್ತುವಾರಿಯ ಹೆಸರಲ್ಲಿ ರಾಜ್ಯದ ಪಟ್ಟಿಯಲ್ಲಿರುವ ರಾಜ್ಯ ಗೃಹ ಇಲಾಖೆಯನ್ನು ಅಂದರೆ ಅಸಲಿ ರಾಜ್ಯಭಾರದ ಖಾತೆಯ ವ್ಯವಹಾರವನ್ನು ಕೇಂದ್ರದ ಮರ್ಜಿಗೆ ಒಳಪಡಿಸಬೇಕಾಗುತ್ತದೆ. ಆದ್ದರಿಂದಲೇ ಈವರಗೆ ಸರ್ಕಾರಗಳು ನಮ್ಮ ರಾಜ್ಯದಲ್ಲಿ ನಕ್ಸಲ್ ಚಳವಳಿ ಇಲ್ಲವೆಂದು ನಿರಾಕರಿಸಿಕೊಂಡೇ ಬಂದಿದ್ದವು.

ಒಂದು ಪ್ರಶ್ನೆ:



ಈಗ ಪ್ರಶ್ನೆ ಏನೆಂದರೆ ಇದ್ದಕ್ಕಿದ್ದ ಹಾಗೆ ಕರ್ನಾಟಕವನ್ನೂ ನಕ್ಸಲ್ ಪೀಡಿತ ರಾಜ್ಯ ಎಂದು ಘೋಷಿಸಬೇಕೆಂದು ಈ ಸರ್ಕಾರ ದುಂಬಾಲು ಬಿದ್ದಿರುವುದೇಕೆ? ಅದಕ್ಕೆ ಕೇಂದ್ರ ಸರ್ಕಾರದ ಹಣದ ಆಮಿಷ ಮಾತ್ರ ಕಾರಣವೋ? ಅಥವಾ ಬೆಳೆಯುತ್ತಿರುವ ಹಾಗೂ ಜನರಿಂದ ಮಾನ್ಯತೆಯನ್ನು ಪಡೆಯುತ್ತಿರುವ ನಕ್ಸಲ್ ಚಳವಳಿಯನ್ನು ಕೇಂದ್ರದ ಸಹಾಯವಿಲ್ಲದೇ ಮಣಿಸಲು ಸಾಧ್ಯವಿಲ್ಲ ಎಂಬ ಆತಂಕವೋ?

ಇತ್ತೀಚೆಗೆ ವಿಶ್ವಸಂಸ್ಥೆ ಹೊರತಂದಿರುವ ಅಧ್ಯಯನದ ಪ್ರಕಾರ ಪ್ರಪಂಚದಲ್ಲಿ ಪೌಷ್ಟಿಕಾಂಶ ಕೊರತೆಯಿಂದ, ಅನಾರೋಗ್ಯದಿಂದ ಮತ್ತು ಬಡತನದಿಂದ ಬಳಲುತ್ತಿರುವ ಬಡಮಕ್ಕಳಲ್ಲಿ ಅರ್ಧದಷ್ಟು ಮಕ್ಕಳು ಭಾರತದಲ್ಲೇ ಇದ್ದಾರಂತೆ. ಅಂದರೆ ಈ ದೇಶದ 5.7ಕೋಟಿ ಮಕ್ಕಳು ಅಪೌಷ್ಟಿಕತೆಯಿಂದ, ಅನಾರೋಗ್ಯದಿಂದ ನರಳುತ್ತಿದ್ದಾರೆ ಎಂದರ್ಥ. ಅವರು ಮಾರುಕಟ್ಟೆಯಿಂದ ಆಹಾರ ಖರೀದಿಸಿ ತಿನ್ನುವ ಶಕ್ತಿ ಇಲ್ಲದವರು. ಸಂಪೂರ್ಣವಾಗಿ ಸರ್ಕಾರದ ಪಡಿತರ ವ್ಯವಸ್ಥೆಯ ಮೇಲೆಯೇ ಅವಲಂಬಿತರಾದವರು. ಅಲ್ಲಿ ಸಿಗುತ್ತಿದ್ದ ಕನಿಷ್ಠ ಆಹಾರ ತಿಂದರೂ ಇಲ್ಲಿನ 5.7ಕೋಟಿ ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ಈಗ ಸರ್ಕಾರ ಅದಕ್ಕೆ ಕೊಡುತ್ತಿದ್ದ ಹಣದಲ್ಲಿ 4500 ಸಾವಿರ ಕೋಟಿಯನ್ನು ಕೋತಾ ಮಾಡುತ್ತಿದೆ.

ಒಂದು ಸತ್ಯ:



ಏಕೆಂದರೆ ಸರ್ಕಾರದ ಬಳಿ ಹಣವಿಲ್ಲವಂತೆ. ಆದರೆ ಅದೇ ವೇಳೆಯಲ್ಲಿ 2004-05 ಸಾಲಿನಲ್ಲಿ ವಿದೇಶಿ ಬಂಡವಾಳಿಗರಿಗೆ, ಉದ್ಯಮಗಳಿಗೆ ಕೇವಲ ಕಾರ್ಪೊರೇಟ್ ತೆರಿಗೆ ಕಡಿತದಿಂದಲೇ 3500 ಸಾವಿರ ಕೋಟಿ ಉಳಿತಾಯ ಮಾಡಿಕೊಡಲಾಗಿದೆ. ಇದು ಈದೇಶದ ಸಮಾನತೆಯ ಸತ್ಯ!



ಮೆಟ್ರೋ ರೈಲು- ಜಪಾನ್ ರೂಲು!

ಬೆಂಗಳೂರಿನಲ್ಲಿ ಮೆಟ್ರೋ ರೈಲು ಬರಲು ಎಲ
ತಯಾರಿಗಳು ಭರದಿಂದ ಸಾಗಿವೆ. ಅದರ ಹಣಕಾಸಿ
ಶೇ.30ರಷ್ಟು ಭಾಗವನ್ನು ಜಪಾನಿನ ಜಪಾನ್ ಬ್ಯಾಂಕ
ಆಫ್ ಇಂಟರ್‌ನ್ಯಾಷನಲ್ ಕೋ-ಆಪರೇಷನ
ನೀಡುತ್ತಿದೆ. ಅದು 30 ವರ್ಷದ ದೀರ್ಘಾವಧಿ ಸಾ
ವೆಂದು, ಬಡ್ಡಿ ದರ ಕೇವಲ ಶೇ.2 ಮಾತ್ರವೆಂದ
ಸರ್ಕಾರ ಹೇಳಿತ್ತು. ಜಪಾನ್ ಸರ್ಕಾರದ ಸಹಕಾರವನ
ಬಾಯಿ ತುಂಬಾ ಕೊಂಡಾಡಿತ್ತು. ಆದರೆ ಈ
ಒಪ್ಪಂದದ ನಿಜ ಸ್ವರೂಪವನ್ನು ಸರ್ಕಾರವೇ ಹೊ
ಹಾಕಿದೆ. ಈ 4500ಕೋಟಿ ಯೋಜನೆಯ ಗುತ್ತಿ
ಯನ್ನು ಅಂತರರಾಷ್ಟ್ರೀಯ ಬಿಡ್ಡಿಂಗ್ ಕರೆದೇ ಕೊಡಬೇಕು
ಹಾಗೂ ಆ ಗುತ್ತಿಗೆಯನ್ನು ಅಂತಿಮ ಮಾಡು
ಅಧಿಕಾರ ಇರುವುದು ಯೋಜನೆಗೆ ಶೇ.70ರಷ್
ಹಣ ಹೂಡುವ ನಮ್ಮ ಸರ್ಕಾರಕ್ಕಲ್ಲ, ಬದಲಿ
ಶೇ.30ರಷ್ಟು ಹಣಹೂಡುವ ಜಪಾನಿನದು. ಪ್ರ
ಹಂತದಲ್ಲೂ ಕರ್ನಾಟಕ ಸರ್ಕಾರ ಯೋಜನೆ
ಗುತ್ತಿಗೆಯ ಎಲ್ಲ ಪ್ರಕ್ರಿಯೆಯನ್ನು ಜಪಾನಿಗೆ ತೋ
ಸಿಯೇ, ಅವರ ಒಪ್ಪಿಗೆ ಪಡೆದೇ ಮುಂದುವರೆಯಬೇಕು
ಗುತ್ತಿಗೆದಾರರು ಜಪಾನು ಅಥವಾ ಜಪಾನಿಗೆ ಬೇಕಾ
ಬಹುರಾಷ್ಟ್ರೀಯ ಕಂಪನಿಗಳೇ ಆಗಿರುತ್ತವೆ ಎಂಬುದರ
ಅನುಮಾನವೇ ಬೇಡ. ಅವರು ಅತ್ಯಧಿಕ ಲಾಭದ ದರ
ಬಿಡ್ ಮಾಡುತ್ತಾರೆ. ಅದನ್ನು ಒಪ್ಪಿಕೊಳ್ಳಲು ಜಪಾನ
ನಮಗೆ ತಾಕೀತು ಮಾಡುತ್ತದೆ. ಅದಕ್ಕೆ ಬೇಕಾದ ಹಣದ
ಶೆ.30ನ್ನು ಕೊಡುತ್ತದೆ. ಮಿಕ್ಕಿದ್ದನ್ನು ನಮ್ಮ ಜನರಿಂದಲ
ಎತ್ತಿ ಆ ಕಂಪನಿಯ ಉದಿ ತುಂಬಿಸಲಾಗುತ್ತದೆ.
ರೂಪಾಯಿಯಲ್ಲಿ ಆಗುವ ಕೆಲಸವನ್ನು ಜಪಾನ್ ಕಂಪನಿ
ಲಾಭ ಕೊಡಿಸಲೆಂದೇ 3ರೂಪಾಯಿಯಲ್ಲಿ ಮಾಡಿಸಲಾಗ
ತ್ತದೆ. ಹೀಗೆ ನಮ್ಮ ಖಜಾನೆಯನ್ನು ಲೂಟಿ ಹೊಡೆದರ
ಅದನ್ನು ಸಹಕಾರವೆಂದೇ ಕರೆಯಲಾಗುತ್ತದೆ. ಇದ
ಲೂಟಿ ಎಂದವರನ್ನು ದೇಶದ್ರೋಹಿಗಳೆಂದು ಕರೆಯ
ಲಾಗುತ್ತದೆ. ಆಮೆನ್.

No Comments

ಈಗಾಗಲೇ ಬಹಳಷ್ಟು ಕಂಪನಿಗಳು ಹಿಂದುಳಿದವರಿಗೆ ಉದ್ಯೋಗಾವಕಾಶ ಕಲ್ಪಿಸಿವೆ. ಹೀಗಾಗಿ ಮತ್ತೆ ಖಾಸಗಿ ಉದ್ಯಮಗಳಲ್ಲಿ ಮೀಸಲಾತಿ ಹೇರುವ ಅಗತ್ಯವಿಲ್ಲ.

-ಕೇಂದ್ರ ಕೈಗಾರಿಕಾ ಸಚಿವ ಅಶ್ವಿನ್‌ಕುಮಾರ್



ಕಾವ್ಯದಿಂದ ಸಮಾಜದಲ್ಲಿ ಶಾಂತಿ ನೆಲೆಸುತ್ತದೆ.


-ಚಂದ್ರಶೇಖರ ಪಾಟೀಲ್

ನಂಬಿದ್ರೆ ನಂಬಿ ಬಿಟ್ರೆ ಬಿಡಿ:

ಧರ್ಮದ ಆಧಾರದ ಮೇಲೆ ಈ ದೇಶದ ಸಂಸ್ಕೃತಿ ನಿಂತಿದೆ.

-ನಿವೃತ್ತ ನ್ಯಾಯಮೂರ್ತಿ ರಾಮಾ ಜೋಯಿಸ್

ಬಡವರಿಗೆ ಕಲರ್ ಟಿ.ವಿ. ಮತ್ತು ಎರಡು ರೂಪಾಯಿಗೆ ಕೆ.ಜಿ. ಅಕ್ಕಿ ಕೊಡುವುದು ಕಷ್ಟ ಆಗುವುದಿಲ್ಲ.



-ಮಲ್ಲಿಕಾರ್ಜುನ ಖರ್ಗೆ

ವಾರದ ಘೋಷಣೆ:

ಜನಪ್ರತಿನಿಧಿಗಳೇ ಇನ್ನು ಮುಂದೆ ನಿಮಗಿಲ್ಲಿ ನೋ ಎಂಟ್ರಿ

-ಹತ್ತಾರು ವರ್ಷಗಳಿಂದ ರಸ್ತೆ ರಿಪೇರಿ ಮಾಡದ ಸರ್ಕಾರದ ವಿರುದ್ಧ ಸುಬ್ರಹ್ಮಣ್ಯದ ನಾಗರಿಕರ ಘೋಷಣೆ.

ಪ್ರಯತ್ನ

'ಲಂಕೇಶ್' ವಾರಪತ್ರಿಕೆಯ ಮಿತ್ರ ಸಿದ್ಧರಾಮ ಹೊನ್ಕಲ್‌ರವರು 'ಪ್ರಯತ್ನ' ಕುರಿತು ಕೆಲವು ಸೂಕ್ತಿಗಳನ್ನು ಕಳುಹಿಸಿದ್ದಾರೆ. ಆರೋಗ್ಯ ಶಿಕ್ಷಣಾಧಿಕಾರಿಗಳಾಗಿರುವ ಹೊನ್ಕಲ್‌ರವರು ಹಲವಾರು ಕವನ ಸಂಕಲನಗಳನ್ನು ಬರೆದಿದ್ದಾರಲ್ಲದೆ, ಪ್ರವಾಸಿ ಕಥನಗಳನ್ನೂ ಬರೆದು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ. ಹೊನ್ಕಲ್‌ರವರಿಗೆ ನಮ್ಮ ಧನ್ಯವಾದಗಳು

-ಗೌರು


...ಲ್ಲಿ ಮುಳುಗಿದವನಿಗೆ ಮುತ್ತು ದೊ...ಯಿತು, ...ಯಿಂದ ದಂಡೆಯಲ್ಲಿಯೇ ...ತ್ತೈ-ದಿವಾಕರ

ಜಾತಿ ದುರಹಂಕಾರ ಮತ್ತು ಮೀಸಲಾತಿ

ಕ್ರಿಕೆಟ್‌ನಲ್ಲಿ ಮೀಸಲಾತಿ ನಿಯಮ ಬಂದರೆ ...ಗಿರುತ್ತೆ?

* ದಲಿತ ಆಟಗಾರರಿಗೆ ಬೌಂಡರಿ ಲೈನ್ 15 ಗಜ ಕಡಿಮೆ ಇರುತ್ತೆ.
* ಬೌಂಡರಿಗಳನ್ನು ಸಿಕ್ಸರ್ ಎಂದು ಪರಿಗಣಿಸಲಾಗುತ್ತೆ.
* ಸಿಕ್ಸರ್‌ಗಳನ್ನು 8 ರನ್ ಎಂದು ಪರಿಗಣಿಸಲಾಗುತ್ತೆ.
* ದಲಿತ ಬೌಲರ್‌ಗಳಿಗೆ ಒಂದು ಓವರ್‌ನಲ್ಲಿ ಆರು ಬಾಲ್‌ಗಳ ಬದಲಾಗಿ ಐದು ಬಾಲ್‌ಗಳಿರುತ್ತೆ.
* ದಲಿತ ಫೀಲ್ಡರ್‌ಗಳು ಪಿಚ್ ಕ್ಯಾಚ್ ಹಿಡಿಯಬಹುದು.

ಇಂತಹದ್ದೊಂದು SMS ಮೊಬೈಲ್‌ಗಳ ಜಾಲದಲ್ಲಿ ...ರಿದಾಡುತ್ತಿದೆ. ಇದನ್ನು ನೋಡಿ ಹಲವರು ...ನಂದಿಸುತ್ತಿದ್ದಾರೆ ಕೂಡ. ಆದರೆ ಈ SMS ನಲ್ಲಿ ...ೀಲ್ವರ್ಗದವರಿಗೆ ದಲಿತರ ಬಗ್ಗೆ, ಹಿಂದುಳಿದವರ ...ಗ್ಗೆ ಎಂತಹ ತಾತ್ಸಾರ ...ದೆ ಎಂಬುದು ...ಷ್ಟವಾಗಿ ಕಾಣಿಸುತ್ತದೆ. ... SMS ನಲ್ಲಿ ವ್ಯಕ್ತ...ಾಗಿರುವ ಅಭಿಪ್ರಾಯ ...ದಲಿತರಲ್ಲಿ ಯಾವುದೇ ...ೀತಿಯ ಪ್ರತಿಭೆ ಇಲ್ಲ; ...ವರಿಗೆ ಭಾರತದ ...ಕೆಟ್ ಟೀವಮ್‌ನಲ್ಲಿ ...ೀಸಲಾತಿ ಕೊಟ್ಟು ...ಾಗ ಕಲ್ಪಿಸಿದರೂ ಅವರಿಗೆ ವಿಶೇಷ ರಿಯಾಯಿತಿ...ಳನ್ನು ತೋರಿಸಬೇಕು' ಎಂಬುದೇ ಆಗಿದೆ.



ಮಾಧ್ಯಮಗಳಲ್ಲೂ ಜಾತಿ ದುರಹಂಕಾರ

ಪರಿಸರಕ್ಕೂ, ಪ್ರತಿಭೆಗೂ ನೇರ ಸಂಬಂಧವಿದೆ ಎಂಬ ...ಮಾನ್ಯ ಅರಿವೂ ಇಲ್ಲದ ವಿದ್ಯಾವಂತರು, ಮೇಲು...ಾತಿಯವರು, ಮೇಲುವರ್ಗದವರು, ಇವತ್ತಿಗೂ ...ಂದುಳಿದವರಲ್ಲಿ, ದಲಿತರಲ್ಲಿ ಪ್ರತಿಭೆ ಇಲ್ಲ ಎಂದು ...ಾದಿಸುತ್ತಿರುವುದು ಸರಿಯೂ ಅಲ್ಲ, ಸತ್ಯವೂ ಅಲ್ಲ, ...ಷ್ಟೇ ಅಲ್ಲ, ಇವರ ನಿಲುವು ಅಮಾನವೀಯ ...ಾತಿಪದ್ಧತಿಯನ್ನು ಘೋಷಿಸುತ್ತದೆ ಹಾಗೂ ನಮ್ಮ ...ಂವಿಧಾನದ ವಿರುದ್ಧವೂ ಆಗಿದೆ-ಅಂದರೆ ಸಂವಿಧಾನ...ಾಹಿರವೂ, ದೇಶದ್ರೋಹದ ಕೃತ್ಯವೂ ಆಗಿದೆ.

ಒಂದು ಕ್ಷಣ, ಶತಮಾನಗಳ ಕಾಲದಿಂದ ಈ ...ೇಶವನ್ನು ಆಳುತ್ತಿರುವ ಮೇಲುಜಾತಿ ಮತ್ತು ...ೀಲುವರ್ಗದವರಲ್ಲೇ ಪ್ರತಿಭೆ ಇದೆ ಎಂದು ಭಾವಿ...ೋಣ. ಅದು ಸತ್ಯವಾಗಿದ್ದರೆ ಯಾಕೆ ನಮ್ಮ ಈ ...ೃಹತ್ ದೇಶ ಬ್ರಿಟಿಷರ ವಶವಾಯಿತು? ಯಾಕೆ ...ವತ್ತು ಭಾರತ ಅತಿ ಭ್ರಷ್ಟ ರಾಷ್ಟ್ರಗಳಲ್ಲಿ ಒಂದಾಗಿದೆ? ...ಯಾಕೆ ಇಲ್ಲಿ ಇನ್ನೂ ಬಡತನ, ಅನಾರೋಗ್ಯ, ಹಸಿವು ...ಂಡವವಾಡುತ್ತಿದೆ? ಇದಕ್ಕೆಲ್ಲ ಕಾರಣ ಮೇಲುಜಾತಿ, ...ೀಲುವರ್ಗದವರಲ್ಲಿ ಕಿಂಚಿತ್ತೂ ಪ್ರತಿಭೆ ಇಲ್ಲದಿರುವುದು ...ಂದು ತರ್ಕಿಸಬಹುದಲ್ಲವೇ? ತಾವೇ ಉತ್ತಮರು, ...ತಿಭಾವಂತರು ಎಂಬ ಮೇಲು ವರ್ಗದವರ ಕಲ್ಪನೆ ... ವಾಸ್ತವಾಂಶಗಳ ಎದುರು ಇನ್ನೂ ಜೀವಂತವಾಗಿರು...ದೇ ಅವರ ಒಣ ತಿಮಿರಿಗೆ ಸಾಕ್ಷಿ.


ಇತಿಹಾಸದಲ್ಲೂ ಅಷ್ಟೇ. ವೇದ, ಪುರಾಣ ಇತ್ಯಾದಿ ನಿರುಪಯುಕ್ತ ಜ್ಞಾನಗಳ ಭಂಡಾರಗಳಾಗಿದ್ದ ಬ್ರಾಹ್ಮಣಶಾಹಿ ಈ ದೇಶದಲ್ಲಿ ಸಾಮಾಜಿಕ ನ್ಯಾಯಕ್ಕೆ ಮಾಡಿದ್ದೇನು? ಧೀರ ಯೋಧರಾದ ಕ್ಷತ್ರಿಯರು ಈ ದೇಶವನ್ನು ವಸಾಹತುಗಳಿಂದ ರಕ್ಷಿಸಿದ ಪರಿ ಎಂತಹದ್ದು? ಲೆಕ್ಕಾಚಾರದಲ್ಲಿ ನಿಸ್ಸೀಮರಾದ ವೈಶ್ಯರು ಇಲ್ಲಿನ ಜನರ ಸ್ವಾವಲಂಬನೆಗೆ ಕಡಿದಿದ್ದಾದರೂ ಏನನ್ನು? ವೇದಗಳ ಹೆಸರಲ್ಲಿ ಜನರ ಶೋಷಣೆ, ರಕ್ಷಣೆ ಹೆಸರಲ್ಲಿ ದಳ್ಳುರಿ, ವ್ಯವಹಾರದ ಹೆಸರಲ್ಲಿ ಜನರಿಗೆ ಮೋಸ. ಇದೇ ಈ ಪ್ರತಿಭಾವಂತರ ಅಸಲಿ ಕೊಡುಗೆ!

'ಪ್ರತಿಭೆ' ಅಂದರೆ ಏನು ಎಂಬುದರ ಬಗ್ಗೆ ಕಳೆದ ಸಂಚಿಕೆಯಲ್ಲಿ ಶಿವಸುಂದರ್‌ರವರು ಬರೆದಿದ್ದರಿಂದ ಅದರ ಬಗ್ಗೆ ಇಲ್ಲಿ ಮತ್ತೆ ವಿಶ್ಲೇಷಿಸುವುದಿಲ್ಲ. ಆದರೆ ಪ್ರತಿಭೆ ದಕ್ಕುವುದು ಜಾತಿಯಿಂದ ಎಂಬುದಂತೂ ಶುದ್ಧ ಸುಳ್ಳು. ಬದಲಾಗಿ ಬೌದ್ಧಿಕ-ಭೌತಿಕ ಸಂಪನ್ಮೂಲಗಳನ್ನು ಪಡೆಯುವುದರಿಂದ ಪ್ರತಿಭೆ ಅರಳುತ್ತದೆ. ಆದರೆ ಹಿಂದೆ ಈ ಸಂಪನ್ಮೂಲಗಳು ಎಲ್ಲರಿಗೂ ಸಮಾನವಾಗಿ ಸಿಗದಂತೆ ನೋಡಿಕೊಳ್ಳುವುದಕ್ಕೆ ಜಾತಿ ವ್ಯವಸ್ಥೆ ಇದ್ದರೆ, ಇವತ್ತಿಗೂ ಆ ಜಾತಿ ವ್ಯವಸ್ಥೆಯ 'ಸ್ವಹಿತಾಸಕ್ತಿಗಳು' ಇವೆ. ಆದ್ದರಿಂದಲೇ ಸ್ವಾತಂತ್ರ್ಯ ಬಂದು 58 ವರ್ಷಗಳಾದರೂ ಇವತ್ತಿಗೂ ಮೀಸಲಾತಿಯ ಅವಕಾಶವನ್ನು ಪಡೆದು ಮೇಲೆ ಬಂದವರ ಪ್ರಮಾಣ ಅತಿಕಡಿಮೆ ಇದೆ. ಸರ್ಕಾರವೇನೋ ತನ್ನ ಕಚೇರಿಗಳಲ್ಲಿ, ಸಾರ್ವಜನಿಕ ಉದ್ಯಮಗಳಲ್ಲಿ ಹಿಂದುಳಿದವರಿಗೆ, ದಲಿತರಿಗೆ ಮೀಸಲಾತಿ ಆಧಾರದ ಮೇಲೆ ಹುದ್ದೆಗಳನ್ನು ನೀಡುತ್ತೆ. ಆದರೆ ಈಗಲೂ ಸರ್ಕಾರಿ ಕಚೇರಿಗಳಲ್ಲಿ ಶೇ. 50 ರಷ್ಟು ಹುದ್ದೆಗಳು, ಸಾರ್ವಜನಿಕ ಉದ್ಯಮಗಳಲ್ಲಿ ಶೇ. 80 ರಷ್ಟು ಮೀಸಲು ಹುದ್ದೆಗಳು ಖಾಲಿ ಬದ್ದಿರುತ್ತವೆ ಅಂದರೆ ಏನರ್ಥ? ಅರ್ಥ ಇಷ್ಟೇ: ಮೀಸಲಾತಿ ಆಧಾರದ ಮೇಲೆ ಕೆಲಸ ನೀಡಬಹುದು, ಆದರೆ ಆ ಕೆಲಸಕ್ಕೆ ಸೇರಲು ಅವರಿಗೆ ಬೇಕಾದ ಶಿಕ್ಷಣವನ್ನು, ಆ ಶಿಕ್ಷಣವನ್ನು ಪಡೆಯುವಷ್ಟು ಸೌಲತ್ತುಗಳನ್ನು ಸರ್ಕಾರ ಅವರಿಗೆ ನೀಡಿಲ್ಲ. ಅದು ದಲಿತ, ಹಿಂದುಳಿದವರ ತಪ್ಪಲ್ಲ, ಬದಲಾಗಿ ವ್ಯವಸ್ಥೆ ಎಸಗಿರುವ ಘೋರ ಅಪರಾಧ. ಇದನ್ನು ಅರಿಯದ ಮೇಲುವರ್ಗ ಹಿಂದುಳಿದವರ ವಿರುದ್ಧ ಕೆಂಡ ಕಾರುತ್ತಿದೆ.

ಇವತ್ತು ದ್ವೈತ, ಅದ್ವೈತಗಳನ್ನು ಕಟ್ಟಿಕೊಂಡು ಯಾರಿಗೂ ಏನೂ ಆಗಬೇಕಿಲ್ಲ, ಏಕೆಂದರೆ ಪ್ರಸ್ತುತ ಕಾಲದಲ್ಲಿ ಅವು ಸಂಪೂರ್ಣವಾಗಿ ನಿರುಪಯುಕ್ತ; ಅದು ಎಲ್ಲರಿಗೂ ಗೊತ್ತು. (ಗೊತ್ತಿಲ್ಲದಿದ್ದರೆ ಇವತ್ತು ಮಠಗಳಿಗೂ, ಮದರಸಾಗಳಿಗೂ ಏನು ವ್ಯತ್ಯಾಸ ಇರುತ್ತಿತ್ತು ಹೇಳಿ?!) ಅದನ್ನು ಅರಿತ ಮೇಲು ಜಾತಿಯ ಜನ ಆಧುನಿಕ ವಿದ್ಯೆ ಪಡೆದು ಆಯಕಟ್ಟಿನ ಜಾಗೆಗಳನ್ನು ಆಕ್ರಮಿಸಿಕೊಂಡರು. ಆದರೆ ಅಂದು ಹಿಂದುಳಿದಿದ್ದವರು, ಇಂದಿಗೂ ಹಿಂದುಳಿದಿದ್ದಾರೆ. ಅಂದು ವೇದದ ಹೆಸರಲ್ಲಿ ಅನ್ಯಾಯ, ಇಂದು ವಿದ್ಯೆಯಿಂದಲೇ ವಂಚನೆ.

ಮೊನ್ನೆ ಮೀಸಲಾತಿಯನ್ನು ವಿರೋಧಿಸುವ ಅಧ್ಯಾಪಕಿಯೊಬ್ಬರು (ಅವರೂ ಮೇಲ್ಜಾತಿ ಲಿಂಗವಂತರು ಎಂದು ಪ್ರತ್ಯೇಕವಾಗಿ

ಕಂಡಹಾಗೆ



ಹೇಳಬೇಕಿಲ್ಲ) ತಮ್ಮ ಭಂಡವಾದವನ್ನು ಮಂಡಿಸುತ್ತಾ "ನಾವ್ಯಾಕ್ರಿ ಅವರಿಗೆ ಬಿಟ್ಟುಕೊಡಬೇಕು? ಪ್ರತಿಭೆ ಇದ್ದರೆ ಅವರೇ ಮುಂದೆ ಬರುತ್ತಾರೆ" ಎಂದರು. ಅಷ್ಟೇ ಅಲ್ಲ "ವಿಶ್ವೇಶ್ವರಯ್ಯ ಬಡವರಾಗಿದ್ದರೂ ಬೀದಿದೀಪದ ಅಡಿ ಓದುತ್ತಾ ಮುಂದೆ ಬರಲಿಲ್ಲವೇ?" ಅಂತ ಪ್ರಶ್ನಿಸಿದರು. "ನಿಮಗೆ ಉತ್ತರವಾಗಿ ನಮ್ಮ ರಾಷ್ಟ್ರಪತಿ ಯಾಗಿದ್ದ ಕೆ.ಆರ್. ನಾರಾಯಣನ್ ಹಾಗೂ ಈಗ ರಾಷ್ಟ್ರಪತಿ ಆಗಿರುವ ಅಬ್ದುಲ್ ಕಲಾಂರವರ ಉದಾಹರಣೆ ನೀಡಬಲ್ಲೆ. ಈ ದಲಿತ, ಮುಸ್ಲಿಮರಲ್ಲೂ ಪ್ರತಿಭೆ ಇದ್ದದ್ದಕ್ಕೆ ಅವರು ಮುಂದೆ ಬಂದಿದ್ದು. ಆದರೆ ಆ ವರ್ಗದವರಲ್ಲಿ ಪ್ರತಿಭೆ ಇಲ್ಲ ಅಂತ ಹೇಗೆ ಹೇಳುತ್ತೀರಿ? ಸೂಕ್ತ ಅವಕಾಶಗಳನ್ನು ನೀಡಿದರೆ, ಲಕ್ಷಾಂತರ ನಾರಾಯಣ್ ಗಳೂ, ಕಲಾಂಗಳೂ ಬೆಳಕಿಗೆ ಬರುತ್ತಾರೆ. ಮೇಲುಜಾತಿ ಯವರ ಆಳ್ವಿಕೆಯಲ್ಲಿ ಈ ದೇಶ ಉದ್ಧಾರ ಆಗಿದ್ದು ಅಷ್ಟಕ್ಕಷ್ಟೇ. ಈಗ ಇವರಿಗೆ ಅವಕಾಶ ಕೊಟ್ಟು ನೋಡೋಣ. ಅವರಾದರೂ ಈ ದೇಶವನ್ನು ಉಳಿಸ ಬಹುದು," ಅಂದೆ. "ನಾವ್ಯಾಕೆ ಕೊಡಬೇಕು" ಎಂದು ಹೇಳಿದ್ದ ಅವರಲ್ಲಿ "ನಾವು"



ದಲಿತರನ್ನು ಕಳ್ಳರಂತೆ ತೋರಿಸಿರುವ ವ್ಯಂಗ್ಯಚಿತ್ರ

ಎಂಬ ಸರ್ವಾಧಿಕಾರಿ ಧೋರಣೆ ಮತ್ತು "ಕೊಡಬೇಕು" ಎಂಬ ಪದದಲ್ಲಿ ಅಸಡ್ಡೆ ಎಷ್ಟಿತ್ತೆಂದರೆ ಅವರೊಂದಿಗೆ ವಾದ ಮಾಡು ವುದೂ ನಿರರ್ಥಕ ಎನ್ನಿಸಿ ಸುಮ್ಮನಾದೆ.

ಈ ವರ್ಗದ ಧಿಮಾಕು ಎಂತಹದ್ದೆಂದರೆ, ಅವರಿಗಿಂತಲೂ ಅಪಾರ ಸಂಖ್ಯೆಯಲ್ಲಿರುವ ಹಿಂದುಳಿದವರು ಮತ್ತು ದಲಿತರಿಂದ ತೆರಿಗೆ ಪಡೆಯುವ ಸರ್ಕಾರ ಅವರಿಗೆ ತನ್ನ ಶಾಲಾ, ಕಾಲೇಜುಗಳಲ್ಲಿ ಮೀಸಲಾತಿ ನೀಡಿದರೆ ವಿರೋಧಿಸುತ್ತಾರೆ. "ಪ್ರತಿಭೆ ಇಲ್ಲದವರಿಗೆ ಇಲ್ಲಿ ಯಾಕೆ ಜಾಗ?" ಎಂದು ಕೆಂಡ ಕಾರುತ್ತಾರೆ. ಆದರೆ, ಅವರ ವರ್ಗಕ್ಕೇ ಸೇರಿರುವ ಜನ ಬಡವರ ಭೂಮಿ ದೋಚಿ, ಸರ್ಕಾರದ ಸವಲತ್ತುಗಳನ್ನು ಪಡೆದು ಕ್ಯಾಪಿಟೇಶನ್ ಕಾಲೇಜಿನ ಹೆಸರಲ್ಲಿ ಪ್ರತಿಭೆ ಇಲ್ಲದ ಹಣವಂತರಿಗೆ ಸೀಟು ಕೊಡುವುದನ್ನು ಒಮ್ಮೆಯೂ ಪ್ರಶ್ನಿಸುವುದಿಲ್ಲ. "ಏನ್ರೀ, ಪ್ರತಿಭೆ ಇಲ್ಲದವರೆಲ್ಲ ಈ ಶಿಕ್ಷಣ ಅಂಗಡಿಗಳಲ್ಲಿ ಡಾಕ್ಟರ್, ಇಂಜಿನಿಯರೂ ಆಗ್ತಿದ್ದಾರಲ್ಲ?" ಎಂದು ಪ್ರತಿಭಟಿಸು ವುದೂ ಇಲ್ಲ.

ಅಂದಹಾಗೆ, ಸರ್ಕಾರಿ ಸಂಸ್ಥೆಗಳಾದ IIT ಮತ್ತು IIM ನಂತಹ ಉನ್ನತ ಶಿಕ್ಷಣ ಕೇಂದ್ರಗಳ ವಿದ್ಯಾರ್ಥಿಗಳಿಂದ ಇಲ್ಲಿಯವರೆಗೂ ಅಮೆರಿಕಾದ NASA ಮತ್ತು ಬಿಲ್ ಗೇಟ್ಸ್‌ನ ಮೈಕ್ರೋಸಾಫ್ಟ್ ಕಂಪನಿಗಳು ಉದ್ಧಾರವಾಗಿವೆಯೇ ಹೊರತು ನಮ್ಮ ISRO ಅಥವಾ ಮೈ ಶುಗರ್ ಅಲ್ಲ. ಇವತ್ತು ನಮ್ಮ ISRO ವಿಜ್ಞಾನಿಗಳು ಹಲವು ಸಾಧನೆಗಳನ್ನು ಮಾಡಿರಬಹುದು. ಆದರೆ ಆ ಸಾಧನೆಗಳಿಗೆ ಕೈ ಹಾಕುವ ಮುನ್ನ ರಾಹುಕಾಲ, ಧರ್ಮಸ್ಥಳದ ಆಶೀರ್ವಾದ ಎಂದು ಅವರು ನೋಡು ತ್ತಾರೆಂದರೆ ಅವರ ಸಾಧನೆಗಳಲ್ಲಿ ಹಲವಷ್ಟು ಅಡ್ಡೇಟಿಗೆ ಗುಡ್ಡೇಟು ಇರಬಹುದಾ ಎಂಬ ಸಂಶಯ ಮೂಡುತ್ತದೆ.

ಇಲ್ಲಿ ಕರ್ನಾಟಕದ ರಾಜಕೀಯ ವಲಯದಲ್ಲಿನ ಒಂದೆರಡು ಉದಾಹರಣೆಗಳನ್ನು ಕೊಡಬಹುದು. ಎಲ್ಲರಿಗೂ ಗೊತ್ತಿರುವಂತೆ ಈ ರಾಜ್ಯ ಹೆಚ್ಚು ಲಿಂಗಾಯತ, ಹಲವು ಒಕ್ಕಲಿಗ, ಎರಡು ಬ್ರಾಹ್ಮಣ ಮತ್ತು ಕೆಲವು ಹಿಂದುಳಿದ ವರ್ಗದಿಂದ ಬಂದ ಮುಖ್ಯಮಂತ್ರಿಗಳನ್ನು ಕಂಡಿದೆ. ಅವರಲ್ಲೆಲ್ಲಾ ಸಾಮಾಜಿಕ ನ್ಯಾಯಕ್ಕಾಗಿ ದಕ್ಷತೆಯಿಂದ ದುಡಿದವರೆಂದರೆ ಹಿಂದುಳಿದ ವರ್ಗದ ದೇವರಾಜ ಅರಸು ಮತ್ತು ವೀರಪ್ಪ ಮೊಯ್ಲಿ ಮಾತ್ರ. ಹಾಗೆಯೇ ರಾಮಕೃಷ್ಣ ಹೆಗಡೆ ಅಧಿಕಾರಾವಧಿಗೆ ವರ್ಚಸ್ಸು ತಂದು ಕೊಟ್ಟವರು ಮುಸ್ಲಿಮರಾಗಿದ್ದ ನಜೀರ್ ಸಾಬರು. ಮಿಕ್ಕಂತೆ ಎಲ್ಲಾ ಮೇಲು ವರ್ಗದ, ಮೇಲು ಜಾತಿಯ ಮುಖ್ಯಮಂತ್ರಿಗಳು ಮಾಡಿದ್ದು ಬರೀ ತೌಡು ಕುಟ್ಟುವ ಕೆಲಸ!

ಆದ್ದರಿಂದ, ಹಿಂದುಳಿದ-ದಲಿತ ಜಾತಿಗಳಿಗೆ ಪ್ರತಿಭೆ ಇಲ್ಲ ಎಂದು ಹೇಳುವುದು ಎಷ್ಟು ಸುಳ್ಳೋ, ಹಾಗೆಯೇ ಈ ದೇಶದಲ್ಲಿ ಜಾತಿ ಆಧಾರದಲ್ಲಿ ಸಾಮಾಜಿಕ-ಆರ್ಥಿಕ ವಂಚನೆ ನಡೆಯುತ್ತಿದೆ ಎಂಬುದೂ ಅಷ್ಟೇ ಸತ್ಯ. ಮೀಸಲಾತಿ ಎಂಬ ಸಾಧನದ ಮೂಲಕ ಈ ಜಾತಿ ಆಧಾರಿತ ತಾರತಮ್ಯಗಳನ್ನು ನಿವಾರಿಸುವ ಪ್ರಯತ್ನ ಇದೆಯೇ ಹೊರತು ಪ್ರತಿಭೆ ಇಲ್ಲದಿದ್ದರೂ ನೀಡುವ ವಿಶೇಷ ಸವಲತ್ತೇನಲ್ಲ.


ಕೊನೆಗೆ ಕ್ರಿಕೆಟ್ ಬಗ್ಗೆ ಒಂದು ಮಾತು ಹೇಳಿ ಇದನ್ನು ಮುಗಿಸುತ್ತೇನೆ. ಮೀಸಲಾತಿಯ ಸೋಂಕು ಇಲ್ಲದಿರುವುದರಿಂದಲೇ ಇವತ್ತು ಭಾರತದ ಕ್ರಿಕೆಟ್ ತಂಡ ಜಯಶಾಲಿಯಾಗಿದೆ ಎಂದು ವಾದಿಸುತ್ತಿರುವವರಿಗೆ ಇಲ್ಲೊಂದು ಪ್ರಶ್ನೆ:

ನಮ್ಮ ಕ್ರಿಕೆಟ್ ತಂಡದಲ್ಲಿ 'ಪ್ರತಿಭಾನ್ವಿತರೇ' ಇದ್ದರೂ ಅವರಿಗೆಲ್ಲ ಯಾಕೆ ವಿದೇಶಿ ಕೋಚ್‌ನ ಅಗತ್ಯ?!

-ಗೌರಿ ಲಂಕೇಶ್

ಫುಟ್‌ಪಾತ್ ಸೆ ಫಾಲ್ಕೆ ತಕ್

"ಜಿಂದಗಿ ಮೆ ಆಯೆ ಹೈ ಕೊsss"



.....ಜೇನಾ ಹಿ ಪಡೆಗಾ" ಎಂಬಂತಹ ಅರ್ಥಗರ್ಭಿತ ಹಾಡುಗಳಿಗೆ ಅಷ್ಟೇ ಅರ್ಥಪೂರ್ಣ ಸಂಗೀತ ಒದಗಿಸಿದ 86 ವರ್ಷದ ನೌಶಾದ್ 'ಜಿಂದಗಿ'ಗೆ 'ಅಲ್ವಿದಾ' (ವಿದಾಯ) ಹೇಳಿದ್ದಾರೆ. ಆದರೆ ಅವರು ಹೇಳಿಬಿಟ್ಟು ಹೋಗಿರುವ ಸಂಗೀತ ಚಿರಸ್ಥಾಯಿಯಂತೆ ಚಿತ್ರ ರಸಿಕರ ಮನದಲ್ಲಿ ಗುನುಗುನಿಸುತ್ತಲೇ ಇರುತ್ತದೆ.

ಮುಂಬೈನ ಬ್ರಾಡ್‌ವೇ ಥಿಯೇಟರಿನಲ್ಲಿ 'ಬೈಜು ಬಾವ್ರಾ' ಚಿತ್ರ ನೋಡುತ್ತಿದ್ದ ನೌಶಾದ್ ಅಳಲಾರಂಭಿಸುತ್ತಾರೆ. "ಫುಟ್‌ಪಾತ್‌ನಿಂದ ಇಲ್ಲಿಗೆ ತಲುಪಲು 16 ವರ್ಷ ಹೋರಾಡಿದೆ" ಎನ್ನುವ ನೌಶಾದ್ ಅಲ್ಲಿಯವರೆಗೆ ಬ್ರಾಡ್‌ವೇ ಥಿಯೇಟರ್ ಸುತ್ತ-ಮುತ್ತಲಿನ ಫುಟ್‌ಪಾತ್‌ಗಳಲ್ಲಿ ಹಲವಾರು ರಾತ್ರಿಗಳನ್ನು ಕಳೆದಿದ್ದರು.

ಲಖನೌದಲ್ಲಿ ಹಾರ್ಮೋನಿಯಂ ರಿಪೇರಿ ಮಾಡುತ್ತಿದ್ದ ನೌಶಾದ್ ಮ್ಯೂಸಿಕ್ ಕಂಪೋಸರ್ ಆಗುವ ಮುನ್ನ ಕಷ್ಟಗಳನ್ನು ಎದುರಿಸುತ್ತಲೇ ಬಂದರು. 67 ಚಿತ್ರಗಳಲ್ಲಿ ತಮ್ಮ ಛಾಪು ಮೂಡಿಸಿದ ನೌಶಾದ್‌ಗೆ ಫಾಲ್ಕೆ ಪ್ರಶಸ್ತಿ ಸಂದಿದ್ದು ಪ್ರಶಸ್ತಿಯ ತೂಕ ಹೆಚ್ಚಿಸಿತ್ತು.

ಶಾಸ್ತ್ರೀಯ ಹಿಂದೂಸ್ತಾನಿಯೊಂದಿಗೆ ಆಧುನಿಕ ಬದುಕಿನ ಸೂಕ್ಷ್ಮಗಳನ್ನು ಬೆಸೆಯಬಲ್ಲವರಾಗಿದ್ದ ನೌಶಾದ್ ಕೊಳಲು, ಕ್ಲಾರಿಯೋನೆಟ್‌ಗಳ ಕಾಂಬಿನೇಷನ್ ಹಾಗೂ ಸಿತಾರ್, ಮೃದಂಗಗಳ ಕಾಂಬಿನೇಷನ್ನಿನಲ್ಲಿ ಚುಂಬಕ ಸಂಗೀತ ನೀಡಿದ ಮೊದಲಿಗರಾಗಿದ್ದಾರೆ.

ಮೊದಲು ಮಿಕ್ಸಿಂಗ್ ಮಾಡಿ, ನಂತರ ಧ್ವನಿ ಮತ್ತು ಸಂಗೀತವನ್ನು ಪ್ರತ್ಯೇಕವಾಗಿ ರೆಕಾರ್ಡಿಂಗ್ ಮಾಡುವುದನ್ನು ಆರಂಭಿಸಿದ್ದು ನೌಶಾದ್‌ರವರೇ.

ದಿಲೀಪ್‌ಕುಮಾರ್‌ರ ಬಹುತೇಕ ಯಶಸ್ವಿ ಚಿತ್ರಗಳ ಹಿಂದೆ ನೌಶಾದ್‌ರ ಜುಳುಜುಳು ಹರಿವ ಸಂಗೀತವಿದೆ.

"ಪ್ಯಾರ್ ಕಿಯಾ ತೊ ಡರ್‌ನಾ ಕ್ಯಾ" ಹಾಡು ಎಂದೆಂದಿಗೂ ಪ್ರೇಮಿಗಳಲ್ಲಿ ಅಮರವಾಗಿರುತ್ತದೆ.

ರಫಿ, ಆಶಾ, ಮನ್ನಾಡೇ ಹಾಡಿರುವ "ದುಃಖ್ ಭರೆ ದಿನ್ ಬೀತೆ ರೆ ಭಯ್ಯಾ" ಈಗ ನೆನಪಾಗುತ್ತಿದೆ.

ಸುನ್ನೆವಾಲೆ, ಮೇರಿ ಆವಾಜ್ ತು ಸುನಿ
ದಿಲ್ ಭಿ ಟೂಟಾ ಹೈ ಮೇರಾ
ಉಸ್ಕಿ ಭಿ ಧುಂಕಾರ್ ಸುನಿ...

-ಮಲ್ಲಿ

ಅತಿದೊಡ್ಡ ಕೆಲಸಗಳು ಒಮ್ಮೊಮ್ಮೆ ತೀರ ಸಾಧಾರಣ ಸಾಧನೆಗಳಿಂದ ಸಾಧಿಸುವುವು -ಇಂಗ್ಲಿಷ್ ಗಾದೆ

ಸುನೀಲನ ಅಡ್ಡೆಯಲ್ಲಿ ಕಾಲೇಜು ಪಡ್ಡೆಗಳು!

ದೊಡ್ಡ ಮಾರಾಮಾರಿಯೇನಲ್ಲ, ಅದು ಗಾಯಿತ್ರಿ ನಗರದ ಹಳೇ ಪಂಟರ್ ಟೀಕ್ ಜಗ್ಗನ ಹುಡುಗರಿಗೂ ಶೇಷಾದ್ರಿಪುರಂ ಕಾಲೇಜು ಹುಡುಗರಿಗೂ ನಡೆದ ಸಣ್ಣದೊಂದು ಸ್ಟ್ರೀಟ್ ಫೈಟು. ಮೇಲುನೋಟಕ್ಕಿದು ಕ್ಷುಲ್ಲಕ ಘಟನೆಯೇ. ಆದರೆ ಎರಡೂ ಗ್ಯಾಂಗುಗಳ ಬೇರುಗಳಿರುವುದು ಬೆಂಗಳೂರು ಅಂಡರ್‌ವರ್ಲ್ಡ್‌ನ ಗರ್ಭಕ್ಕಿಳಿದಿದೆ.

ಹಾಗೊಮ್ಮೆ ಬೆಂಗಳೂರಿನ ಕಾಲೇಜುಗಳಿಗಿದು ಹಬ್ಬುತ್ತೆಂದರೆ, ಅನಾಹುತ ಖಂಡಿತ!




ಇಂಥಾದೊಂದು ಅಪಾಯದ ಮುನ್ಸೂಚನೆ ಹಿಡಿದೇ ಸಿಸಿಬಿ ಪೋಲೀಸರು ರಾಜಾಜಿನಗರದ ಕೆ.ಎಲ್.ಇ. ಕಾಲೇಜು, ಸುಬ್ರಹ್ಮಣ್ಯ ನಗರದ ವಿವೇಕಾನಂದ ಕಾಲೇಜು ಮತ್ತು ಶೇಷಾದ್ರಿಪುರಂ ಕಾಲೇಜುಗಳ ಪಡ್ಡೆ ಹುಡುಗರ ಮೇಲೆ ಕಣ್ಣಿಟ್ಟಿದ್ದಾರೆಂಬುದು ಲೇಟೆಸ್ಟ್ ಸುದ್ದಿ. ತಾನು ಜೈಲಿಂದ ಹೊರಬೀಳುವುದರೊಳಗಾಗಿ ತನ್ನ ಹಳೇ ದುಷ್ಮನಿಗಳನ್ನೆಲ್ಲ ಇಂಥ ಅಪರಿಚಿತ ಕಾಲೇಜು ಹುಡುಗರನ್ನು ಬಿಟ್ಟೇ ಚುಕ್ತಾ ಮಾಡುವುದು ಬೆಕ್ಕಿನ್‌ಕಣ್ ಹಂತಕ ಸುನೀಲನ ಹುನ್ನಾರ! ಅದಕ್ಕಾತ ಬೆಂಗಳೂರಿನ ಈ ಮೂರು ಕಾಲೇಜುಗಳ ಸುತ್ತ ತನ್ನ ಬಲೆ ಬೀಸಿದ್ದಾನೆ. ತನ್ನ ದುಷ್ಮನ್ ಆದರಲ್ಲೂ ಗಾಯಿತ್ರಿನಗರದ ಜಗ್ಗನನ್ನು ಮುಗಿಸಲು ಲಕ್ಕಿ ಮತ್ತು ಸುನೀಲ ಬಳಸಿದ್ದು ಇದೇ ಕಾಲೇಜು ಹುಡುಗರನ್ನೇ ಎಂಬುದು ಕೇವಲ ಪೋಲೀಸ್ ತರ್ಕವಷ್ಟೇ ಅಲ್ಲ, ಅದಕ್ಕೆ ಇದೇ ಏಪ್ರಿಲ್ ಇಪ್ಪತ್ತೇಳರ ಬೆಳಗ್ಗೆ ಗಾಯಿತ್ರಿ ನಗರದಲ್ಲಿ ನಡೆದ ಮಾರಾಮಾರಿಯೊಂದೇ ಸಾಕು. ತಮ್ಮ ಪ್ರಸಾದಿ ಕೊಲೆಯ ನಂತರ ಎಚ್ಚರಗೊಂಡಿದ್ದ ಜಗ್ಗ ತನ್ನ ಸುತ್ತ ಭದ್ರಕೋಟೆಯನ್ನೇ ಕಟ್ಟಿಕೊಂಡ. ಮನೆಗೆ ಇನ್ನಿಲ್ಲದಂತೆ ಗ್ರಿಲ್ ಹಾಕಿಸಿದ. ಎಲ್ಲೇ ಹೋದರೂ ಕನಿಷ್ಠ ಐವತ್ತು ಮಂದಿಯ ಬೆಂಗಾವಲು. ಜಗ್ಗ ಬದುಕಿರುವವರೆಗೂ ಗಾಯಿತ್ರಿನಗರದಲ್ಲಿ ತಮ್ಮ ಬೇಳೆ ಬೇಯುವುದಿಲ್ಲ ಎಂಬುದನ್ನು ಆತನ ಬದ್ಧವೈರಿ ಲಕ್ಕಿ ಚೆನ್ನಾಗಿ ಅರಿತಿದ್ದ. ಸಾಲದ್ದಕ್ಕೆ ಜೇಕೆ ಜೊತೆ ಜಗ್ಗ ರಾಜಿಯಾದ ನಂತರ ಆತನ ಪಡೆಗೆ ಸಾಕಷ್ಟು ಧೈರ್ಯ ಮತ್ತು ಆರ್ಥಿಕ ನೆರವು ಸಿಕ್ಕಿತ್ತು.


ಇಂಥಾದ್ದೊಂದು ಸುಳಿವು ಸಿಕ್ಕಿದ್ದೇ ತಮ್ಮ ತಂತ್ರವನ್ನೇ ಬದಲಾಯಿಸಿದ ಲಕ್ಕಿ ಮತ್ತು ಸುನೀಲ ಜಗ್ಗನ ಚಲನವಲನದ ಮೇಲೆ ಕಣ್ಣಿಡಲು ಬಳಸಿದ್ದು ಕಾಲೇಜು ಹುಡುಗರನ್ನು! ಏಪ್ರಿಲ್ 27 ರ ಬೆಳಿಗ್ಗೆ ಜಗ್ಗನ ಹುಡುಗರಿಂದ ಒದೆ ತಿಂದ ಶೇಷಾದ್ರಿಪುರಂ ಕಾಲೇಜಿನ ದ್ವಿತೀಯ ಬಿ.ಕಾಂ. ವಿದ್ಯಾರ್ಥಿ ಉಮಾಶಂಕರ ಮತ್ತು ಆತನ ಸಂಬಂಧಿ ಗುರುಪ್ರಸಾದ್ ಇಬ್ಬರೂ ಜಗ್ಗನ ಬಗ್ಗೆ ಮಾಹಿತಿ ಕಲೆ ಹಾಕಲೆಂದೇ ಲಕ್ಕಿ-ಸುನೀಲರಿಂದ ನೇಮಕಗೊಂಡಿದ್ದ ಹುಡುಗರೆಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ.

ಗಾಯಿತ್ರಿನಗರದ ಒಂಬತ್ತನೇ ಕ್ರಾಸಿನಲ್ಲಿ ಜಗ್ಗನ ಮನೆಯಿದೆ. ದಿನದ ಯಾವ ಗಳಿಗೆಯಲ್ಲೂ ಕನಿಷ್ಠ ಇಪ್ಪತ್ತೈದರಿಂದ ಮೂವತ್ತು ಮಂದಿ ಹುಡುಗರ ಸರ್ಪಗಾವಲು ಅದಕ್ಕಿದೆ. ಯಾರೇ ಹೊಸ ಆಸಾಮಿಯೊಬ್ಬ ಹಾದು ಹೋದರೂ ಆತನ ಮೇಲೆ ಜಗ್ಗಿ ಗ್ಯಾಂಗ್ ಕಣ್ಣಿಡುತ್ತದೆ. ಜಗ್ಗನ ಮನೆ ಹೇಳಿಕೇಳಿ ಪಕ್ಕಾ ಜನನಿಬಿಡ ಏರಿಯಾದಲ್ಲಿದೆ. ಅದೆಂಥಾ ತಲೆಕೆಟ್ಟ ಪ್ರೇಮಿಗಳಾದರೂ ಒತ್ತೊತ್ತಾಗಿ ಮನೆಗಳಿರುವ, ಪಕ್ಕಾ ಸಂಸಾರಸ್ಥರ ಅಂಥ ಗಲ್ಲಿಗೆ ಬಂದು ರೋಮಾನ್ಸ್ ನಡೆಸುವುದಿಲ್ಲ.

ಆದರೆ ಶೇಷಾದ್ರಿಪುರಂ ಕಾಲೇಜಿನ ವಿದ್ಯಾರ್ಥಿ ಉಮಾಶಂಕರ ಏಕಾಏಕಿ ಜಗ್ಗನ ಮನೆಯೆದುರಿಗೇ ಹುಡುಗಿಯೊಬ್ಬಳನ್ನು ಬೈಕಲ್ಲಿ ಕರೆತಂದ. ಸಂಜೆಯ ತನಕ ಆಕೆಯ ಜೊತೆ ಆ ಗಲ್ಲಿಯಲ್ಲೇ ಸುತ್ತಾಡಲಾರಂಭಿಸಿದ. ಸಹಜವಾಗೇ ಜಗ್ಗನ ಹುಡುಗರಿಗೆ ವಾಸನೆ ಹತ್ತಿದೆ. ಮೂರ್ನಾಲ್ಕು ದಿನಗಳ ಕಾಲ ಮತ್ತೆಮತ್ತೆ ಅದೇ ಗಲ್ಲಿಯಲ್ಲಿ ಅದೇ ಹುಡುಗಿಯ ಜೊತೆ ಕಾಣಿಸಿಕೊಂಡ ಉಮಾಶಂಕರನನ್ನು ಸದ್ದಿಲ್ಲದೇ ಜಗ್ಗನ ಗ್ಯಾಂಗ್ ಹಿಂಬಾಲಿಸಿದೆ. ಉಮಾಶಂಕರನ ಮನೆಯಿದ್ದದ್ದು ಯಶವಂತಪುರದಲ್ಲಿ. ಓದುತ್ತಿದ್ದದ್ದು ಶೇಷಾದ್ರಿಪುರಂ ಕಾಲೇಜು. ಯಾವುದೋ ಹುಡುಗಿಯನ್ನು ಜಗ್ಗನ ಮನೆಯೆದುರು ಕರೆತಂದು ಗಲ್ಲಿ ರೋಮಾನ್ಸ್ ಮಾಡುತ್ತಿದ್ದ ಉಮಾಶಂಕರನನ್ನು ಮೊದಮೊದಲು ಮಾತಲ್ಲಿ ಎಚ್ಚರಿಸಿದ್ದಾರೆ. ಅದ್ಯಾವುದನ್ನೂ ಲೆಕ್ಕಿಸದೇ ಮತ್ತೆ ಅದೇ ರಸ್ತೆಗೆ ಬಂದ ಆತನನ್ನು ಜಗ್ಗನ ಹುಡುಗರು ಹಿಡಿದು ಬಡಿದದ್ದು ಏಪ್ರಿಲ್ ಇಪ್ಪತ್ತೇಳರ ಬೆಳಗ್ಗೆ.







ಲಕ್ಕಿ ಜಗ್ಗಿ ಪ್ರಸಾದಿ

ಅದಾಗಿ ಗಂಟೆಯಲ್ಲೇ ಉಮಾಶಂಕರ್ ತನ್ನ ಸಂಬಂಧಿ ಗುರುಪ್ರಸಾದ್ ಮತ್ತು ಕೆಲ ಹುಡುಗರ ಸಮೇತ ಜಗ್ಗನ ಹುಡುಗರ ಮೇಲೆ ದಂಡೆತ್ತಿ ಬಂದಿದ್ದಾನೆ. ಮೊದಲೇ ಸಜ್ಜಾಗಿದ್ದ ಜಗ್ಗನ ಹುಡುಗರು ಗುರುಪ್ರಸಾದ್ ಅಂಡಿಗೆ ರೇಜರ್ ಬೀಸಿ, ಉಮಾಶಂಕರನಿಗೆ ಲಾಂಗ್ ಉಲ್ಟಾ ಮಾಡಿ ಹೊಡೆದಿದ್ದಾರೆ. ಒದೆ ಬೀಳುತ್ತಿದ್ದಂತೆ ಕಾಲೇಜು ಹುಡುಗರು ಪರಾರಿಯಾಗಿದ್ದಾರೆ. ಈ ಬಗ್ಗೆ ಸುಬ್ರಹ್ಮಣ್ಯನಗರ ಪೋಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಲಾತ ತಿಂದ ಗುರು ಪಕ್ಕದ ನರ್ಸಿಂಗ್ ಹೋಮಿಗೆ ದಾಖಲಾಗಿದ್ದಾನೆ.

ಹೊಡೆದಾಟದ ವೇಳೆ ಜಗ್ಗ ತನ್ನ ಸಂಬಂಧಿಕರೊಬ್ಬರ ಮದುವೆಗೆ ಹೋಗಿದ್ದಾನೆ. ಅಣ್ಣ ಶಂಕ್ರ ಕೂಡ ಕೈಗೆ ಪೆಟ್ಟು ಮಾಡಿಕೊಂಡು ಕುಣಿಗಲ್‌ನಲ್ಲಿದ್ದ. ಯಾವಾಗ ಮನೆ ಬಳಿ ಇಂಥದೊಂದು ಅನಾಹುತ ನಡೆಯಿತೋ ತಕ್ಷಣ ಎದ್ದು ಕುಳಿತವರು ಗಾಯಿತ್ರಿನಗರದ ಬಡ್ಡಿ ಮಾಫಿಯಾಗಳಾದ ತುಳಸಿರಾಮೇಗೌಡ ಮತ್ತು ಡಾಲರ್ ಜಗ್ಗ. ಗಾಯಿತ್ರಿನಗರದ ಗ್ಯಾಂಗ್ ವಾರ್ ಬೆಂಕಿಯಲ್ಲಿ ಚಳಿ ಕಾಯಿಸಿಕೊಂಡೇ ಬಂದ ಈ ಪುರಾತನ ಪಾತಕಿಗಳಿಬ್ಬರೂ ಲಕ್ಕಿ-ಸುನೀಲರಿಗೆ ಖಾಯಂ ಅನ್ನದಾತರು!



ಇನ್ನೂ ಕುತೂಹಲಕರ ಸಂಗತಿಯೆಂದರೆ ಹುಡುಗಿಯ ಜೊತೆ ರೋಮಾನ್ಸ್ ನಟಿಸುತ್ತಲೇ ಜಗ್ಗನ ಚಲನವಲನವನ್ನು ಗಮನಿಸುತ್ತಿದ್ದ ಕಾಲೇಜು ವಿದ್ಯಾರ್ಥಿ ಉಮಾಶಂಕರ್ ಸುನೀಲನ ಶಿಷ್ಯನಾಗಿದ್ದ. ಆತನ ಜೊತೆ ಹೊಡೆದಾಟಕ್ಕೆ ಬಂದು ರೇಜರ್ ಹಾಕಿಸಿಕೊಂಡ ಗುರುಪ್ರಸಾದ್ ಬೇರೆ ಯಾರೂ ಅಲ್ಲ, ಲಕ್ಕಿ-ಸುನೀಲರ ಪಡೆಯ ಅತ್ಯಂತ ನಂಬಿಕಸ್ತ ಪಂಟರ್ ಮಾರೇನಹಳ್ಳಿ ಜಗ್ಗನ ಬಾಮೈದ!

ಮಾರೇನಹಳ್ಳಿಯ ಮಾಜಿ ಕೌನ್ಸಿಲರ್ ಕೃಷ್ಣಪ್ಪನ ಮಗನಾದ ಜಗ್ಗ ಒಂದಾನೊಂದು ಕಾಲಕ್ಕೆ ತಿಮ್ಮೇನಹಳ್ಳಿ ತಮ್ಮಯ್ಯನಿಗೆ ಸಾಥಿಯಾಗಿದ್ದ. ತಮ್ಮಯ್ಯನ ಹತ್ಯೆಯ ನಂತರ ಮಚ್ಚನೊಂದಿಗೆ ಓಡಾಡಿಕೊಂಡಿದ್ದ. ಮಚ್ಚನೂ ಮುಗಿದು ಹೋದನಂತರ ಉಳಿದವನೊಬ್ಬನೇ ಸುನೀಲ. ತನ್ನ ಸಂಬಂಧಿಗಳಾದ ಕಾಲೇಜು ಹುಡುಗರನ್ನು ಸುನೀಲನ ಪರ ಗೂಢಚರ್ಯೆಗೆ ಈತನೇ ಬಿಟ್ಟನೆ! ಬಹುಶಃ ಇದು ಗಾಯಿತ್ರಿನಗರದ ಗ್ಯಾಂಗ್ ವಾರ್‌ನ ನಿರ್ಣಾಯಕ ಘಟ್ಟ! ಒಂದೆಡೆ ಲಕ್ಕಿ-ಸುನೀಲರ ಪಡೆ ಮತ್ತೊಂದೆಡೆ ಜಗ್ಗಿ ಗ್ಯಾಂಗ್. ಹೀಗೆ ಶುರುವಾದ ಗ್ಯಾಂಗ್‌ವಾರ್ ಆರಂಭವಾಗಿದ್ದೇ ಕಾಲೇಜಿನ ಕ್ಯಾಂಪಸ್ಸೊಂದರಲ್ಲಿ!

ಅದು 2001 ರ ಮೇ ಇಪ್ಪತ್ತೊಂದನೇ ತಾರೀಖು. ರಾಜಾಜಿನಗರದ ಬಾಷ್ಯಂ ಸರ್ಕಲ್ ಸಮೀಪದ ಎಂಇಐ ಪಾಲಿಟೆಕ್ನಿಕ್ ಕಾಲೇಜಿನ ಎದುರು ಕೆಲ ವಿದ್ಯಾರ್ಥಿಗಳ ಗ್ಯಾಂಗ್ ಕಟ್ಟಿಕೊಂಡು ಲಕ್ಕಿ ನಿಂತಿದ್ದ. ಆತನ ಜೊತೆಗಿದ್ದವನು ಕ್ಯಾಪ್ಟನ್ ರಾಜ. ಪ್ರಸಾದಿ, ಚಲಪತಿ, ರಾಜೇಶ ಮತ್ತು ತಿಮ್ಮ ಸೇರಿಕೊಂಡು ಅದೆಂಥಾ ದಾಳಿ ನಡೆಸಿದರೆಂದರೆ ಲಕ್ಕಿ ಕಾಂಪೌಂಡ್ ಹಾರಿ ಓಡಿದರೂ ಬಿಡದೇ ಕತ್ತರಿಸಿದ್ದರು. ಕ್ಯಾಪ್ಟನ್ ರಾಜ ಓಡಿ ಹೋಗಿದ್ದ. ಅವತ್ತು ಲಕ್ಕಿ ಸತ್ತನೆಂದೇ ತಿಳಿದು ಪ್ರಸಾದಿ ಗ್ಯಾಂಗ್ ಬಿಟ್ಟು ಹೋಗಿತ್ತು.

ಆದರೆ ಲಕ್ಕಿಯ ಆಯುಸ್ಸು ಗಟ್ಟಿಯಿತ್ತು. ಮೂರೇ ತಿಂಗಳಲ್ಲಿ ರೆಡಿಯಾದ. ಹಾಗಂಥ ಪ್ರಸಾದಿ ಸುಮ್ಮನಾಗಲಿಲ್ಲ. ಜೈಲಿಂದ ಹೊರಬಿದ್ದಿದ್ದೇ ಲಕ್ಕಿಯ ಬಲಗೈ ಬಂಟನಂತಿದ್ದ ಗುರುನನ್ನು ಶಿವಾನಂದ ಸ್ಟೋರ್ ಬಳಿ ಹಿಡಿದು ಕತ್ತರಿಸಿದ. ಅದಾಗಿ ಕೆಲ ದಿನಕ್ಕೇ ಲಕ್ಕಿಯ ಮತ್ತೊಬ್ಬ ಶಿಷ್ಯ ಮಂಜುನಾಥನಗರದ ರಫೀಕ್‌ನನ್ನು ಪ್ರಸಾದಿ ಗ್ಯಾಂಗ್ ಕತ್ತರಿಸಿತು. ಇನ್ನು ಲಕ್ಕಿ ಸುಮ್ಮನಿರುತ್ತಾನಾ? 2003 ರ ಕನ್ನಡ ರಾಜ್ಯೋತ್ಸವ ದಿನ ಪ್ರಸಾದಿಯ ಅಕ್ಕನ ಮಗ ರಾಜೇಶನನ್ನು ಗಾಯಿತ್ರಿನಗರ

ರಾ. ಸೋಮನಾಥ್

ದಲ್ಲೇ ಅಟಕಾಯಿಸಿಕೊಂಡು ಆತನ ಕೈ ಕತ್ತರಿಸಿ ಹಾಕಿದ. ಆಗಿನ್ನೂ ಜೈಲಲ್ಲೇ ಇದ್ದ ಪ್ರಸಾದಿಯ ಇದ್ದ ಜಾಗದಲ್ಲಿ ಜಿದ್ದಿಗೆ ನಿಂತವನು ಆತನ ಅಣ್ಣ ಜಗದೀಶ ಆಲಿಯಾಸ್ ಜಗ್ಗಿ!

ರಾಜೇಶನ ಕೈ ಕತ್ತರಿಸಿದ್ದಕ್ಕೆ ಪ್ರತಿಯಾಗಿ 2003 ರ ಡಿಸೆಂಬರ್ ತಿಂಗಳಲ್ಲಿ ಲಕ್ಕಿಯ ಸ್ನೇಹಿತ ಕಾಯಿ ಅಂಗಡಿ ಇಟ್ಟುಕೊಂಡಿದ್ದ ರವಿಗೌಡ ಎಂಬಾತನನ್ನು ಜಗ್ಗಿ, ಕುಮಾರ, ತಿಮ್ಮ, ಕುಂಟ ಮತ್ತು ಹುರಿಶಿವಾ ಸೇರಿಕೊಂಡು ಚಪ್ಪಡಿ ಕಲ್ಲು ಎತ್ತಿ ಹಾಕಿ ಕೊಂದುಬಿಟ್ಟರು. ಇತ್ತ ಜೈಲಲ್ಲೇ ಪ್ರಸಾದಿ ಲಕ್ಕಿಯ ಸ್ನೇಹಿತ ಡೈರಿ ಮಹೇಶನನ್ನು ಹಿಡಿದು ಬಡಿದ.

ಇಷ್ಟೆಲ್ಲದರ ಮಧ್ಯೆ ವಿಕಾರವಾಗಿ ಬೆಳೆದು ನಿಂತವನು ಸುನೀಲ. Of course ಲಕ್ಕಿಗೆ ಆತ ಪರಿಚಯವಾಗುವ ಹೊತ್ತಿಗೆ ಸುನೀಲ ಕೂಡ ಕಾಲೇಜು ಡ್ರಾಪ್‌ಔಟ್ ಆಗಿದ್ದನಾಗನ ತಮ್ಮ ಕಿಟ್ಟಿಯ ಶಿಷ್ಯನಾಗಿದ್ದುಕೊಂಡೇ ರಾಜಾಜಿನಗರದ ಕೆಎಲ್ಇ ಮತ್ತು ವಿವೇಕಾನಂದ ಕಾಲೇಜಿನ ಪಡ್ಡೆಗಳ ಹಿಂಡನ್ನೇ ಬೆನ್ನಿಗಿಟ್ಟುಕೊಂಡಿದ್ದ. ಲಕ್ಕಿಗೆ ಭಾಷ್ಯಂ ಸರ್ಕಲ್ಲಿನ ಎಂಇಎಸ್ ಪಾಲಿಟೆಕ್ನಿಕ್ಕೇ ಅಡ್ಡೆಯಾಗಿತ್ತು. ಒಂದಾನೊಂದು ಕಾಲಕ್ಕೆ ಜಗ್ಗನ ತಮ್ಮ ಪ್ರಸಾದಿ, ಲಕ್ಕಿ ಮತ್ತು ಸುನೀಲ ಮೂವರೂ ಕ್ಲಾಸ್‌ಮೇಟುಗಳೆ. ಪ್ರಾರಂಭದಲ್ಲಿ ತನ್ನ ಸಂಬಂಧಿ ಹುಡುಗಿಯೊಬ್ಬಳನ್ನು ರೇಗಿಸುತ್ತಿದ್ದ ನರಸಿಂಹ ಎಂಬಾತನನ್ನು ಮುಗಿಸಲು ಹೋಗಿದ್ದ ಲಕ್ಕಿ ಗ್ಯಾಂಗ್‌ಗೆ ನರಸಿಂಹನ ಅಣ್ಣ ರೌಡಿ ಪ್ರಕಾಶ ಬಲಿಯಾದ. ಹಾಗೇ ಜೈಲು ಸೇರಿದ ಲಕ್ಕಿಗೆ ಪೋಲೀಸ್ ಪೇದೆ ಶೆಟ್ಟಾಳಪ್ಪನನ್ನು ಕೊಂದು ಜೈಲು ಸೇರಿದ ಸುನೀಲ ಜೊತೆಯಾದ. ಹೊರಬರುತ್ತಿದ್ದಂತೆ ಲಕ್ಕಿಯನ್ನು ಪ್ರಸಾದಿ ಗ್ಯಾಂಗ್ ಕತ್ತರಿಸಿತ್ತು. ಕ್ಷುಲ್ಲಕ ಕಾರಣಕ್ಕೆ ಶುರುವಾದ ಜಿದ್ದಾಜಿದ್ದಿಗೆ ಅರ್ಧ ಗಾಯತ್ರಿ ನಗರದ ಹುಡುಗರು ಜೈಲು ಪಾಲಾದರು. ಅದು ಅಕ್ಕಪಕ್ಕದ ಕಾಲೇಜುಗಳಿಗೂ ವಿಸ್ತರಿಸಿದ್ದು ತೀರ ಇತ್ತೀಚೆಗೆ.

2005 ರ ಹೊತ್ತಿಗೆ ಜೈಲು ಮುಗಿಸಿ ಹೊರಬಂದ ಪ್ರಸಾದಿಯನ್ನು ಗಾಂಜಾ ಕೇಸ್ ಹಾಕಿ ಮತ್ತೆ ಜೈಲಿಗಟ್ಟಿದ


ಡೆಡ್ಲಿ ಸೋಮನ ಅಪರಾವತರ?

ಬೆಂಗಳೂರಿನ ಕಾಲೇಜುಗಳ ಪೈಕಿ ಹೈಗ್ರೌಂಡ್ಸ್‌ನ ಆರ್.ಸಿ. ಕಾಲೇಜು, ರಾಜಾಜಿನಗರದ ಕೆ.ಎಲ್.ಇ. ಮತ್ತು ಮೈಸೂರ್ ಬ್ಯಾಂಕ್ ಚೌಕದ ಗ್ಯಾಸ್ ಕಾಲೇಜುಗಳೇ ಆ ಕಾಲಕ್ಕೆ ಪಾತಕಿಗಳ ನೆಲೆವೀಡಾಗಿದ್ದವು. ಅರಸು ಮುಖ್ಯಮಂತ್ರಿಯಾಗಿದ್ದಾಗ ಎಂ.ಡಿ. ನಟರಾಜ್ ಬೆನ್ನಿಗಿದ್ದ ಬಿ.ಕೆ. ಹರಿಪ್ರಸಾದ್ ಈ ಸಾಲಿನ ಮೊದಲ ಪೀಳಿಗೆಯ ವಿದ್ಯಾರ್ಥಿ ನಾಯಕ. ಆನಂತರದ್ದು ಆರ್.ವಿ. ಹರೀಶ್ ಮತ್ತು ದಿವಾಕರ ಹೆಗಡೆ ಥರದ 'ಕ್ರಿಮಿನಲ್' ವಿದ್ಯಾರ್ಥಿಗಳ ಎರಡನೇ ಪೀಳಿಗೆ.



ಕಾಲಾಪತ್ಥರ್

ಕೊತ್ವಾಲ್ ರಾಮಚಂದ್ರನನ್ನೇ ಜನರಲ್ ಹಾಸ್ಟೆಲ್ ಆವರಣದಲ್ಲಿ ಅಟಕಾಯಿಸಿಕೊಂಡಿದ್ದ ದಿವಾಕರ್ ಹೆಗಡೆ ಬೆನ್ನಿಗೆ ಸದಾ ನೂರಾರು ವಿದ್ಯಾರ್ಥಿಗಳ ಹಿಂದಿರುತ್ತಿತ್ತು.



ಮಾರ್ಕೆಟ್ ದೇವಿ ಜೊತೆ ಗೇಟ್ ಗಣೇಶ

ಆರ್.ಸಿ. ಕಾಲೇಜಿಗೇ ನುಗ್ಗಿ ಆರ್.ವಿ. ಹರೀಶ್ ಮುಖವನ್ನು ಎಕ್ಕಾಮಕ್ಕಾ ಕೊಯ್ದು ಹಾಕಿದ್ದ ಹೆಗಡೆಯ ಮೇಲೆ ಹರೀಶ್ ಐವತ್ತು ಹುಡುಗರನ್ನಿಟ್ಟುಕೊಂಡು ದಾಳಿ ನಡೆಸಿದ್ದ. ಹರೀಶನ ಪಡೆ ಕೈಕಾಲು ಕತ್ತರಿಸಿದಾಗಲೂ ಹೆಗಡೆ ಆರ್ಭಟ ನಿಲ್ಲಲಿಲ್ಲ. ಕೊನೆಗೆ ಸ್ಟಾಂಪ್ ವೆಂಡರ್ ತಂಬು ಗ್ಯಾಂಗ್ ಛೂ ಬಿಟ್ಟು, ಹರೀಶ್ ಹೆಗಡೆಯನ್ನು ಮುಗಿಸಿದ.

ಹಾಗೇ ದಿವಾಕರ್ ಹೆಗಡೆಯ ಕನ್ನಡ ಹುಡುಗರ ಪಡೆಯಲ್ಲಿ ಪಳಗಿದ್ದ ಗಿಡಿಗಿಡಿ ಕೃಷ್ಣ ಎಂಬ ದಲಿತರ ಹುಡುಗ ಮುಂದೆ ಅನಾಹುತಕಾರಿ ರೌಡಿಯಾದ. ಇದಕ್ಕೆ ಪ್ರತಿಯಾಗಿ ಹರೀಶ್ ತಮಿಳರ ಪಡೆ ಕಟ್ಟಿದ. ಬೆಕ್ಕಿನ ಕಣ್ ರಾಜೇಂದ್ರನನ್ನು ಕೆಎಲ್ಇ ಕಾಲೇಜಿನಲ್ಲಿ ಬೆಳೆಸಿದ. ಜಾಫರ್ ಷರೀಫ್ ಶಿಷ್ಯ ಚಾಂದ್ ಪಾಷಾ, ನರೇಶ, ಡೀಕೆ, ಸಂಪಂಗಿ, ಎಮ್ಮೆಲ್ಸಿ ಪುಟ್ಟಣ್ಣ, ಮಾರ್ಕೆಟ್ ದೇವಿ ಮುಂತಾದವರೆಲ್ಲ ಹೆಗಡೆ-ಹರೀಶ್ ಪರಂಪರೆಯನ್ನೇ ಮುಂದುವರಿಸಿದರು. ಬೇಸತ್ತ ಸರ್ಕಾರ ವಿದ್ಯಾರ್ಥಿ ಸಂಘಗಳ ಚುನಾವಣೆಯನ್ನೇ ನಿಷೇಧಿಸಿದ ನಂತರ ಕೆಲಕಾಲ ಬೆಂಗಳೂರು ತಣ್ಣಗಿತ್ತು. ಅದಾಗಿ ಎಷ್ಟೋ ವರ್ಷಗಳ ನಂತರ ಕಾಲೇಜು ಹುಡುಗರ 'ರೌಡಿಸಂ' ಅಂತ ತಲೆ ಎತ್ತಿದ್ದು ಡೆಡ್ಲಿ ಸೋಮನ ಕಾಲಕ್ಕೆ. ಸೋಮ ಪೋಲೀಸರ ಗುಂಡಿಗೆ ಬಲಿಯಾದ ನಂತರ ಕಾಲೇಜು ಕ್ಯಾಂಪಸ್ಸುಗಳಲ್ಲಿ ಪುಂಡಾಟಕೆಯಿರಲಿಲ್ಲ. ಈಗ 'ಹೊಡಿ ಮಗ ಕಡಿ ಮಗ' ಕಾಲ. ಸೋಮನ ಅಪರಾವತಾರವೆಂಬಂತೆ ಸುನೀಲ ಅವತರಿಸಿದ್ದಾನೆ. ಇದು ಎಲ್ಲಿಗೆ ನಿಲ್ಲುತ್ತೊ?

ಮೇಯರ್ ಚೇಂಬರಿಗೆ ಹೊಕ್ಕಿದೆ ದುಡ್ಡಿನ ದೆವ್ವ!

ಅಲ್ಲಿ ಮೈಸೂರು ಮೇಯರ್ ಭಾರತಿ ಮೈಯಲ್ಲಿ ದೇವಿ ಹೊಕ್ಕಿದ್ದಾಳೆ. ಇಲ್ಲಿ ಬೆಂಗಳೂರು ಮೇಯರ್ ಚೇಂಬರಿಗೆ ದೆವ್ವಗಳು ಹೊಕ್ಕು ಕುಳಿತಿವೆ. ಕದಿಯುವುದನ್ನು ಬಲ್ಲ ಈ ದೆವ್ವಗಳದೊಂದು ದೊಡ್ಡ ಗುಂಪೇ ಇವೆ. ಎಫ್.ಡಿ.ಸಿಗಳಾಗಿರುವ ಈ ಭ್ರಷ್ಟ ಅಧಿಕಾರಿಗಳು ಪಾಲಿಕೆಯಲ್ಲಿ 'ಬೇರುಬಿಟ್ಟು' ಕುಳಿತಿದ್ದಾರೆ; ಕರ್ಮಕಾಂಡ'ಗಳ ರೂವಾರಿಗಳಾಗಿರುವ ಈ ದುಷ್ಟರು 'ಎಲೆ' ಹಾಸಿಕೊಂಡು ಉಣ್ಣುತ್ತಲೇ ಇರುತ್ತಾರೆ. ಕಾರ್ಪೊರೇಷನ್‌ಗೆ ಬೇನಾಮಿ ದೊರೆಗಳಂತಾಗಿ ಹೋಗಿರುವ ಈ ದುಷ್ಟರೀಗ ಎರಡೂವರೆ ಲಕ್ಷದ ಕಳ್ಳ ಕೇಸಿನಿಂದ ನ್ಯೂಸ್‌ನಲ್ಲಿದ್ದಾರೆ. ಹಾಗೆಯೇ ಇನ್ನೊಂದು ಮೂಲದ ಪ್ರಕಾರ ಮಂಗಮಾಯವಾಗಿರುವ ಹಣದ ಮೊತ್ತ 25 ಲಕ್ಷ ಎಂತಲೂ ಹೇಳಲಾಗುತ್ತಿದೆ. ಆದರೆ ಇಷ್ಟೆಲ್ಲಾ ಆದರೂ ಮೇಯರ್ ಮಮ್ತಾಜ್ ಬೇಗಂ ದೂರನ್ನೇ ನೀಡಿಲ್ಲ. ತನಿಖೆ ಮಾಡಿದರೆ ಹಣದ ಮೂಲ ಯಾವುದು; ಯಾವ ದೀಲಿನದು ಎಂದು ಬಯಲಾಗುವುದರಿಂದ ಹುಚ್ಚ ಮದುವೆಲೀ ಉಂಡವನೇ ಜಾಣ ಎಂಬಂತಾಗಿ ಹೋಗಿದೆ.

ಈಗ ಶಂಕ್ರಪ್ಪ ಎಂಬ ಕಳ್ಳ ಪಿ.ಎ.ನನ್ನು ಹೆಚ್ಚುವರಿಯಾಗಿ ಮಮ್ತಾಜ್ ಬೇಗಂ ನೇಮಿಸಿ ಕೊಂಡಿದ್ದು ಸಂಶಯ ಬಲಗೊಳ್ಳಲು ಕಾರಣವಾಗಿದೆ. ದುಡ್ಡು ಕದ್ದಿರಬಹುದಾದ ಷಣ್ಮುಗಮ್ ಎಂಬ ಇನ್ನೊಬ್ಬ ದುಷ್ಟನನ್ನು ಜೊತೆಗೇ ಇಟ್ಟುಕೊಂಡಿರುವ ಮಮ್ತಾಜ್‌ಗೆ ಆದಷ್ಟೂ ಕಲೆಕ್ಷನ್ ಮಾಡಿಕೊಂಡೇ ಮೇಯರ್‌ಗಿರಿ ಮುಗಿಸುವ ಬೃಹದಾಶೆ. ಅದಕ್ಕೆ ಶಂಕ್ರಪ್ಪನೆಂಬ ಈ ಕಳಂಕಿತ ಎಫ್‌ಡಿಎ "25 ಕೋಟಿ ಸಂಗ್ರಹಿಸಿ ಕೊಡುವ" ಭರವಸೆ ನೀಡಿಯೇ ಕೆಲಸ ಶುರು ಮಾಡಿದ್ದಾನೆ. ಈ ಹಿಂದೆ ಪಿ. ಜೈರಾಜ್ ಕಮಿಷನರ್ ಆಗಿದ್ದಾಗ ಈ ಶಂಕ್ರಪ್ಪನನ್ನು ಸಸ್ಪೆಂಡ್ ಮಾಡಿ, ಪೊಲೀಸ್ ಕೇಸ್ ಸಹ ಜಡಿಯಲಾಗಿತ್ತು. ಬಹುಮಹಡಿ ಕಟ್ಟಡವೊಂದರ ಮಾಲೀಕರಿಗೆ ಬೋಗಸ್ ಸ್ವಾಧೀನಪತ್ರ ನೀಡಿದ್ದ ಶಂಕ್ರಪ್ಪ ಕಮಿಷನರ್ ಸಹಿಯನ್ನೇ ಫೋರ್ಜರಿ ಮಾಡಿದ್ದಂತಹ ಭೂಪ! ಈಗ ಇಂತಹವನನ್ನು ಕಲೆಕ್ಷನ್‌ಗೆ ಬಿಟ್ಟಿರುವ ಮಮ್ತಾಜ್ ಬೇಗಂಗೆ ದುಡ್ಡಿನ ದೆವ್ವ ಮೈ ಹೊಕ್ಕಿರುವುದು ಸ್ಪಷ್ಟ. ಮಮ್ತಾಜ್ ಬೇಗಂಗೆ ಪಿ.ಎ. ಆಗಲು ಶಂಕ್ರಪ್ಪ ಮತ್ತು ಷಣ್ಮುಗಮ್‌ರ ಮಧ್ಯೆ ಕಿತ್ತಾಟ ನಡೆದೇ ಇತ್ತು, ಆರು ತಿಂಗಳಿಂದ ಪಿ.ಎ. ಆಗಿರುವ ಷಣ್ಮುಗಮ್‌ನೂ ಸಂಗ್ರಹಣಾಶೂರನೇ. ಟೌನ್ ಪ್ಲಾನಿಂಗ್, ಅತಿಕ್ರಮಿತ ಕಟ್ಟಡಗಳು, ಕಾನೂನುಬಾಹಿರ ಕಟ್ಟಡಗಳಿಂದ ನಿತ್ಯ ಪೆಂಡಿ ಪೆಂಡಿ ಹಣ ಈ ಸೆಕ್ರೆಟರಿ ಎಂಬ ಕಳ್ಳರ ಜೇಬಿನ ಮೂಲಕ ಮೇಯರ್‌ಗಳ ಮನೆ ಸೇರುತ್ತಲೇ ಇರುತ್ತದೆ. ಶಂಕ್ರಪ್ಪ, ಷಣ್ಮುಗಮ್‌ರ ಕಿತ್ತಾಟದಲ್ಲಿ ಅಂತೂ ಹಣ ಮಾಯವಾಗಿದೆ. ಅದ್ಯಾವ ಕಳ್ಳ ಬಿಲ್ಡರ್ ಕೊಟ್ಟಿದ್ದನೋ ಎಂಬುದೆಲ್ಲ ಗೊತ್ತಾಗಬೇಕೆಂದರೆ ತನಿಖೆ ಆಗಲೇಬೇಕು. ಆಗ ಹಲವಾರು ನುಂಗಣ್ಣ ನುಂಗಮ್ಮರ ಬಂಡವಾಳ ಬಯಲಾಗುತ್ತದೆ.


ಮಮ್ತಾಜ್

ಖದೀಮ ಅಧಿಕಾರಿಗಳ ಕಿತಾಪತಿ!

ಆ ಕಾಲದಿಂದಲೂ ಕಾರ್ಪೊರೇಷನ್ನಿನಲ್ಲಿ ಗೂಟ ಜಡಿದುಕೊಂಡು ಕುಳಿತಿರುವ ದುಷ್ಟ ಕ್ಲರ್ಕ್‌ಗಳ ಕೂಟವೊಂದು ಹಣ ಎತ್ತುವುದರಲ್ಲಿ ಪರಿಣಿತಿ ಪಡೆದುಕೊಂಡಿದೆ. ಐದು ವರ್ಷಕ್ಕೆ ಬದಲಾಗುವ ಕಾರ್ಪೊರೇಟರ್‌ಗಳು ದುಡ್ಡು ಮಾಡಲು ನೆಚ್ಚಿರುವುದು ಈ ಅನುಭವಿ ದುಷ್ಟ ಕ್ಲರ್ಕ್‌ಗಳನ್ನು. ಹಣಕಾಸು ಸ್ಥಾಯಿ ಸಮಿತಿ, ಕಾಮಗಾರಿ ಸಮಿತಿ, ತೆರಿಗೆ ಸ್ಥಾಯಿ ಸಮಿತಿ, ಆರೋಗ್ಯ ಸ್ಥಾಯಿ ಸಮಿತಿಗಳಿಗೆಲ್ಲ ಸೆಕ್ರೆಟರಿಯಾಗಲು ಈ ಕಳ್ಳ ಕ್ಲರ್ಕ್‌ಗಳ ನಡುವೆ ಬಿರುಸಿನ ಸ್ಪರ್ಧೆ ನಡೆಯುತ್ತದೆ. ಮೇಯರ್‌ಗಳ ಪಿ.ಎ. ಆಗಲಂತೂ ಬಿಡ್ಡಿಂಗೇ ನಡೆಯುತ್ತದೆ. ತಮ್ಮ ಸಾಮರ್ಥ್ಯಕ್ಕನುಗುಣವಾಗಿ ಇಂತಿಷ್ಟು ಸಂಗ್ರಹಿಸಿ ಕೊಡಬಲ್ಲೆ ಎಂದು ಬಿಡ್ಡಿಂಗ್ ಮಾಡುತ್ತಾರೆ ಈ ಬಿದ್ದರು!

ಮಾಜಿ ಮೇಯರ್ ಚಂದ್ರಶೇಖರ್, 'ಗೋಲ್ಡ್' ನಾರಾಯಣಸ್ವಾಮಿಗೆ ಚೀಫ್ ರಾಜಣ್ಣನೆಂಬ ಪಿ.ಎ. ಇದ್ದ. ಪಿ.ಆರ್. ರಮೇಶಗೆ ಗುಂಡಣ್ಣನೆಂಬ ನುಂಗಣ್ಣ ಪಿ.ಎ., ಜೊತೆಗೆ ಶ್ರೀನಿವಾಸನೆಂಬ ಸಂಗ್ರಹಕಾರನಿದ್ದ. ಈಗ ಈ ಶ್ರೀನಿವಾಸ್ ಟೌನ್ ಪ್ಲಾನಿಂಗ್‌ನಲ್ಲಿ ದುಡ್ಡಿನ 'ಕ್ಲೋನಿಂಗ್' ನಡೆಸಿದ್ದಾನೆ. ಮಾಜಿ ಮೇಯರ್ ರಾಮಚಂದ್ರಪ್ಪ ನೆಚ್ಚಿದ್ದು ಲಿಂಗಣ್ಣನೆಂಬ ಇನ್ನೊಬ್ಬ ನುಂಗಣ್ಣನನ್ನು, ಹುಚ್ಚಪ್ಪನಿಗೆ ಮಳವಯ್ಯ ಎಂಬ 'ಹಾಸ್ಟ್ರ' 'ಕಲೆಕ್ಟರ್' ಆಗಿದ್ದರೆ ಪ್ರೇಮ ಕಾರ್ಯಪ್ಪಗೆ ಪುಟ್ಟರಾಜು ಎಂಬ ಪಾಪಿ ಸಕಲ ಸ್ವಾಹಾ ವಿದ್ಯೆ ಕಲಿಸಿಕೊಟ್ಟಿದ್ದ. ಈ ಖದೀಮ ಪಿ.ಎ.ಗಳ ಸಾಲಿನಲ್ಲಿ ಶಂಕ್ರಯ್ಯನೆಂಬುವನೂ ಚಾಲಾಕಿ ಗಿರಾಕಿಯೇ!

ಈಗ ಕುಂಬಳಕಾಯಿ ಕಳ್ಳಿ ಎಂದರೆ ಬೆನ್ನು ಮುಟ್ಟಿಕೊಳ್ಳುತ್ತಿರುವ ಮಮ್ತಾಜ್ ಬೇಗಂಗೆ ಷಣ್ಮುಗಮ್, ಶಂಕ್ರಪ್ಪರೆಂಬ ಖದೀಮ ಜೋಡಿ ಅದೆಷ್ಟು ಹಣ ಸಂಗ್ರಹಿಸಿ ಕೊಡುವ ವಾಗ್ದಾನ ಮಾಡಿದೆಯೋ?


ಬೆಂಗಳೂರಿನ ಎಂ.ಜಿ. ರೋಡ್ ತೊಳೆಯುವುದಾಗಿ ಹುಚ್ಚುಚ್ಚಾಗಿ ಮಾತಾಡುವ ಮೇಯರಮ್ಮ ಮೊದಲು ತನ್ನ ಚೇಂಬರ್ ತೊಳೆದುಕೊಳ್ಳಲಿ. ಇಲ್ಲಾಂದ್ರೆ ಶಂಕ್ರಪ್ಪ, ಷಣ್ಮುಗಮ್‌ಗಳು ಪೈಪೋಟಿಗೆ ಬಿದ್ದು ಇಡೀ ಪಾಲಿಕೆಯನ್ನೇ ಗುಡಿಸಿ ಗುಂಡಾತರ ಹಾಕಲಿದ್ದಾರೆ. ಈಗ ಮತ್ತೆ ಪಾಲಿಕೆ ಕಮಿಷನರ್ ಆಗಿರುವ ಜೈರಾಜ್‌ಗೆ ಇದೆಲ್ಲ ಗೊತ್ತಿಲ್ಲವಾ?

–ಪಿ.ಕೆ. ಮಲ್ಲನಗೌಡರ್

ಸುಬ್ರಹ್ಮಣ್ಯ ನಗರದ ಇನ್ಸ್‌ಪೆಕ್ಟರ್ ವೀರಭದ್ರೇಗೌಡ 'ಮತ್ತೆಂದಾದರೂ ಗಾಯಿತ್ರಿನಗರಕ್ಕೆ ಕಾಲಿಟ್ಟೆಯೋ ಎನ್‌ಕೌಂಟರ್, ಮಾಡಿಬಿಡ್ತೀನಿ ಹುಷಾರ್' ಎಂದು ಎಚ್ಚರಿಸಿದ್ದಾರೆ. ಆನಂತರ ಬಿಡುಗಡೆಯಾದ ಪ್ರಸಾದಿ ಕುಣಿಗಲ್‌ನ ದೊಡ್ಡಕಲ್ಲಳ್ಳಿ ಸೇರಿಕೊಂಡ. ಹಾಗೆ ದೂರದ ಹಳ್ಳಿಯೊಂದರಲ್ಲಿ ಭೂಗತನಾಗಿದ್ದ ಪ್ರಸಾದಿಯನ್ನು ಲಕ್ಕಿಗೆ ಮುಗಿಸಲೇಬೇಕಿತ್ತು.

ಇದೇ ಹೊತ್ತಿಗೆ ಚಿಕ್ಕನ ಕಣ್ ರಾಜೇಂದ್ರನನ್ನು ಮುಗಿಸಿ ಜೈಲು ಪಾಲಾಗಿದ್ದ ಸುನೀಲನಿಗೆ ಅಂಡರ್ ವರ್ಲ್ಡ್‌ಗೆ ಪರಿಚಯವಿಲ್ಲದ, ಪೊಲೀಸರ ಕಣ್ಣಿಗೆ ಬೀಳದ, ಹಿಂದ್ಯಾವುದೇ ಕೇಸಲ್ಲಿ ಸಿಕ್ಕಿಬೀಳದ ಕಾಲೇಜು ಹುಡುಗರದೇ ಪಡೆಯೊಂದನ್ನು ಕಟ್ಟಬೇಕೆಂಬ ಐಡಿಯಾ ಹೊಳೆದಿರಬೇಕು. ರಾಜೇಂದ್ರನನ್ನು ಕೊಂದ ಮೇಲೆ ಸುನೀಲನಿಗೆ ಸಿಕ್ಕ ಪ್ರಚಾರದಿಂದಾಗಿ ಬೆಂಗಳೂರಿನ ಅನೇಕ ಕಾಲೇಜು ಪಡ್ಡೆಗಳ ಪಾಲಿಗೆ ಆತನೇ 'ಹೀರೋ' ಆಗಿಬಿಟ್ಟ. ಪರಪ್ಪನ ಅಗ್ರಹಾರ ಜೈಲಿನ ಸುತ್ತ ಸುನೀಲನಿಗೆ 'ಎಂಟ್ರಿ' ಹಾಕಲು ಬರುತ್ತಿದ್ದ ಕಾಲೇಜು ಹುಡುಗರ ಹಿಂಡೇ ಜಮೆಯಾಗಿರುತ್ತಿತ್ತು. ಆತನನ್ನು ಕೋರ್ಟಿಗೆ ಕರೆ ತಂದಾಗಲಂತೂ ಇಡೀ ಕೋರ್ಟ್ ಆವರಣವೇ ಕಾಲೇಜು ಕ್ಯಾಂಪಸ್ಸಿನಂತಾಗಿತ್ತು.

ಇಲ್ಲಿಗೆ ಆರು ತಿಂಗಳ ಹಿಂದೆ ಇದನ್ನೆಲ್ಲ ಗಮನಿಸಿದ್ದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು 'ಕಾಲೇಜು ಪಡ್ಡೆಗಳ ಸುನೀಲನ ಕ್ರೇಜ್' ಮೇಲೆ ಕಣ್ಣಿಡುವಂತೆ ಸಿಸಿಬಿಯ ಪೊಲೀಸರಿಗೆ ಸೂಚನೆ ಕೊಟ್ಟಿದ್ದರು. ಈಗ ಗಾಯಿತ್ರಿನಗರದಲ್ಲಿ ನಡೆದಿರುವುದು ಅದಕ್ಕೆ ಸಮರ್ಥನೆಯಂತಿದೆ. ಜಗ್ಗನ ಚಲನವಲನದ ಮೇಲೆ ಕಣ್ಣಿಡಲು ಕಾಲೇಜು ಹುಡುಗರನ್ನು ಸುನೀಲನ ಗ್ಯಾಂಗ್ ಬಳಸಿದ್ದರ ಪ್ರತಿಫಲವಾಗಿ ಶೇಷಾದ್ರಿಪುರಂ ಕಾಲೇಜು ವಿದ್ಯಾರ್ಥಿ ಒದೆ ತಿಂದ. ದುರಂತವೆಂದರೆ, ಕಾಲೇಜು ವಿದ್ಯಾರ್ಥಿಗಳ ಮೂಲ ಕೆದಕಬೇಕಿದ್ದ ಸುಬ್ರಹ್ಮಣ್ಯನಗರದ ಇನ್ಸ್‌ಪೆಕ್ಟರ್ ತಮ್ಮಣ್ಣ ಲಕ್ಕಿ ಸುನೀಲರ ಪೋಷಕರಾದ ಫೈನಾನ್ಸಿಯರ್ ತುಳಸಿರಾಮೇಗೌಡ ಮತ್ತು ಡಾಲರ್ ಜಗ್ಗನ ಹಂಗಿಗೆ ಬಿದ್ದು ಘಟನೆಗೆ ಸಂಬಂಧವೇ ಇಲ್ಲದ ಪ್ರಸಾದಿ ಅಣ್ಣಂದಿರಾದ ಜಗ್ಗ, ಶಂಕ್ರರ ಮೇಲೆ ಕೇಸು ಜಡಿದಿದ್ದಾರೆ.


ತುಳಸೀರಾಮೇಗೌಡ

ತಾನಿಲ್ಲದ ವೇಳೆಯಲ್ಲಿ ತನ್ನ ಹುಡುಗರು ತಂದಿಟ್ಟ ಫಜೀತಿಯಿಂದಾಗಿ ಬ್ರೇಕ್ ಜಗ್ಗ ಸದ್ಯ ಗಾಯಿತ್ರಿನಗರಕ್ಕೆ ಕಾಲಿಡುವಂತಿಲ್ಲ. ಈತನ ಅಣ್ಣ ಶಂಕ್ರ ಜೈಲು ಪಾಲಾಗಿದ್ದಾನೆ. ಪ್ರಶ್ನೆ ಇದಲ್ಲ, ಹಿಂದೆ ಗುರುವಿದ್ದು, ಗುರಿಯೂ ಇದ್ದು ಎಸ್.ಎಫ್.ಐ., ರೈತ ಚಳುವಳಿ, ದಲಿತ ಚಳವಳಿಗಳ ಆದರ್ಶವಿದ್ದ ಕಾಲೇಜು ರಂಗಕ್ಕೆ ಈಗ ರೌಡಿ ಸುನಿಲನೇ ಆದರ್ಶವಾದರೆ ಗತಿಯೇನು?

'ಹೊಡಿಮಗ ಕಡಿಮಗ' ಕಲ್ಚರ್ ಕಾಲೇಜು ಕ್ಯಾಂಪಸ್ಸಿಗೂ ಎಂಟ್ರಿಯಾಗಿದೆಯೆಂದರೆ ಕಾಲೇಜು ಪಾಡೇನು?

ಕಾಲಾಪತ್ಥರ್‌ನ ತೆಕ್ಕೆ ಮಾರ್ಕೆಟ್ ದೇವಿಯ ರಕ್ಷೆ


ಆರ್. ವಿ. ಹರೀಶ್

ಸದ್ಯ ಸುನೀಲನನ್ನು ಹಳೇ ಪಾತಕಿ ಕಾಲಾಪತ್ಥರ್ ತನ್ನ ಬುಟ್ಟಿಗೆ ಹಾಕಿಕೊಂಡಿದ್ದಾನೆಂದೂ, ಆತನೇ ಸುನೀಲನ ಹಾಲಿ ಗಾಡ್‌ಫಾದರ್ ಎಂದೂ ಅಂಡರ್‌ವರ್ಲ್ಡ್ ಮೂಲಗಳು ಹೇಳುತ್ತಿವೆ. ಸುನೀಲನನ್ನು ಮುಂದಿಟ್ಟುಕೊಂಡೇ ತನ್ನ ಹಳೇ ದುಷ್ಮನ್ ಪ್ರವೀಣನನ್ನು ಮುಗಿಸುವುದು ಕಾಲಾಪತ್ಥರ್ ಹುನ್ನಾರ. ಜೊತೆಗೆ ತನ್ನ ಬಂಟ ಮಾರ್ಕೆಟ್‌ವೇದಿಗಾಗಿ ಕಲಾಸಿಪಾಳ್ಯದ ತರಕಾರಿ ಮಂಡಿಯ ಕೂಲಿ ಮಾಫಿಯಾ ಗೇಟ್ ಗಣೇಶನನ್ನು ಸುನೀಲನಿಗೆ ಮುಗಿಸಬೇಕಿದೆ. ಕೆ.ಆರ್. ಮಾರುಕಟ್ಟೆಯ ಮತ್ತೊಬ್ಬ ಪಂಟರ್ 'ಮಾರ್ಕೆಟ್ ವೇಲು'ವಿನ ತಲೆ ತೆಗೆದರೆ ಇಡೀ ಕಲಾಸಿಪಾಳ್ಯ ಸುನೀಲನ ತೆಕ್ಕೆಗೆ ಬರುತ್ತದೆ. ಅಲ್ಲಿಗೆ ಮಾರ್ಕೆಟ್ ವೇದಿ ಯನ್ನು ಪ್ರತಿಷ್ಠಾಪಿಸಿ, ಗಾಯಿತ್ರಿನಗರದ ಜಗ್ಗನನ್ನು ಮುಗಿಸಿಬಿಟ್ಟರೆ ಸುನೀಲನ ಬಹುತೇಕ ಲೆಕ್ಕ ಚುಕ್ತಾ ಆದಂತೆಯೇ.

ಉಳಿದದ್ದೇನಿದ್ದರೂ ಪುಟ್ಟಸ ಹಂತಕರ ಬಾಕಿ. ಅದನ್ನು ಕೊರಂಗು-ಕೋತಿರಾಮರ ಪಡೆಯೇ ನಿಭಾಯಿಸುತ್ತದೆಯಾದ್ದರಿಂದ ಸುನೀಲನಿಗೆ ಆ ಮಟ್ಟದ ತಲೆ ಬಿಸಿಯಿಲ್ಲ. ಹೀಗೆ ಕಾಲಾಪತ್ಥರ್ ಮತ್ತು ಸುನೀಲನ ಮಧ್ಯೆ ದೋಸ್ತಿ ಏರ್ಪಡಿಸಿದ್ದು ಮಾರ್ಕೆಟ್ ದೇವಿ! ಹಾಗಂತ ಸುನೀಲ ಅಂಡರ್‌ವರ್ಲ್ಡ್‌ನ ಎಲ್ಲರನ್ನೂ ನಂಬುವ ಸ್ಥಿತಿಯಲ್ಲಿಲ್ಲ. ಅದಕ್ಕೆಂದೇ ಆತ ಕಾಲೇಜು ಹುಡುಗರ ಹೊಸ ಟೀಮ್ ಕಟ್ಟುತ್ತಿದ್ದಾನೆ. ಇಲ್ಲಿಗೆ ಎಂಟು ತಿಂಗಳ ಹಿಂದೆ ವಿವೇಕಾನಂದ ಕಾಲೇಜಿನ ಎರಡು ತಂಡಗಳ ಮಧ್ಯೆ ಮಚ್ಚು-ಕೊಚ್ಚು ಶೈಲಿಯ ಹೊಡೆದಾಟವಾಗಿದೆ. ಈ ಫೈಟ್ ಸತೀಶ ಎಂಬ ವಿದ್ಯಾರ್ಥಿಯ ಗ್ಯಾಂಗಿಗೆ ಸುನೀಲನ ಬೆಂಬಲವಿತ್ತು.



ಸುನೀಲನ ಎಂಟ್ರಿಯಾದ ಮೇಲೆ ಪ್ರಕಾಶನಗರದ ಹಂತಕ ಟಪ್ಪು ಕೆ.ಎಲ್.ಇ. ಕಾಲೇಜಿನಲ್ಲಿ ಅಷ್ಟೆ ಹಾಕುವುದನ್ನೇ ನಿಲ್ಲಿಸಿಬಿಟ್ಟ. ಇನ್ನು ಶೇಷಾದ್ರಿಪುರಂ ಕಾಲೇಜಿಗಂತೂ ಸುನೀಲನೇ ಹೀರೋ!

ಮೈಸೂರ್ ಮೇಯರ್ ಮೈಮೇಲೆ ಚಾಮುಂಡೇಶ್ವರಿ ತಾಯಿ

ಚಾಮುಂಡೇಶ್ವರಿ ತಾಯಿ ಭಾರತಿಯವರ ಮೈ ಹೊಕ್ಕಿದ್ದಾಳೆ. ಮೊನ್ನೆ ಐದನೇ ತಾರೀಖು ಕರಗೋತ್ಸವದಲ್ಲಿ ಹಳದಿ ಸೀರೆಯುಟ್ಟು ಹಾಲಿನ ಕೊಡ ಹೊತ್ತು ಹರಕೆ ತೀರಿಸುತ್ತಿದ್ದ ಭಾರತಿಯಮ್ಮನ ಆವೇಶ ನೋಡಬೇಕಿತ್ತು ನೀವು. ಈಯಮ್ಮ ಇನ್ನೇನು ಕುಸಿದೇ ಬಿಟ್ಟಳು ಎನಿಸುತ್ತಿದ್ದಂತೆ ಪಕ್ಕದಲ್ಲಿದ್ದವರು ಈ 'ದೇವಿ'ಯನ್ನು ಎತ್ತಿ ನಿಲ್ಲಿಸುತ್ತಿದ್ದರು.

ಮೈಸೂರಿನ ಚಾಮುಂಡೇಶ್ವರಿ ಹೊಕ್ಕಿರುವುದು ಯಾವುದೋ ಆರ್ಡಿನರಿ ಭಾರತೀಯ ಮಹಿಳೆಯ ಮೈಯನ್ನಲ್ಲ. ಈ ದೇವಿ ಭಾರತಿ ಮೈಸೂರು ಮಹಾನಗರ ಪಾಲಿಕೆಯ ಮೇಯರ್! ಮೈಸೂರಿನ ಪುರಮಾತೃ ಸ್ಥಾನದಲ್ಲಿರುವ ರಾಜಕಾರಣಿ!

ಬೆಂಗಳೂರಲ್ಲಿ ಮೇಯರ್ ಕಚೇರಿಯಿಂದಲೇ ದುಡ್ಡು ಕದಿಯುವ ಚಾರ್‌ಸೋಬೀಸ್ ಸೆಕ್ರೆಟರಿಗಳಿಗೂ ಈ ಮೈಸೂರ್ ಮೇಯರಮ್ಮನನ್ನು ಯಾಮಾರಿಸಲಾಗುವುದಿಲ್ಲ. ಏಕೆಂದರೆ ತಾಯಿ ಚಾಮುಂಡೇಶ್ವರಿಯೇ ಮೇಯರ್ ಭಾರತಿಯವರ ಸಪೋರ್ಟಿಗೆ ನಿಂತು ಬಿಟ್ಟಿದ್ದಾಳೆ!



ಮುಂದಿನ ತಿಂಗಳು 20 ನೇ ತಾರೀಖಿಗೆ ಮೇಯರ್‌ಗಿರಿ, ಕಾರ್ಪೊರೇಟರ್‌ಗಿರಿ ಎಲ್ಲವೂ ಮುಗಿದು ಎಲೆಕ್ಷನ್ ಬರುತ್ತಿರುವ ಈ ವೇಳೆಯಲ್ಲಿ ಮೇಯರಮ್ಮನ ದೇವರಾಟ ನೋಡಿ ಜನ ಬಿದ್ದು ಬಿದ್ದು ನಗ್ತಿದ್ದಾರೆ. ಅನುಕಂಪ ಗಿಟ್ಟಿಸಲು ಕಳ್ಳಾಟ ನಡೆಸಿರುವ ಈ ಮೇಯರಮ್ಮ ದಿಢೀರನೆ ಮೆಂಟಲ್ ಶಾಕ್‌ಗೆ ಒಳಗಾಗಿರಬಹುದೆ ಎಂಬ ಸಂಶಯವೂ ಜನರನ್ನು ಕಾಡುತ್ತಿದೆ. ಸರಿಯಾದ ಮಾರ್ಗದರ್ಶನವಿಲ್ಲದೇ ಹೋಗಿದ್ದೇ ಮೇಯರಮ್ಮ ಈ ಸ್ಥಿತಿಗೆ ಮುಟ್ಟಲು ಕಾರಣವಾಗಿದೆ. ಈಕೆಯ ಗಾಡ್ ಫಾದರ್‌ಗಳಾದ ಎಚ್. ವಿಶ್ವನಾಥ್, ತನ್ವೀರ್ ಸೇಠ್‌ಗಳೇ ಈಗ ಈ ಚಾಮುಂಡಮ್ಮನ ಮುಂದೆ ಕರಗ ಉತ್ಸವ ಮಾಡಿದರೂ ಈಯಮ್ಮ ನೆಟ್ಟಗಾಗುವಂತಿಲ್ಲ.

ಎಸ್.ಟಿ. ಸಮುದಾಯದ ಮೀಸಲಾತಿಯಿಂದ ಮೇಯರ್‌ಗಿರಿ ಏರಿದ ಭಾರತಿ ನೋಡಲು 'ಪೆದ್ದು' ಎನಿಸಿದರೂ ಹಣ ಮಾಡುವುದರಲ್ಲಿ ಬೆಂಗಳೂರಿನ ಭಯಂಕರ ಮೇಯರ್‌ಗಳನ್ನು ಮೀರಿಸಬಲ್ಲ ಚಾಲಾಕಿತನವನ್ನು ಮೈಗೂಡಿಸಿಕೊಂಡಾಕೆ. ಕಳೆದ ಸಾರಿ ಕಾಂಗ್ರೆಸ್-ಎಬಿಪಿಜೆಡಿಯ ಲಿಂಗಾಯತರೆಲ್ಲ ಮೇಯರ್ ಗಾದಿಯ ಮೇಲೆ ಮತ್ತೆ ಅಧಿಪತ್ಯ ಸಾಧಿಸಲು ಹೊಂಚು ಹಾಕಿದ್ದಾಗ ಸೈಲೆಂಟ್ ಆಗಿ ಎಸ್.ಟಿ. ಮೀಸಲಾತಿ ತಂದಿದ್ದು ಎಚ್. ವಿಶ್ವನಾಥ್! ಧರ್ಮಸಿಂಗ್‌ಗೆ ಮನವರಿಕೆ ಮಾಡಿ ಮೀಸಲು ತಂದ ಎಚ್. ವಿಶ್ವನಾಥ್ ಪ್ರಬಲ ಜಾತಿಗಳಿಗೆ ಪೆಟ್ಟು ನೀಡಿದ್ದರು. ಬೇರೆ ಸ್ಪರ್ಧಿಗಳಿಲ್ಲದೇ ಅನಾಯಾಸವಾಗಿ ಮೇಯರ್‌ಗಿರಿ ಭಾರತಿ ಪಾಲಾಗಿತ್ತು. ಇದು ಪ್ರಬಲ ಜಾತಿಗಳ ದೊಣ್ಣೆ ನಾಯಕರ ಕೆಂಗಣ್ಣಿಗೂ ಕಾರಣವಾಗುತ್ತಾ ಬಂದಿತ್ತು.

ಅತಿಕ್ರಮಿತ ಕಟ್ಟಡಗಳನ್ನು ತೆರವುಗೊಳಿಸುತ್ತಾ, ಪಾಲಿಕೆಯ ಆಸ್ತಿಗಳನ್ನು ರಕ್ಷಿಸುತ್ತಾ ನಡೆದಿದ್ದ ಹಿಂದಿನ ಕಮಿಷನರ್ ಎ.ಬಿ. ಇಬ್ರಾಹಿಂಗೂ ಆರಂಭದಲ್ಲಿ ಪೂರ್ಣ ಬೆಂಬಲ ನೀಡಿದ ಭಾರತಿ ಜನಸಾಮಾನ್ಯರ ಪ್ರೀತಿಗೆ ಪಾತ್ರವಾಗಿದ್ದರು. ರಸ್ತೆ ಬದಿ ವ್ಯಾಪಾರ ಮಾಡುತ್ತಿದ್ದ ತಮ್ಮದೇ ಜಾತಿಯವರು ಅಂಗಡಿಗಳನ್ನು ಕಳೆದುಕೊಂಡಾಗ, ಭಾರತಿ ತನ್ನ ಜನಾಂಗದ ಬೆಂಬಲವನ್ನು ಕಳೆದುಕೊಳ್ಳಬೇಕಾಯ್ತು. ಮುಂದೆ ಹಣದಾಶೆಗೆ ಬಿದ್ದ ಮೇಯರ್ ಮೇಡಂ ಕಮಿಷನರ್ ಇಬ್ರಾಹಿಂ ವಿರುದ್ಧ ಪಿತೂರಿ ಮಾಡತೊಡಗಿದ್ದರು. ದೇವರಾಜ್ ಮಾರ್ಕೆಟಿನಲ್ಲಿ ಲೈಸೆನ್ಸ್ ನವೀಕರಿಸದೇ ವ್ಯಾಪಾರ ಮಾಡುತ್ತಾ ಬಂದಿದ್ದ 48 ಸಾವಿರ ವ್ಯಾಪಾರಿಗಳಿಗೆ ಇಬ್ರಾಹಿಂ ಶಾಕ್ ನೀಡಿದ್ದರು. ಆಗ ವ್ಯಾಪಾರಿಗಳಿಂದ 'ದಕ್ಷಿಣೆ' ಪಡೆದ ಈ ಚಾಮುಂಡಮ್ಮ ಯಾರಿಗೂ 'ಉತ್ತರ' ನೀಡದಷ್ಟು ಗರ್ವ ಬೆಳೆಸಿಕೊಂಡುಬಿಟ್ಟರು.

ಮಕ್ಕಾಜಿ ಚೌಕ್ ಕಾಂಪ್ಲೆಕ್ಸ್‌ನ ಹಳೆ ಕಟ್ಟಡಗಳನ್ನು ಕಮಿಷನರ್ ಒಡೆಸಿ ಹಾಕುತ್ತಿದ್ದಾಗಲೂ ಕಳ್ಳ ವ್ಯಾಪಾರಿಗಳ ಜೊತೆ ಮೇಯರಮ್ಮ ನಿಂತೇ ಬಿಟ್ಟರು; ಊಟಕ್ಕೂ ಕುಂತೇ ಬಿಟ್ಟರು! ಬಹುತೇಕ ಕಡೆ ಮಹಿಳಾ ಪ್ರತಿನಿಧಿಗಳ ಹಿಂದೆ ಅವರ ಗಂಡಂದಿರು ಡ್ರೈವಿಂಗ್ ಸೀಟಿನಲ್ಲಿರುತ್ತಾರೆ. ಆದರೆ ಭಾರತಿ ಪವರ್‌ಫುಲ್ ಹೆಂಡತಿ. ಗಂಡನಿಗೆ ಎರಡನೆ ಮದುವೆ ಮಾಡಿಸಿದ ಸಮಾಜ ಕಲ್ಯಾಣ ಕೆಲಸವೂ ಭಾರತಿಯವರ ಹೆಸರಲ್ಲಿದೆ! 'ದಕ್ಷಿಣೆ'ಯ ಉತ್ತರಾದಿತ್ವವನ್ನು ಗುತ್ತಿಗೆ ಹಿಡಿದ ಮೇಡಮ್ಮು ಸೀದಾ ಸಿಎಂ ಮೇಲೆ ಒತ್ತಡ ತಂದು ಪ್ರಾಮಾಣಿಕ ಕಮಿಷನರ್ ಇಬ್ರಾಹಿಂರನ್ನು ಎತ್ತಂಗಡಿ ಮಾಡಿಸುವ ಮೂಲಕ ಮೈಸೂರಿಗರ ಟೀಕೆಗೆ ಒಳಗಾಗಿಬಿಟ್ಟರು. ಮೇಯರಮ್ಮನ ಶ್ರೀಮಂತಿಕೆ ಹೆಚ್ಚಿದಂತೆ ಆಕೆಯ ಸಮುದಾಯದವರು ಆಕೆಯಿಂದ ದೂರವಾಗತೊಡಗಿದರು. ಈಗ ಎಲೆಕ್ಷನ್ ಭಯಕ್ಕೆ ಬಿದ್ದಿರುವ ಭಾರತಿ ಮೇಡಮ್ ಮೈಯಲ್ಲಿ ಚಾಮುಂಡೇಶ್ವರಿಯನ್ನು ಹೊಕ್ಕಿಸಿಕೊಂಡು ಪ್ರಚಾರ, ಅನುಕಂಪ ಗಿಟ್ಟಿಸಲು ಹೋಗಿ ಹಾಸ್ಯಾಸ್ಪದವಾಗುತ್ತಿದ್ದಾರೆ.

ಬೆಟ್ಟದಿಂದ ಕೆಳಗಿಳಿದು ಕಾರ್ಪೊರೇಷನ್ ಹೊಕ್ಕಿರುವ ಚಾಮುಂಡಿದೇವಿ ಸದ್ಯಕ್ಕೆ ಮತ್ತೆ ಬೆಟ್ಟ ಹತ್ತುವಂತೆ ಕಾಣುತ್ತಿಲ್ಲ! ಮೇಡಮ್ ಭಾರತಿಗೆ "ನಮಸ್ಕಾರ" ಮಾಡೋಣವೇ? ■

ಇದೊಂತರ ವಾಲಿ ಸುಗ್ರೀವನ ಕತೆಯಂಗಾಯ್ತು ಕಂಡ್ಯ

ಬಯಲು ಸೀಮೆಯ ಕಟ್ಟೆ ಪುರಾಣ

ಸೋನೆ ಮಳೆಯಿಂದ ಭುಗಿಲೆದ್ದ ಮಣ್ಣಿನ ವಾಸನೆಯನ್ನು ಮೂಗರಳಿಸಿ ಹೀರುತ್ತ ಕುಳಿತಿದ್ದ ಕಾಳಮಾವ

"ಇನ್ನೊಂದೀಟು ಹವವಾಗ್ಯೂದಿದ್ರೆ ಜ್ವಾಳ ಯಸ್ತು ಬುಡಬವ್ಪುದಿತ್ತು ಕಂಡ್ಯೆ" ಎಂದ.

"ಊ ಇದೊಂತರ ಅತ್ತಗೂ ಅಲ್ಲ ಇತ್ತಗೂ ಅಲ್ಲ ಅನ್ನಂಗಾಯ್ತು."

"ಹುಯ್ದಿದಿರೊ ಯಾತಂಗಾದಿರಿ?" ಎಂದ ಉಗ್ರಿ.

"ಅಂಗಲ್ಲ ಕಂಡ್ಯ, ಮುಂಗಾರು ಮಳೆ ಯಾವತ್ತು ಬಂದ್ರು ಹಾಯ್ಕಂಡು ಚಚ್ಚ ಬುಟ್ಯೋಯ್ತದೆ. ಊರ್‍ಲ್ಲೆಗಲ ಕಸಕಡ್ಡಿಯಲ್ಲ ಕೊಚಗಂಡೋಗಿ, ಮರಗಿಡ ಗುಡಿ ಗುಂಡಾರ್‍ಗಲ್ಲ ತ್ವಳಕಂಡು ದಿಕಾವಾಗಿ ಕಾಣ್ತವೆ. ಹಿಂಗೆ ಮಕ್ಕುಗದೋದ್ರೆ . ಮಳೆ ಅನ್ನಿಸಿಗಂಡತೆ" ಎಂದ ಕಾಳಮಾವ.

"ಕಾಲ ಕೆಟ್ಟಂಗೆ ಮಳೆಗಾಲ ಕೆಟ್ಟೊಗ್ಯದೆ ಬುಡು" ಎಂದ ಸೀರ.

"ಕಾಲ ಕೆಟ್ಟು ಏಟು ದಿನಾಯ್ತು. ನಿನಿಗಿವತ್ತು ಗೊತ್ತಾಗ್ಯದಲ್ಲೊ?" ಎಂದ ಉಗ್ರಿ.

"ಸೀರ ಮಾವ ಅವತ್ತಿಂದ ಅಂಗಂತಲೇ ಅವುನೆ ಕಂಡ್ಯ. ಯಾವತ್ತಿಂದ ಅಂತೀ? ಬಂಬಾಯಿಲಿ ಅವುನ್ಯಾರನೊ ತಮ್ಮನೆ ಬಂದೂಕ ತಗಂಡು ವಡದಾಕಿದನಂತಲ್ಲ, ಅವತ್ತಿಂದ ಅಂಗತಲೇ ಅವುನೆ."

"ಅದ್ಯಾಕಂಗಂತನೆ ಗೊತ್ತೇನೆ? ಹ್ವಡದಾಡಿಕಂಡು ಸತ್ತೋರು ರಾಮುನ ಪಾರ್ಟಿಯೋರು. ಬಾಯಿಬುಟ್ರೆ ಸಾಕು ರಾಮರಾಜ್ಯ ತತ್ತಿವಿ ಅಂತಿದ್ರು. ಅಂಥೋರ ಮನೆಲಿ ತಮ್ಮನೇ ಅಣ್ಣನ್ನ ಪಿಸ್ತೂಲ್ ತಗಂಡು ಮುಗಿಸಿದ್ರೆ ಇದ ಗಾಚಾರದ ಮ್ಯಾಲಾಕದೊ, ಕಾಲದ ಮ್ಯಾಲಾಕದೊ, ಅಥವಾ ಅಣ್ಣನ ಮ್ಯಾಲೆ ಗುಂಡಾರಿಸಿದ ತಮ್ಮನಿಗೆ ತಲೆಕೆಟ್ಟದೆ ಅಂತ ತಿಳಕಳದೊ ಒಂದೂ ಗೊತ್ತಾಯ್ತಯಿಲ್ಲ ಹೋಗತ್ತಗೆ."

"ಅದ್ಯಾಕ್ಲ ಸಾಯಿಸ್ತ ಅಣ್ಣುನ್ನ ಅವುನು?" ಎಂದಳು ಜುಮ್ಮಿ.

"ಸರಿಯಾಗಿ ಪಾಲಾಗಿರಲಿಲವಂತೆ ಕಣೆ. ತಮ್ಮನಿಗೆ ಸರಿಯಾಗಿ ಪಾಲು ಕೊಟ್ಟರಲಿಲವಂತೆ ಅದ್ಕೆ ಬಂದೂಕ ತಗಂಡು ಬಾರು ಮಾಡಿದ, ಜೈಲಿಗೋದ" ಎಂದ ಸೀರ.

"ಒಂಚೂರು ಹೆಚ್ಚೇನು ಕಮ್ಮೇನು ಅನುಸರಿಸಿಗಂಡು ಹಂಚಕಬೇಕಾಗಿತ್ತಪ್ಪ ಇಬ್ರೂ ಒಂದೇ ತಾಯಿ ಮಕ್ಕಳಲ್ಲವೆ?"

"ನಿನ್ನ ಕುಂತಿ ಪುರಾಣ ಅವುರು ಕೇಳಬೇಕಲ್ಲ. ಅಣ ತಮ್ಮದೀರು ಸಿಟಿಲೆ ಒಂಥರ ಇರತರೆ, ಹಳ್ಳಿಲೆ ಒಂಥರ ಇರತರೆ ಕಣೆ" ಎಂದ ಉಗ್ರಿ.

"ಅದು ನಿಜ ಬುಡು. ಪಾಲಾಗೋರು ದುಮ್ಮು ದುಮ್ಮನೆ ಕುಣಕಂಡು ಬಂದು, ನಮ್ಮ ಕಾಳಮಾವ ಗದಿರಿಕಂಡೇಟಗೆ ಸುಮ್ಮನಾಯ್ತರೆ. ಕಾಳಮಾವನಂಥೋರು ಸಿಟಲಿದ್ದರೆ ಹಿಂಗಾಯ್ತಿತ್ತೆ?" ಎಂದಳು ಜುಮ್ಮಿ.

"ನಮ್ಮಣ್ಣ ನಾವು ಪಾಲಾಗವಾಗ, ಯಾರ್‍ನು ಕರಿಲಿಲ್ಲ ಕಂಡ್ಯೆ ಜುಮ್ಮಿ. ಇಗೊ ನೋಡು ಕುಂತಿತ್ತಾವಲೆ ನಮ್ಮಣ್ಣ ದರೆವಲ ಮೂರುಭಾಗ ಅಂದ. ಮೂಡು ಮುಂದಾಗವುನು ಪಡುಮುಂದಾಗಿ ನಾನು ಮದ್ದಿಕೆ ಬಸವೇಗೌಡ ಅಂದ. ಅದೇ ತರ ಕಣದೊಲ, ಹುಲ್ಲಕಪ್ಪು ಗದ್ದೆನೂ ಹಂಚಿಗಂಡೊ. ಇನ್ನ ತೆಂಗಿನಮರ ಯಲ್ಲಾರಿಗೂ ಐವತ್ತು ಅಂದ. ಹಿರಿಮಗ ನಮಗಾಗಿ ಕಷ್ಟು ಪಟ್ಟವುನೆ ಅಂತ ನಾವೆ



ಹತ್ತು ಮರ ಜಾಸ್ತಿ ಬುಟ್ಟೊ. ಹಿಂಗಿದ್ರೆ ಜಗಳ್ಯಾಕಾದತೂ" ಎಂದ ಸೀರ.

"ಹಳ್ಳಿ ಆಸ್ತಿ ಹಂಚಗಬವುದು ಕಂಡ್ಯ. ಸಿಟಿಲಿ ಅಂಗಾದತೆ?" ಎಂದ ಕಾಳಮಾವ.

"ಸಿಟಲಿ ಕಷ್ಟ ಬುಡು. ಈಗ ಒಂದು ಬಿಲ್ಡಿಂಗಿರತದೆ ಅನ್ನು. ಅದು ಮೂರಂತಸ್ತಿ ಇದ್ದು ಹಂಚಗಳರು ಇಬ್ಬರಿದ್ರೆ ಯಂಗಂಚ್ಚಕ್ಯಾದತೂ? ಒಂದೊ ಮಾರಿ ದುಡ್ಡ ಹಂಚಗಬೇಕು, ಇಲ್ಲ ಪಿಸ್ತೂಲ ತಗಂಡು ಉಡಾಯಿಸಿ ಜೈಲಿಗೋಗಿ ಅರಾಮಾಗಿರಬೇಕು" ಎಂದ ಉಗ್ರಿ.

"ಅಂಗರಿವುನು ಸತ್ತಿದ್ದು ಅಂಗೆಯಾ ಅನ್ನು?"

"ಇವುನು ಸತ್ತಿರದು ಆಸ್ತಿಗಲ್ಲ ಕಣೆ, ನಾವು ಇಲ್ಲಿಗಂಟ ನೋಡಿದಂಗೆ ಆಸ್ತಿಗಾಗಿ ಅಣ್ಣನ್ನೆ ಮುಗಿಸಿದ್ದ ನೋಡಿಲ್ಲ ಕಣೆ. ಅದು ಈ ದೇಸದ ಪ್ರಧಾನಿಯಾಗೋನ್ನ ಮುಗುಸ್ತನೆ ಅಂದ್ರೆ ಸದರವಾನಿ ಮಾತೆ?"

"ಅಂಗರೆ ಪ್ರಧಾನಿಯಾಯಿತ್ತಿದ್ದನೇನ್ಲ ಅವುನು?"

"ಊ ಕಣಕ್ಕ ನೋಡವುಟ್" ಎಂದುಕೊಂಡು ವಾಟಿಸ್ಸೆ ಬಂದ.

"ಯಾವಾಗಾಯ್ತಿದ್ದಾ?"

"ಅದೆ ಅದ್ವಾನಿ ಆದಮ್ಯಾಲೆ ಅವನೆ ಕಣಕ್ಕ. ಬಜೆಪಿಲಿ ಇನ್ಯಾರಾರ ಪ್ರಧಾನಿ ಆಗಕ್ಯಾದತೆ? ವಾಜಪೇಯಿ, ಅದ್ವಾನಿ, ಪ್ರಮೋದ್ ಮಹಾಜನ್ ಹಿಂಗೆ ಅವುರವುರೆ ಆಯ್ತಿದ್ರು."

"ದಳದಲ್ಲು ಅಂಗೆ ಅಲವೇನೊ. ಶ್ಯಾನುಭೋಗ, ಪಟೇಲ, ಗೌಡ, ಅಮ್ಯಾಲವುನ ಮಗ ಅಂತ. ಬಜೆಪಿಗೇನು ಕಡಮೆ ಇದ್ದರಿವುರೂ?" ಎಂದ ಉಗ್ರಿ.

"ಅದಕೆ ಅಲವೇನೊ ಬಜೆಪಿ ಜ್ವತಿಗೋಗಿ ಸೇರಿಕಂಡಿದ್ದು. ಈಗ ಜಗಳಿಲ್ಲ, ಪಗಳಿಲ್ಲ ಅಂತೂ ಆರಾಮಾಗ್ಯವುರೆ."

"ದ್ಯಾವೇಗೌಡ್ಯಾಕೆ ಇಷ್ಟು ಜಲ್ದಿ ಬಜೆಪಿಗಳ ಜ್ವತೆ ಸೇರಿ ಬುಟ್ಯಾ?" ಎಂದ ಸೀರ.

"ಅದೂ ಹಿಂಗೆ ಚಿಗಪ್ಪ, ದಳ ಬಜೆಪಿ ಸರ್ಕಾರ ಬಂದಮ್ಯಾಲೆ ಜನಗಳ್ಯಲ್ಲ ಎಲ್ಲಿ ಸರ್ಕಾರಿತ್ತೊ ಅಲ್ಲಿಗೋಗಿಬುಟ್ರು. ಈ ದ್ಯಾವೇಗೌಡನ ಮನೆತಕ್ಕೆ ಯಾರೂ ಹೋಯ್ತಿರಲಿಲ್ಲ, ಮದ್ದೆ ದ್ಯಾವೇಗೌಡ ಮನೆಮುಂದೆ ಜನ ನಿಂತಿದ್ರೆ ಮಾತ್ರ ನಿದ್ದೆ ಮಾಡೋ ಅಂಥೋನು. ಎಷ್ಟು ದಿನ ಅಂತ ವಚ್ಚೆ ಕುಂತಿರಕ್ಯಾಯ್ತದೆ? ಅದ್ಕೆ ಸರ್ಕಾರ ಕೈಗೆ ತಗಂಡ. ಈಗ ನೋಡು ಪೈಲು, ಮಂತ್ರಿ, ಜನ ಯಲ್ಲಾ ಸಾಲಿಕ್ಕತ ಕುಂತವುರೆ ದ್ಯಾವೇ ಗೌಡನ ಮನಿಗೆ. ಅದ್ಕೆ ದ್ಯಾವೇಗೌಡ್ರು ಜಲ್ದಿ ರಾಜಿಯಾಗಿ ಬುಟ್ರು. ಇಲ್ದೆಯಿದ್ರೆ ಮನೆ ಮುಂದೆ ಬೆಂಕಿ ಹಾಕಬೇಕಾಗಿತ್ತು."

"ಬೆಂಕಿಯಾಕಾಕ್ತರ್ಲ?"

"ದಿವಂಗತರಾದ್ರೆ ಅದನ್ನ ಸಾರ್ವಜನಿಕರಿಗೆ ತಿಳಸದ್ವಂಗಕ್ಕ. ನೋಡು ಆ ಪ್ರಮೋದ್ ಮಹಾಜನ್ ಮನೆ ಮುಂದೆ ಯಾವಾಗ್ಲೊ ಬೆಂಕಿ ಉರಿಬೇಕಾಗಿತ್ತು. ಆದ್ರೆ ಡಾಗುಟ್ರು ಫೈಟ್ ಮಾಡಿ ಒಂದೆರಡು ದಿನ ಮುಂದೂಡಿದ್ರು."

"ಅವುನಿಗಿನ್ಯಂಥಾ ತಮ್ಮಿದ್ದ? ಅಣ್ಣನ್ನೇ ಕೊಂದಾಕ್ಯವುನಲ್ಲ ಅವನ ಕೈ ಸೇದ" ಎಂದು ಜುಮ್ಮಿ ಶಾಪ ಕೊಟ್ಟಳು.

"ನೋಡಕ್ಕ ಜ್ವತೆಲುಟ್ಟರೊ ತಮ್ಮ ಅಣ್ಣನ್ನ ಕೊಂದಾಕ್ತನೆ ಅಂದ್ರೆ ಅಣ್ಣ ತಮ್ಮನಿಗೆ ಇನ್ನೆಷ್ಟು ಸಿಟ್ಟು ತರಿಸಿರಬೇಕು?"

"ಅಂಗಂತಿಯೇನ್ಲ?"

"ಊ ಕಣಕ್ಕ. ಪರಿಗ್‌ಜಾಂಪಲ್ ಇದೇ ನಮ್ಮ ದ್ಯಾವೇಗೌಡ್ರು ತಮ್ಮ ಬಸವೇಗೌಡನ ಮಗ ಚಿನ್ನಮ್ಮನ ಮ್ಯಾಲೆ ಆಸೆಡ್ ಹೂದುಬುಟ್ಟ. ಅಂದ್ರೆ ತನ್ನ ತಾಯಿಮ್ಯಾಲೆ ಹೂದಂಗೆ. ಆ ಹುಡುಗನಿಗೆ ಇವುರು ಇನ್ನೆಷ್ಟು ಸಿಟ್ಟು ಬರಿಸಿರಬೇಕು, ಲ್ಯಕ್ಕ ಹಾಕು."

"ಅಂಗರೆ ಪ್ರಮೋದ್ ಮಾಜನುನ್‌ದೆ ತೆಪ್ಪು ಅಂತಿಯಾ?"

"ಅವುನು ಸರಿನೆ ಇರಬವುದು. ಸರಿಯಾಗಿದ್ದೆ ಸಿಟ್ಟು ತರುಸ್‌ಬವುದಲವೇ, ಆ ಮಾತು ಬ್ಯಾರೆ. ಆದ್ರೆ ಪಾಲುಪಾರೀಕತ್ತಿನ ವಿಷಯದಲ್ಲಿ ಈ ಕ್ವಲೆ ಆಗಿರಲಾರದು ಅಂತ ನಾನು ಯೋಚನೆ ಮಾಡ್ತಯಿದ್ದಿನಿ."

"ಅಂಗೂ ಹೇಳತಿ ಹಿಂಗೂ ಹೇಳತಿ. ನಿನಿಗೆಲ್ಲೊ ತಲಿಕೆಟ್ಟದೆ ಕಂಡ್ಯ. ನೀನೇ ಹೇಳ್ಳ ಉಗ್ರಿ" ಎಂದಳು ಜುಮ್ಮಿ.

"ಏ ಪ್ರಮೋದ್ ಮಾಜನ ತಮ್ಮನೆಡತಿ ಮಡಿಕಂಡಿದ್ನಂತೆ ಕಣೆ. ಅದ್ಕೆ ಅವುನ ತಮ್ಮ ಕೊಂದಾಕಿದ" ಎಂದ ಉಗ್ರಿ ಸರಾಗವಾಗಿ.

"ಇದ್ದಾರ ನಿಜ ಅನ್ನನಪ್ಪ, ಅಂಗರಿದು ವಾಲಿ ಸುಗ್ರೀವನ ಕತೆಯಂಗಾಯ್ತು."

"ಪಾಲು ಪಾರಿಕತ್ತಿಗಾಗಿ ಯಾರು ಜೀವ ತಕ್ಕಳದಿಲ್ಲ ಕಂಡ್ಯ. ಆ ಜವರೇಗೌಡ, ಚಿಕ್ಕೇಗೌಡ, ವಟ್ಟೆಲಕ್ಕ ಏಟು ದಿನ ಪಾಲಾದ್ರು. ಏನಿಲ್ಲ ಅಂದ್ರು ಆರು ತಿಂಗಳು ನ್ಯಡಿತು. ಆಮ್ಯಾಲೆ ಹೆಂಗುಸುರ ಜಗಳ ಆರೊರ್ಸ ನ್ಯಡಿತು" ಎಂದ ಕಾಳಮಾವ.

"ಆ ಹೆಂಗಸರ ಜಗಳದಲ್ಲಿ ನ್ಯಡದಿರೊ ಅನಾಹುತ ಅಂಗೆ ಅದಲ್ಲ ದ್ವಡಪ್ಪ" ಎಂದ ವಾಟಿಸ್ಸೆ.

"ಅದ್ಯಾವ ಅನಾವುತನ್ಲ?"

"ಅಯ್ಯೋ ನೀನು ಊರಲ್ಲಿದ್ದು ವೇಸ್ಟು ಕಣಕ್ಕ. ಆ ಲಕ್ಕನ ಮನೆ ಕ್ಯಂದವುನಲ್ಲಕ್ಕ."

"ಯಾರೂ ಆ ಕ್ವಟ್ಟೆ ಚೀಲದ ಕ್ಯಂದನೆ?"

"ಎಸ್. ಅವುನು ಮಾಳಗೆ ಮನೆ ಮ್ಯಾಲೆ ಮನಿಗಿದ್ದ. ಆಗ ರಾತ್ರಿ ಹನ್ನೊಂದು ಗಂಟೆ. ಆಗ ವಟ್ಟೆ ಲಕ್ಕನ ಮನಿಯೋರು ಜವರೇಗೌಡ್ನ ಮನಿಯೋರು ಜಗಳಕ್ಕೆ ಬಿದ್ರು. ಯಾಕೆ ಅಂದ್ರೆ ಇನ್ನು ಸರಿಯಾಗಿ ಪಾಲಾಗಿರಲಿಲ್ಲ. ಈ ಮಾಳಗೆ ಮನೆ ಮ್ಯಾಲೆ ಮನಿಗಿದ್ನಲ್ಲ, ನನ್ನಂಥೋನು ಆ ಮುಂಡೆದ್ಕೆ ಈ ಜಗಳ ಕೇಳುಸ್ತು. ಯಂಗೆ ಕೇಳುಸ್ತು ಅಂದ್ರೇ ಯಾರೋ ಕಳ್ರು ನುಗ್ಗಿರಂಗೆ, ಅವುರ ಜನಗಳು ಓಡಿಸಿಗಂಡೋಯ್ತ ಕೂಗ್ತಯಿರಂಗೆ. ಪಾಪ ಅವುನು ಮಾಳಗೆ ಮನೆ ಮ್ಯಾಲೆ ಮನಿಗಿದ್ದಿನಿ ಅನ್ನದ ಮರತು ಬುಟ್ಟ. ಆದ್ರಿಂದ ಎದ್ದು ಓಡಿಬುಟ್ಟ ಕಣಕ್ಕ. ಓಡಿ ಬಿದ್ದೋನು ಅಲ್ಲೇ ಕುಂತಿದ್ದ."

"ಅಯ್ಯೋ ಅದುರ ಮನಿಮಾರತ್ತ. ಅದ್ಕೇ ಈಗಲು ಕುಂಟದದು?"

"ಊ ಕಣಕ್ಕ. ಈ ಪಾಲಾಗೊ ಹೆಂಗಸರ ಗಲಾಟಗಾಗಿ ಅವುನು ಮನಿ ಮ್ಯಾಗಲಿಂದ ನ್ಯಗದು ಅನಾಮತ್ತು ಹ್ಯಾಂಡಿಕ್ಯಾಪಾದ. ಇದಕೇನೇಳ್ತಿ?"

"ನೋಡು ಮತ್ತೆ?"

"ಲ್ಯಕ್ಕ ಹಾಕು. ಇನ್ಯಂಥಾ ಜನ ಧರೆಮ್ಯಾಲಿದ್ದರು?"

-ಬಿ. ಚಂದ್ರೇಗೌಡ

Zero Hour ಮುನ್ನಿ

1. 'ನಾಗ' ಚಿತ್ರವನ್ನು ವಿಮರ್ಶಿಸುವ ಉಸಾಬರಿಗೆ ಯಾರೂ ಹೋಗುತ್ತಿಲ್ಲ... ಕಾರಣ?
   a) 'ನಾಗ'ನನ್ನು ಹೊಗಳಲು ಕನ್ನಡದಲ್ಲಿ ಶಬ್ದಗಳೇ ಇಲ್ಲವಂತೆ.
   b) ಟೀಕಿಸಿದರೆ 'ನಾಗ' ಡಿಫಮೆಷನ್ ಕೇಸ್ ಹಾಕುತ್ತಾನೆಂಬ ಭಯವಂತೆ!
   c) "ನನಗೆ ನಟನೆ ಬರಲ್ಲ... ನಾನು ನಿರ್ದೇಶಕರ ಕೂಸು" ಎಂದು 'ನಾಗ'ನೇ ಹೇಳುತ್ತಿರುವುದರಿಂದ ಹೆಚ್ಚಿಗೆ ಬರೆವ ಅಗತ್ಯವಿಲ್ಲ.
   d) ಚಿತ್ರವಿಮರ್ಶೆ ಅಂಕಣದಲ್ಲಿ 'ನಾಗ'ನಿಗೆ ಎಂಟ್ರಿಕೊಟ್ಟರೆ ಜನ ಅದೊಂದು ಚಿತ್ರ ಎಂದು ಅಪಾರ್ಥ ಮಾಡಿಕೊಳ್ಳುತ್ತಾರೆ.
   e) b) ಮತ್ತು d) ಎರಡೂ ಸರಿ.
2. ಕವನವೊಂದರ ಈ ಸಾಲುಗಳನ್ನು ಓದಿದಾಗ ನಿಮಗೆ ಏನನ್ನಿಸುತ್ತೆ?
   "ಯಾರೋ ಕೂಗಿದಂತಾಯ್ತು
   ಮೇಲೆ ನೋಡಿದರೆ ಆಕಾಶ ಬಾಗಿತ್ತು
   ನನ್ನಂದವ ನೋಡಲು"
   a) ಇದಕ್ಕೆ, ಜ್ಯೋತಿ ಗುರುಪ್ರಸಾದಕ್ಕ ಮಾತ್ರ ಉತ್ತರಿಸಬಲ್ಲರು!
   b) ಕವಿ ಈ ಕವನ ಬರೆಯುವಾಗ ರೇಡಿಯೋದಲ್ಲಿ "ಆಕಾಶ ಬಾಗಿದೆ, ನಿನ್ನಂದ ನೋಡಲೆಂದು...." ಎಂಬ ಸಿನಿಮಾ ಹಾಡು ತೇಲಿ ಬರುತ್ತಿತ್ತೆಂದು ಕಾಣುತ್ತದೆ.
   c) ಈ ಕವನದ ಸ್ಫೂರ್ತಿಯಿಂದ ಆ ಸಿನಿಮಾ ಹಾಡು ರಚಿತವಾಗಿರಲೂಬಹುದು.
   d) ಕವಿಯ ಮನೆ ಮೇಲೆ ಆಕಾಶ್ ಎಂಬ ಹುಡುಗ ಬಾಡಿಗೆಗಿದ್ದಿರಬೇಕು.
3. ಕ್ರೈಂ ಧಾರಾವಾಹಿಗೆ ರಿಪೋರ್ಟರ್ ಆಗಲು ಯಾವ ಅರ್ಹತೆ ಇರಬೇಕು?
   a) ಹೆಣದ ಎದುರು ಮಂಗನಂತಾಡುವ ಪ್ರವೃತ್ತಿ.
   b) ಕನಿಷ್ಠ 2 ಬಾರಿಯಾದರೂ ನಿಮ್ಹಾನ್ಸ್‌ನಲ್ಲಿ ಗಂಭೀರ ಚಿಕಿತ್ಸೆ ಪಡೆದಿರಬೇಕು.
   c) ರಕ್ತ ಪ್ರೀತಿಸುವ blood(y) ಕ್ಯಾರೆಕ್ಟರ್ ಹೊಂದಿರಬೇಕು.
   d) ಹಟ್ಟ ಬೆಳೆಯುತ್ತಾ ಹೋಗುತ್ತಿದೆ. ಯಾವುದಾದರೂ ಒಂದು answer ಗೀಚಿ ಬಿಸಾಡಿ.
4. ಚಂಪಾ ಕುರಿತು ಈ ಹೇಳಿಕೆಗಳಲ್ಲಿ ಯಾವುದು ಸರಿ?
   a) ಚಂಪಾವತಿ 'ಸ್ವಾಭಿಮಾನಿ ಕರ್ನಾಟಕ' ಎಂಬ ಪಾರ್ಟಿ ಕಟ್ಟುತ್ತಾಳಂತೆ.
   b) ಕಸಾಪ ಖರ್ಚಿನಲ್ಲಿ ನಿತ್ಯ 'ಪಾರ್ಟಿ' ಕಟ್ಟುತ್ತ ಟೈಟ್ ಆಗುತ್ತಲೇ ಇದ್ದಾಳೆ.
   c) ಧಾರವಾಡದಲ್ಲಿ ಚಂಪಾಳ ಮನೆ ಮೆಂಟಲ್ ಹಾಸ್ಪಿಟಲ್ ಪಕ್ಕ ಇರುವುದು ಕಾಕತಾಳೀಯವೇನಲ್ಲ.
   d) a)ಅಂತೂ ತಪ್ಪು...b), c) ಎರಡೂ ಓಕೆ!
5. 'ರೇವಜಿತು' ಈ ಪದ ವಿವರಿಸಿ.
   a) ರಾಷ್ಟ್ರೀಯ ಹಾಲು ಡೇರಿಗೆ ರೇವಣ್ಣ ಅಧ್ಯಕ್ಷನಾದಾಗ "ರೇವು ಜೀತ್ ಗಯಾ" ಎಂದು ಹೇಳಲು ಹೋದ ಗೌಡರ ಹಿಂದಿ ಶೈಲಿ.
   b) ರೇವತಿ ಮತ್ತು ಜಿತಿ ಎಂಬ ಹೆಗಡೆ ಪುತ್ರಿ ಮಮತಾ ನಿಚ್ಚಾನಿಯ ಮಕ್ಕಳ ಹೆಸರುಗಳನ್ನು ಬೆಸೆದರೆ 'ರೇವಜಿತು' ಸಿಗುತ್ತದೆ.
   c) ಬಾಟ್ಲಿಂಗ್‌ನಲ್ಲಿ ಸುಳ್ಳು ಹೇಳಿಕೆ ನೀಡಿದ್ದ ಹೆಗಡೆಯನ್ನು 'ರೇವಜಿತು'ವಿನಲ್ಲಿ 'ಪತ್ರಿಕೆ' ಹಿಡಿದು ಹಾಕಿದ್ದು.
   d) b) ಮತ್ತು c) ಎರಡೂ ಸರಿ.

ಉತ್ತರಗಳು: 1) e, 2) a, 3) d, 4) d, 5) d


ಹೋಳಿಯ ಚಂದ್ರ


ಗುರುವಾರ ರಾತ್ರಿ ಬರಬೇಕಾಗಿದ್ದ ತುಂಬು ಚಂದ್ರ,
ೋಳಿ ಹುಣ್ಣಿಮೆ. ಸ್ಪಂದಿಸಲು ಮನಸ್ಸು
ರೆದಿಟ್ಟುಕೊಂಡ ಎಲ್ಲರನ್ನು ಚಕಿತಗೊಳಿಸುವ ಹೆಂಗಸು
ೀ ಪ್ರಕೃತಿ. ಸಂಜೆ ಗುಡುಗು ಶುರುವಾಯಿತು. ಕೇವಲ
ರಡು ತಿಂಗಳ ಹಿಂದೆ ಮಳೆ ಸುರಿಸಿದ ಆಕಾಶ ಆಗಲೇ
ಲು ಕೆರೆಯುತ್ತಿದೆ; ಬಿಸಿಲು ಶತಮಾನಗಟ್ಟಲೆ
ಾರಿಸಿದಂತೆ ಅನ್ನಿಸತೊಡಗಿ ಬಿದೆಯೆದ್ದಂತಿರುವ ಆಕಾಶದ
ನಿಗಳ ಕೃಪೆಗೆ ಮನ ಹಂಬಲಿಸುತ್ತಿದೆ. ಸಂಜೆ ಸೂರ್ಯ
ಾಣುತ್ತಿಲ್ಲ, ಗಾಳಿ ಮಳೆಯ ಹೊಗಳುಭಟ್ಟನಂತೆ
ೂಗಾಡುತ್ತಿದೆ. ಮೊದಲ ಮಳೆ. ಸುರಿದಷ್ಟೂ ಹೀರುವ
ೂಮಿ.

ಸಂಜೆ ಸಭೆಯೊಂದಕ್ಕೆ ಹೋಗಬೇಕಿತ್ತು. ಹನಿಗಳು
ೀಳತೊಡಗಿದವು. ಕಿಟಕಿಯ ಹತ್ತಿರ ನಿಂತೆ.
ಲದು, ಧೂಳು
ಡಗುವ
ರಿ, ನೆಲ
ನಿಗಳನ್ನು
ೀರುವ
ಲಿ.
ುರಗಳು
ಲ್ಲಣಿಸಿದಂತೆ
ಟಸುತ್ತ
ುಪಿಗೊಳ್ಳುವ
ೀತಿ-ನಿಂತು
ೂೀಡಿದೆ. ಅದು
ೋಟವಲ್ಲ.
ಯಾಕೆಂದರೆ ಮೊದಲ ಮಳೆ ಮಣ್ಣಿನ ಜೊತೆ ಸಂಧಾನ ನಡೆಸಿತ್ತು. ಮಣ್ಣಿನ
ಾಸನೆ ಮೂಗನ್ನು ಚಕಿತಗೊಳಿಸಿತ್ತು. ಇದು ಜಾಜಿಯಂತಲ್ಲ, ಸುರಗಿ
ೂವಿನಂತಲ್ಲ, ಮಾವಿನ ನೆನೆಯ ವಾಸನೆಯಲ್ಲ, ನಿಮ್ಮ ನೆಚ್ಚಿನ ವ್ಯಕ್ತಿಯ
ೆವರು, ಸುಗಂಧವಲ್ಲ; ಮಣ್ಣಿನ ವಾಸನೆಯಲ್ಲಿ ಭೂಮಿಯ ಉಲ್ಲಾಸ,
ೀವಜಂತುಗಳ ಬೆವರು, ಮಲ, ಪ್ರೀತಿಯೆಲ್ಲ ಸೇರಿದೆ. ನೆನಪುಗಳನ್ನು
ುಕ್ಕಿಸುವ, ಜೀವವನ್ನು ಚೇತರಿಸುವ, ವಸಂತನನ್ನು ಆಹ್ವಾನಿಸುವ ಸೊಗಡು...

ಅವತ್ತು ಚಂದ್ರ ಬಹುಕಾಲ ಕಾಣಲಿಲ್ಲ. ಮೋಡಗಳು ಮತ್ತು ಗ್ರಹಣ
ಂದ್ರನನ್ನು ಆಲಂಗಿಸಿದ್ದವು. ಬೀದಿಯಲ್ಲಿ ಹೋಳಿ ಸುಡುವ ಹುಡುಗರ ಗದ್ದಲ.
ಣಿದಿದ್ದ ದೇಹ ಅಚ್ಚರಿಪಡುತ್ತ ಚೇತರಿಸಿಕೊಳ್ಳುತ್ತಿದೆ.

ಇಂಥ ಮಣ್ಣಿನ ವಾಸನೆಯ, ತಂಪು ರಾತ್ರಿಯಲ್ಲೇ ಸುಡಿಸಿಕೊಳ್ಳುವಂಥ
ನನ್ನು ಕಾಮ ಮಾಡಿದ್ದ? ■





ಮನದ ಮುನ್ನ

ಮಾರ್ಚ್ 6, 1988

ನಗರ ಗೊಂದಲ



ನಗರ ನಿಯಮಬದ್ಧವಾಗಿ ಬೆಳೆಯಬೇಕು. ರೆವಿನ್ಯೂ ಜಾಗ ಕೊಂಡುಕೊಂಡು ಮನೆ ಕಟ್ಟಿಕೊಳ್ಳುವುದು, ಜಾಗ ಇದ್ದಲ್ಲೆಲ್ಲ ಟೆಂಟ್, ಗುಡಿಸಲು ಹಾಕಿಕೊಳ್ಳುವುದು ತಪ್ಪು. ಬಡವರ ಬಗ್ಗೆ ಬೋಳೆ ಮಾತಾಡುವ ಮಧ್ಯಮ ವರ್ಗದ ಕುಟುಂಬ ತೆಗೆದುಕೊಳ್ಳಿ. ಅನೇಕ ವರ್ಷ ಕಷ್ಟಪಟ್ಟು ಒಂದು ಮನೆ ಕಟ್ಟಿಸಿಕೊಂಡಿರುತ್ತಾರೆ. ಇವರು ಬೆಳಗ್ಗೆ ಎದ್ದು ನೋಡಿದರೆ ತಮ್ಮ ಕಾಂಪೌಂಡಿನಲ್ಲೇ ಗುಡಿಸಲೊಂದು ಎದ್ದು ನಿಂತಿರುತ್ತದೆ. ಪಕ್ಕದ ಮನೆಯವರ ಕಾಂಪೌಂಡಿನಲ್ಲಿ ಕಟ್ಟಿಕೊಂಡಿದ್ದರೆ ಚೆನ್ನಾಗಿತ್ತು; ಗುಡಿಸಲನ್ನು ಸಮರ್ಥಿಸಿ ಭಾಷಣ ಬಿಗಿಯಬಹುದಿತ್ತು, ಆದರೆ ತಮ್ಮ ಕಾಂಪೌಂಡಿನಲ್ಲೇ ಗುಡಿಸಲು ನೋಡಿ ದಂಗಾಗುತ್ತಾರೆ. ಅಸಹಾಯಕರಾಗಿ ಪೋಲೀಸು, ಬಿಡಿಎ, ಕಾರ್ಪೋರೇಷನ್ ಮುಂತಾದೆಡೆ ದೂರು ತೆಗೆದುಕೊಂಡು ಹೋಗುತ್ತಾರೆ.

ಕೋಟ್ಯಾಂತರ ಹಣವುಳ್ಳವರು, ಬಿಡಿಗಾಸು ಇಲ್ಲದ ಬಡವರು ಒಟ್ಟಾಗಿಯೇ ಇರುವ ಜಾಗ ಈ ನಗರವಾಗುತ್ತಿದೆ. ಬಿಡಿಎ ಭ್ರಷ್ಟವಾಗಿದೆ. ಕೋಟ್ಯಾಂತರ ಹಣದ ಜನ ರೆವಿನ್ಯೂ ಜಾಗ ಪಡೆದು ಅಷ್ಟಿಷ್ಟು ಕಾಸುಳ್ಳವರಿಗೆ ಮಾರಿಕೊಳ್ಳುತ್ತಾರೆ; ಬಿಡಿಎಯವರಿಗೆ ಲಂಚ ಕೊಡುತ್ತಾರೆ. ಎಂಜಲು ದೊರೆತೊಡನೆ ಬಿಡಿಎ ಎಲ್ಲವನ್ನು ಸಹಿಸುತ್ತದೆ. ಹಲವು ವರ್ಷಗಳಿಂದ ಇಂಥ ಕೆಲಸ ನಡೆದಿದೆ. ಅರ್ಜಿ ಹಾಕಿದರೆ ನಿವೇಶನ ದೊರೆಯದಿದ್ದರೆ, ಬಿಡಿಎ ನಿವೇಶನ ದೊರೆತರೂ ಅದರ ಬೆಲೆ ಬಡವರಿಗೆ ನಿಲುಕದಷ್ಟಿದ್ದರೆ ಏನು ಮಾಡಬೇಕು? ತಮ್ಮ ಪುಟ್ಟ ಜೇಬಿಗೆ ತಕ್ಕಂತೆ ಖದೀಮರಿಂದ ನಿವೇಶನ ಕೊಂಡುಕೊಳ್ಳುತ್ತಾರೆ, ಮನೆ ಕಟ್ಟಿಸಿಕೊಳ್ಳುತ್ತಾರೆ. ಗೊಂದಲ ಇಷ್ಟಕ್ಕೇ ನಿಲ್ಲುವುದಿಲ್ಲ, ರೆವಿನ್ಯೂ ಜಾಗಗಳನ್ನು ಕೊಳ್ಳುವುದಾಗಿ ಬಿಡಿಎ ನೋಟಿಫೈ ಮಾಡುತ್ತದೆ. ನಿವೇಶನಗಳನ್ನು ತಯಾರಿಸಿ ಹಂಚುತ್ತಾ ಹೋಗುತ್ತದೆ. ಆಗಲೇ ಅಲ್ಲಿ ಮನೆಗಳಾಗಿರುವುದು ಬಿಡಿಎಗೆ ಗೊತ್ತೇ ಇರುವುದಿಲ್ಲ, ಈ ಎರಡನೆಯ ಸಲದ ಹಂಚಿಕೆಯಲ್ಲಿ ಹಣ ತೆತ್ತವರು ಪ್ರತಿಭಟಿಸುತ್ತಾರೆ. ಕಟ್ಟಿದ ಮನೆಗಳನ್ನು ಕೆಡವಲು ಸರ್ಕಾರ ಸಜ್ಜಾಗುತ್ತದೆ, ನೋವು, ಚೀತ್ಕಾರ ಶುರುವಾಗುತ್ತದೆ. ■

ಈ ಪುಟ್ಟ ಹುಡುಗರು

ನಾನು ಗುಲ್ಬರ್ಗಾಕ್ಕೆ ಹೋಗಬೇಕಾಗಿದೆ. ಬರೆದು ಮುಗಿಸಿ ಹೋದರೆ ಅಲ್ಲಿ ಮನಸ್ಸಿನ ಸೆಡವು ಇರುವುದಿಲ್ಲ ಎಂದು ಬರೆಯಲು ಕೂತಿದ್ದೇನೆ. ಮಾಡಿಕೊಂಡ ಟಿಪ್ಪಣಿಗಳು ಎದುರಿಗಿವೆ. ಬರಹ ಸಾಗುತ್ತಿಲ್ಲ, ಸುಮ್ಮನೆ ಸುತ್ತ ನೋಡುತ್ತೇನೆ. ಇಬ್ಬರು ಹುಡುಗರು ನನ್ನನ್ನು ನೋಡಲು ಬರುತ್ತಾರೆ. ಒಂದೆರಡು ನಿಮಿಷದಲ್ಲಿ ಮಾತಾಡಿ ಕಳಿಸೋಣ ಎಂದು ಅವರ ಓದು, ದಿನಚರಿಯ ಬಗ್ಗೆ ವಿಚಾರಿಸುತ್ತೇನೆ. ತುಮಕೂರಿನವರು. ತಾಂತ್ರಿಕ ಶಾಲೆಯಲ್ಲಿ ಓದುತ್ತಿರುವವರು. ಒಬ್ಬನ ಹೆಸರು ಶ್ರೀನಿವಾಸ, ಇನ್ನೊಬ್ಬನ ಹೆಸರು ಮೋಹನ್‌ಕುಮಾರ್. ಅವರು ಮುಗ್ಧ ಹುಡುಗರು. ನನ್ನ ಬಗ್ಗೆ ಏನೇನೋ ಕಲ್ಪಿಸಿಕೊಂಡು ಬಂದವರು. ಕಾಫಿ ತೆಗೆದುಕೊಳ್ಳಲು ಹೇಳುತ್ತೇನೆ. ಅವರು ಕಾಫಿ ಕೂಡ ಕುಡಿಯುವುದಿಲ್ಲ, ತುಮಕೂರಿನ ಹತ್ತಿರದ ಹಳ್ಳಿಯ ಹುಡುಗರು. ತಮ್ಮ ತುಮಕೂರಿನ ಜಗದ್ಗುರುಗಳಿಬ್ಬರ ಜಗಳ, ಪಟಾಕಿಯ ಬಗ್ಗೆ ಹೇಳುತ್ತಾರೆ. ಸಿದ್ಧಗಂಗಾ ಹಾಸ್ಟೆಲಿನಲ್ಲಿನ ಜಾತೀಯತೆ ಕುರಿತು ಹೇಳುತ್ತಾರೆ. ನಾನು ಬೇಕಂತಲೆ, 'ನಾನು ಅಲ್ಲಿಗೆ ಹೋಗಿಲ್ಲ, ಆ ಹಾಸ್ಟೆಲು ಮತ್ತು ಮಠ ಸ್ವಚ್ಛವಾಗಿಯಾದರೂ ಇವೆಯಾ' ಎಂದು ವಿಚಾರಿಸುತ್ತೇನೆ. 'ತುಮಕೂರಿಗೆ ಕಾಲರಾ ಬಂದಾಗಲೆಲ್ಲ ಅಲ್ಲಿಗೇ ಮೊದಲು ಬರೋದು ಸಾರ್, ಅಷ್ಟು ಗಲೀಜು' ಎಂದು ಹೇಳುತ್ತಾರೆ. ಅವರು ಉತ್ಪ್ರೇಕ್ಷಿಸುತ್ತಿರಬಹುದು. ಮೋಹನ್ ಕುಮಾರ್ ನಮ್ಮ ಪತ್ರಿಕೆಯ ಸಾಲುಗಳನ್ನೆಲ್ಲ ನೆನಪಿಟ್ಟುಕೊಂಡಿದ್ದಾನೆ; ಆತ ನಮ್ಮ ಅಕ್ಟೋಬರ್ ಎರಡರ ಉಪವಾಸಕ್ಕೂ ಬಂದಿದ್ದನಂತೆ.

ಕುತೂಹಲಕ್ಕೆ ಮಾತ್ರ 'ಬೇಸರವಾಗದಿದ್ದರೆ ಹೇಳಿ, ನಿಮ್ಮ ಜಾತಿ ಯಾವುದು?' ಅಂದೆ. ಅವರಿಗೆ ಬೇಸರವಾಗಲಿಲ್ಲ. ಮೋಹನ್ ಹೇಳಿದ, 'ನಾನು ಒಕ್ಕಲಿಗರವನು ಸಾರ್. ನೀವು ಕೇಳಿದಿರಿ ಅಂತ ಹೇಳ್ತಿದೇನೆ. ನಾನು ಸ್ಕಾಲರ್‌ಶಿಪ್ ಫಾರಂನಲ್ಲಿ ಕೂಡ ಜಾತಿ ಬರೆಯುವುದಿಲ್ಲ, ವಿಶ್ವಮಾನವ ಅಂತ ಮಾತ್ರ ಬರೀತೇನೆ. ಹೀಗಾಗಿ ನನಗೆ ಸ್ಕಾಲರ್‌ಶಿಪ್ ಸಿಗುವುದೇ ಇಲ್ಲ. ಇದರಿಂದ ನನಗೆ ಬೇಸರವಿಲ್ಲ' ಅಂತಾನೆ. ಮತ್ತೆ ಯೋಚಿಸಿ, 'ನಾವು ಒಂದು ಸಣ್ಣಗುಂಪು ಸೇರಿ ನಿಮ್ಮೊಂದಿಗೆ ರಾಜಕೀಯ ಚರ್ಚಿಸಲು ಬಯಸಿ ಕಾಗದ ಬರೆದಿದ್ದೆವು' ಅನ್ನುತ್ತಾನೆ.

'ಕ್ಷಮಿಸು, ನಿನ್ನ ಕಾಗದ ನನಗೆ ಸಿಕ್ಕಿಲ್ಲ, ರಾಜಕೀಯ ಚರ್ಚಿಸುವುದು ಸರಿ, ಆದರೆ ನಿಮ್ಮಂಥ ಎಳೆಯ ಹುಡುಗರು ನಿಮ್ಮ ವಿದ್ಯಾಭ್ಯಾಸ ಕೆಡದ ರೀತಿಯಲ್ಲಿ ರಾಜಕೀಯದಲ್ಲಿ ಭಾಗವಹಿಸಬೇಕು. ಕ್ಲಾಸಿಲ್ಲ ಅಂದಕೂಡ್ಲೆ ಖುಷಿಗೊಂಡು ಬೀದಿಗಿಳಿದು ರಾಜಕೀಯ ಮಾಡುವ ಹುಡುಗರು ನನಗಿಷ್ಟವಿಲ್ಲ, ಅಂಥವರಿಂದ ರಾಜಕೀಯ ಕೂಡ ಹಾಳಾಗುತ್ತದೆ' ಅನ್ನುತ್ತೇನೆ.

ನಮ್ಮಲ್ಲಿ ಅಸಂಖ್ಯಾತ ಹುಡುಗರು ಈ ಶ್ರೀನಿವಾಸ, ಮೋಹನ್ ತರಹ ಕೂಡ ಇದ್ದಾರೆ. ಪ್ರೀತಿ, ಕುತೂಹಲ ತುಂಬಿದ ಹುಡುಗರು.

'ಕಾಗದ ಬರೀತಿರಿ' ಎಂದು ಹೇಳಿ ಕಳಿಸಿಕೊಡುತ್ತೇನೆ. ■

ಹುಡುಗಿಗೂ, ಮೊಬೈಲ್‌ಗೂ ಏನು ವ್ಯತ್ಯಾಸ?

.ಎ. ಖಲಂದರ್ ಅಜೀಜ್, ಜಾವಗಲ್
ೌರುಷತನ ಸೋಲುವುದು ಯಾವಾಗ?
ಎಂ.ಪಿ. ಪ್ರಕಾಶ್ ಸ್ಥಿತಿ ತಲುಪಿದಾಗ.

ಾಳೀಹುಂಡಿ ಶಿವಕುಮಾರ್, ಮೈಸೂರು
ಾಡರ ಆತ್ಮಕಥೆ ಬರೆಯಬೇಕೆಂದಿದ್ದೇನೆ?
'ಶಕುನಿ ಪುರಾಣ' ಎಂದು ಹೆಸರಿಡಬಹುದು.

. ಹಾಲಸ್ವಾಮಿ, ಬೆಂಗಳೂರು
ಾಳವಿಕಾ ಇನ್ನೂ ಎಷ್ಟುದಿನ ಕೋರ್ಟಲ್ಲಿ ಕೈಕಟ್ಟಿಕೊಂಡು
ಲ್ಲಬೇಕು?
ಸೀತಾರಾಂಗೆ ಸುಸ್ತಾಗಿ, ರವಿ ಬೆಳಗೆರೆಗೆ ಬೋರ್
ೊಡೆಯೊವರೆಗೂ ನಿಂತಿರಬೇಕಂತೆ.

.ಶ್ರೀನಿವಾಸ್, ಮಂಡ್ಯ
ೃಷ್ಣನ ಗೀತೋಪದೇಶಕ್ಕೂ, ದೇವೇಗೌಡರ
ಂತ್ರೋಪದೇಶಕ್ಕೂ ವ್ಯತ್ಯಾಸವೇನು?
ದೇವೇಗೌಡರದ್ದು 'ಕುತಂತ್ರೋಪದೇಶ' ಕಣ್ರೀ.

ಂದಿರಾ ಶ್ರೀಧರ್, ದಾವಣಗೆರೆ
ೇಧಾ ಚಿಂತನೆ, ಮೋದಿ ಚಿಂತನೆ ಯಾವುದು ಸರಿ?
ಮೇಧಾ ಮೇಧಾವಿ, ಮೋದಿ ಮೋರಿ.

ರ್. ಸಿರಿತರ್ಲಗಟ್ಟಿ, ಹುಬ್ಬಳ್ಳಿ
ೆಶಿಯ ಗ್ರಾನೈಟ್ ಕಳ್ಳದಂಧೆಗೆ ಹಿಂದಿನ ಸರ್ಕಾರವೇಕೆ
ನಿಖೆ ನಡೆಸಲಿಲ್ಲ?
ಪೋಲೀಸ್ ಚೆನ್ನಿಗಪ್ಪನ ಕಳ್ಳಾಟ ಇದು.

ವಿತಾ ಮದುಸೂಧನ್, ದಾವಣಗೆರೆ
ಾಜಕೀಯ ನಾಯಕನೊಬ್ಬ ನಾಲಾಯಕ್ ಅನ್ನಿಸಿ
ೊಳ್ಳೋದು ಯಾವಾಗ?
ಜನಗೆ ಮಣಿದಾಗ.

ಬಸವರಾಜ್ ಬೆಸ್ತರ್, ಹರಪನಹಳ್ಳಿ
ಗೈಡ್‌ನ ಪ್ರೀತಿಯ ಮಾತಿಗೂ ಲಂಕೇಶ್‌ನ ಕಂಡಹಾಗೆಗೂ ಇರುವ ವ್ಯತ್ಯಾಸ?
* ಅದು ಎಳೆಯರಿಗೆ, ಇದು ಬೆಳೆದವರಿಗೆ.

ಕೆ.ಪ್ರಾಣೇಶ್‌ರಾವ್, ಹಗರಿಬೊಮ್ಮನಹಳ್ಳಿ
ರಾಜಕಾರಣಿಗಳು ಮೂಲೆ ಗುಂಪಾದಾಗ ಏನು ಮಾಡುತ್ತಾರೆ?
* ಸಿಂಥ್ಯಾರಂತೆ ಸ್ಫೋಟಗೊಳ್ಳುತ್ತಾರೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಸ್ವಿಮ್ಮಿಂಗ್ ಪೂಲ್‌ಗಳಲ್ಲಿ ಗಂಡು ಹೆಣ್ಣನ್ನು ಒಟ್ಟಿಗೇ ಈಜು ಕಲಿಯಲು ಬಿಟ್ಟರೆ ಚೆನ್ನಿರುತ್ತಲ್ವಾ?
* ಅಂದಹಾಗೆ, ನಿಮ್ಮ ಪತ್ನಿ ಈಜು ಕಲಿಯಬೇಕಂತೆ, ಕಳುಹಿಸುತ್ತೀರಾ!

ಎಂ. ಶಿವಸ್ವಾಮಿ, ಬೆಂಗಳೂರು
ಹುಲ್ಲುಗಾವಲಿನ ಮೇಲೆ ಪೊದೆ ಬೆಳೆಸಿದರೆ ಏನಾಗುವುದು ಪರಿಣಾಮ?
* ಕರ್ನಾಟಕದಲ್ಲಿ 'ಕೋ-ಜಾ' ಸರಕಾರ ಬಂದಂತಿರುತ್ತದೆ.

ಎಚ್.ಸಿ. ಭಾಗ್ಯಕುಮಾರ್, ಬೆಂಗಳೂರು
ಯೋಗಾಸನಕ್ಕೆ ಸೂಕ್ತ ಸಮಯ ಯಾವುದು?
* ವ್ಯಸನ ಇಲ್ಲದಿರುವ ಸಮಯ.



ಜಿ.ಎನ್. ಪ್ರಸನ್ನಕುಮಾರ್, ತುಮಕೂರು
ಸಾನಿಯಾಗೆ ಗಝಲ್ ಬರೆದುಕೊಟ್ಟರೆ Nursery Rhymes ಥರ ಗಟ್ಟಿಯಾಗಿ ಹೇಳಿಕೊಳ್ಳುತ್ತಾಳಲ್ಲ?
* ಸದ್ಯ ಟೆನ್ನಿಸ್ ಸ್ಕೋರ್ ಥರ ಹೇಳಲಿಲ್ಲವಲ್ಲ.

ಆ.ರಾ. ಮಂಜುನಾಥ, ಗೆದರೆ
ಕುಮಾರ, ಯಡ್ಡಿ ಎಲ್ಲಿಗೋದ್ರೂ ಜೊತೆಲಿರ್ತಾರೆ ಯಾಕೆ?
* ಯಾರಾದರೂ ಬತ್ತಿ ಇಟ್ಟಾರು ಎಂಬ ಭಯ.

ಎಸ್. ಪುಷ್ಪ, ಕಾಸರಗೋಡು
ಶಿವಣ್ಣನ್ನ ಪ್ರತಿವಾರ ಭೇಟಿ ಮಾಡುವ ಸದಾಶಿವ ಶೆಣೈ ಬಗ್ಗೆ ಹೊಟ್ಟೆ ಉರಿ ಆಗ್ತಿದೆಯಲ್ಲ?
* ನಿಮಗೂ ಪತ್ರಿಕೆಯ ಮೂಲಕ ಭೇಟಿ ಮಾಡಿಸ್ತಿದ್ದಾರಲ್ಲ.

ದಲಿತ್ ನಾಗರಾಜ್, ಮೈಸೂರು
ಡಿ.ಎಚ್. ಶಂಕರಮೂರ್ತಿ ಪಠ್ಯ ಪುಸ್ತಕಗಳನ್ನು ಬದಲಾಯಿಸುತ್ತಾರಂತೆ?
* ಅದನ್ನು ರಿಪೇರಿ ಮಾಡಲು ಮೆಕಾನಿಕ್ ಚಿಮೂ ತುದಿಗಾಲ ಮೇಲೆ ನಿಂತಿದ್ದಾರಂತೆ.

ಮಂಚಾಲಿ ಗುರುರಾಜಚಾರು, ಬಳ್ಳಾರಿ
ಕಲಿಯುಗ ರಾಜಕೀಯದಲ್ಲಿ ಸತ್ಯಹರಿಶ್ಚಂದ್ರ ಯಾರು?
* 'ಸತ್ಯ'ನಾರಾಯಣ, 'ಹರಿ' ಖೋಡೆ, ರಾಮ 'ಚಂದ್ರ'ಗೌಡರಂತೂ ಅಲ್ಲವೇ ಅಲ್ಲ.

ದಿ.ವೆಂಕಟೇಶ್, ದೇವದುರ್ಗ
ಸದಾಶಿವನಿಗೆ ಅದೇ ಧ್ಯಾನ ಎಂದರೆ ಏನು?
* ಅದೇ ಧ್ಯಾನದ ಪ್ರಶ್ನೆ ಕೇಳುವುದು.

ಛೀ ತುಂಟಿ!

ಹದಿಹರೆಯದ ಹುಚ್ಚು ಹುಡುಗನೊಬ್ಬನಿಗೆ ಚಾಟರ್ ಬಿಲ್ಲೆಂದರೆ ಪ್ರಾಣ. ದಾರಿಯಲ್ಲಿ ಸಿಕ್ಕ ಹುಡುಗಿಯರಿಗೆಲ್ಲ ಅದರಿಂದ ಕಲ್ಲು ಹೊಡೆಯುವುದೇ ಅವನ ಕಾಯಕ. ಬೇಸತ್ತ ಅಪ್ಪ ಮಾನಸಿಕ ಡಾಕ್ಟರಲ್ಲಿಗೆ ಕರೆದೊಯ್ದು 'ಏನಾದ್ರೂ ಮಾಡಿ' ಅಂದ.

ಡಾಕ್ಟರ್ ಹುಡುಗನನ್ನು ಕರೆದು ಕೂರಿಸಿ, 'ಚಾಟರ್ ಬಿಲ್ಲೆಂದರೆ ನಿನಗೆ ಇಷ್ಟವಂತಲ್ಲ' ಅಂದ್ರು. ಹುಡುಗ 'ಹೌದು' ಅಂದ. 'ನಿನಗೊಬ್ಬಳು ಹುಡುಗಿ ಸಿಕ್ಕರೆ ಏನ್ಮಾಡ್ತಿಯಾ' ಅಂದ್ರು.

'ಬಟ್ಟೆಯನ್ನೆಲ್ಲಾ ಬಿಚ್ಚಬಿಡ್ತೀನಿ' ಅಂದ. 'ಬಿಚ್ಚಿ ಏನ್ಮಾಡ್ತಿಯಾ' ಅಂದ್ರು ಡಾಕ್ಟರು. 'ಅವಳ ಬ್ರಾ ಮತ್ತು ಕಾಚಾವನ್ನೂ ಬಿಚ್ಚಬಿಡ್ತೀನಿ' ಅಂದ ಹುಡುಗ. 'ಅದು ಬಿಚ್ಚಿ ಏನ್ಮಾಡ್ತಿಯೋ' ಅಂದ್ರು. 'ಹಾ ಸುಮ್ನಿರ್ರಿನಾ, ಬ್ರಾ ಮತ್ತು ಕಾಚಾದಲ್ಲಿರುವ ಎಲಾಸ್ಟಿಕ್ ಬಿಚ್ಚಕೊಂಡು ಚಾಟರ್ ಬಿಲ್ ಮಾಡ್ಕೊತಿನಿ' ಅಂದು ನಗತೊಡಗಿದ.




ಬಹುಮಾನಿತ ಪ್ರಶ್ನೆಗಳು

ಪಿ.ಸುರೇಶ್, ಅರಕೆರೆ
ಬೆಲ್ಲಿಗೆ ರಚೆಯಲ್ಲಿ ಹುಡುಗಿಯರು ಏನು ಮಾಡ್ತಾ ಇರಬಹುದು?
* ಹುಡುಗಿಯರು ಇರುವ ಕಡೆ ಬೇಲಿಗೆ ಎಲ್ಲಿ ಬಂತು? ಎಲ್ಲಾ ಸಂಪ್ಲ, ಇಂಪ್ಲ!

ವಿಜಯಕುಮಾರ್, ಬಿಳಿದಾಳೆ
ಹುಡುಗಿಗೂ, ಮೊಬೈಲ್‌ಗೂ ಏನು ವ್ಯತ್ಯಾಸ?
* ಕರೆನ್ಸಿ ಖಾಲಿ ಆದಾಗ ಎರಡೂ ಡಿಸ್‌ಕನೆಕ್ಟ್ ಆಗುತ್ತೆ ಎಂಬುದು ನನ್ನ ಪತ್ರಿಕೆಯ ಸತೀಶ್ ಅನುಭವ!

ಪ್ರಯತ್ನಪಟ್ಟರೆ ಯಾವುದು ದುರ್ಲಭ? ಪ್ರಯತ್ನದ ಗರ್ಭದಲ್ಲಿಯೇ ಐದಷ್ಟಗೆ ಹೋಗಿದೆ



ಸಾರಂಗಿ ಜೊತೆ ರಂಗೀಲಾ

ಕೊಲೆಗೆ ಕಾರಣ

ಬಿಳಿದಾಳೆ ಈಶ

ಸೀತೆಯನ್ನು ಅಪಹರಿಸಿ ಪೀಡಿಸಿದ್ದ ರಾವಣನನ್ನು ಶ್ರೀರಾಮ ಕೊಂದು ಹಾಕಿದ...

ಇದು ಬಿಜೆಪಿಯವರೇ ನಂಬುವ ರಾಮಾಯಣದ ಕತೆ. ಪರಪತ್ನಿ ಪೀಡನೆಗೆ ತಪ್ಪಿತಸ್ಥನು ಅನುಭವಿಸಬೇಕಾದ ಶಿಕ್ಷೆ ಎಂಬ ನಂಬಿಕೆ ಅದು.

ಹತ್ಯೆಗೊಳಗಾದ ಬಿಜೆಪಿಯ ವರ್ಚಸ್ವಿ ನಾಯಕ, ವಾಜಪೇಯಿಯಿಂದಲೇ 'ಅಡ್ವಾಣಿ ರಾಮನಾದರೆ, ಈತ ಲಕ್ಷ್ಮಣ'ನೆಂದು ವರ್ಣಿಸಲ್ಪಟ್ಟಿದ್ದ ಪ್ರಮೋದ್ ಮಹಾಜನ್ ಸಾವಿನ ಸುತ್ತ ಈಗ 'ವಿಚಿತ್ರ ರಾಮಾಯಣ'ದ ಪರಪತ್ನಿ ಪೀಡನೆ, ಶೋಷಣೆಯ ಅಸಲಿ ವಿಚಾರಗಳು ಹೊರಬೀಳತೊಡಗಿವೆ.

ಏಪ್ರಿಲ್ 22ರ ಬೆಳಗ್ಗೆ ತನ್ನ ತಮ್ಮ ಪ್ರವೀಣನಿಂದಲೇ ಪ್ರಮೋದ್ ಮಹಾಜನ್ ಗುಂಡೇಟು ತಿಂದು ಆಸ್ಪತ್ರೆ ಸೇರಿದಾಗ 'ಇದೊಂದು ಆಸ್ತಿ ಕಲಹ' ಎನ್ನಲಾಗಿತ್ತು, ಕೆಲವರು ಅಣ್ಣನ ಯಶಸ್ಸು ಸಹಿಸದ ಬಡಪಾಯಿ ತಮ್ಮ ಪ್ರವೀಣನ ಹೊಟ್ಟೆಕಿಚ್ಚಿನ ಕುಕೃತ್ಯ ಎಂದರು. ಸ್ವತಃ ಪ್ರವೀಣನ ಲಾಯರ್ ನಂದಕುಮಾರ್ ರಾಜೂರ್‌ಕರ್ ಮುಂಬೈ ಮೀಡಿಯಾದೆದಿರು "ಪ್ರವೀಣನ ತಲೆ ಸರಿಯಿಲ್ಲ" ಎಂದು ಗಂಟೆಗೊಂದು ಸಾರಿ ಡಂಗುರ ಹೊಡೆಯುತ್ತಿದ್ದ.


ಇಷ್ಟೆಲ್ಲಾ ನಡೆಯುತ್ತಿದ್ದಾಗ ಪ್ರಮೋದ್ ಮಹಾಜನ್ ಚಿಂತಾಜನಕ ಸ್ಥಿತಿಯಲ್ಲಿ ಪ್ರಜ್ಞೆ ಕಳೆದುಕೊಂಡು ಹಿಂದೂಜಾ ಆಸ್ಪತ್ರೆಯಲ್ಲಿದ್ದರು. ಆತನ ಪತ್ನಿ ರೇಖಾ, ಮಕ್ಕಳು, ಮತ್ತೊಬ್ಬ ತಮ್ಮ, ಅಮ್ಮನೂ ಅಲ್ಲೇ ಇದ್ದರು. ಹತ್ಯಾಕಾರಿ ಪ್ರವೀಣಾ ಪೋಲೀಸ್ ಕಸ್ಟಡಿಯಲ್ಲಿದ್ದ. ಆಗಲೇ ಎಲ್ಲರಿಗೂ ಆಶ್ಚರ್ಯವಾಗುವಂತೆ ವರ್ತಿಸಿದವಳು ಸಾರಂಗಿ ಎಂಬ ಮಹಿಳೆ. ಈಕೆ ಪ್ರಮೋದ್‌ಗೆ ಗುಂಡಿಟ್ಟ ಪ್ರವೀಣನ ಪತ್ನಿ. ಈ ಸಾರಂಗಿ ಪೋಲೀಸ್ ಕಸ್ಟಡಿಯಲ್ಲಿದ್ದ ತನ್ನ ಗಂಡನನ್ನು ಹೋಗಿ ನೋಡಲಿಲ್ಲ, ಬದಲಾಗಿ ಆಸ್ಪತ್ರೆಯಲ್ಲಿದ್ದ ಪ್ರಮೋದ್ ಮಹಾಜನ್‌ನನ್ನು ಕಾಣುವ ಅಪೇಕ್ಷೆ ವ್ಯಕ್ತಪಡಿಸಿದ್ದಳು. ಇದು ಅಸಹಜವೆಂದು ಯಾರಿಗೂ ಅನ್ನಿಸಬೇಕಿರಲಿಲ್ಲ.

ಯಾಕೆಂದರೆ ದುಷ್ಕೃತ್ಯವೆಸಗಿದ ಪತಿಯನ್ನು ನೋಡದೆ ನೊಂದವರ ಬಳಿ ಹೋಗಿ ಸಾಂತ್ವನ ಹೇಳಲು ಬಯಸಿದ್ದ ಸಾರಂಗಿಯ ನಿರ್ಧಾರ ಮಾನವೀಯವಾಗಿಯೇ ಇತ್ತು. ಆದರೆ ಇದಕ್ಕೆ ಇನ್ನೂ ಹಲವು ಹತ್ತು ಕಾರಣಗಳಿರುವ ವಿಚಾರ ನಿಧಾನವಾಗಿ ಹೊರಬಿದ್ದಿದೆ.

ಶ್ರೀಮತಿ ಸಾರಂಗಿ ಪ್ರವೀಣ್ ಮಹಾಜನ್ ಎಂಬ ಮಹಿಳೆ ಪ್ರಮೋದ್ ಮಹಾಜನ್ ಜೊತೆಗೆ ಬಹಳ 'ಆಪ್ತ'ವೆನಿಸುವ ದೀರ್ಘಕಾಲದ ಒಡನಾಟ ಹೊಂದಿದ್ದಳೆಂಬ ವಿಷಯ ಈಗ ಚರ್ಚೆಯಾಗುತ್ತಿದೆ.

ಪ್ರವೀಣ್ ರೊಚ್ಚಿಗೇಳಲು, ತನ್ನ ಅಣ್ಣ ಪ್ರಮೋದ್‌ಗೆ ಗುಂಡಿಡಲು, ದೇಶದ ದೊಡ್ಡ ನಾಯಕನ ಸಾವಿನ ಸುದ್ದಿ ಕೇಳಿ ಕಿರುನಗೆ ಸೂಸಿ ನಂತರವೂ ಸ್ಥಿತಪ್ರಜ್ಞನಂತೆ ವರ್ತಿಸಲು ಇದೇ ಪ್ರಮುಖ ಕಾರಣವಾಗಿರಬಹುದೆಂಬ ಬಗ್ಗೆ ಮೀಡಿಯಾ ಮಾತುಗಳು ಕೇಳಿಬರುತ್ತಿವೆ. ಅದಕ್ಕೆ ಸೂಕ್ತ ತರ್ಕಗಳೂ ಈಗ ಗಾಳಿಯಲ್ಲಿ ಹಾರಾಡುತ್ತಿವೆ.

ಈ ಸಾರಂಗಿ ತನ್ನ ಗಂಡ ಪ್ರವೀಣನನ್ನು ಪ್ರೀತಿಸಿಯೊ, ಅಥವಾ ಇಷ್ಟಪಟ್ಟು ಮದುವೆಯಾಗಿರಲಿಲ್ಲ. ಆಕೆಗೆ ಪ್ರವೀಣ್‌ಗೂ ಮುನ್ನ ಪರಿಚಯವಾಗಿದ್ದಿದ್ದು ಪ್ರಮೋದ್ ಮಹಾಜನ್. ಎಬಿವಿಪಿ-ಬಿಜೆಪಿ ಎಂದೆಲ್ಲಾ ಓಡಾಟವಿದ್ದಿದ್ದೂ ಪ್ರಮೋದ್ ಜೊತೆಗೇನೆ. ನಂತರವೇ ಆಕೆ ಪ್ರಮೋದ್ ಮಹಾಜನ್‌ನ ಸಲಹೆ ಮೇರೆಗೆ ಆತನ ತಮ್ಮ ಪ್ರವೀಣನನ್ನು ಮದುವೆಯಾಗಿದ್ದಳು.



ಕಾಲೇಜು ಹುಡುಗಿ ಎಬಿವಿಪಿ ಸೇರಿದ್ದು

ಈಗ್ಗೆ ಹದಿನೆಂಟಿಪ್ಪತ್ತು ವರ್ಷಗಳ ಹಿಂದೆ ಆಗಿನ್ನೂ ಮೂವತ್ತೇಳರಲ್ಲಿದ್ದ ಬಿಜೆಪಿಯ ಯುವ ಸ್ಮಾರ್ಟ್ ನಾಯಕ ಪ್ರಮೋದ್ ಮಹಾಜನ್ ಒಮ್ಮೆ ನಾಗಪುರದ ಧರ್ಮಾಪರ್ತ್ ಕಾಲೇಜಿನ ಬೆಳ್ಳಿಹಬ್ಬದ ಫಂಕ್ಷನ್‌ಗೆ ಅತಿಥಿಯಾಗಿ ಹೋಗಿದ್ದರು. ಅವತ್ತು ಸ್ವಾಗತಗೀತೆ ಇತ್ಯಾದಿ ಹಾಡಿ ಮಿಂಚಿದ್ದ ಸಾರಂಗಿಯನ್ನು ಸ್ವತಃ ಪ್ರಮೋದ್ ಮಹಾಜನ್ ಕರೆಸಿ ಪರಿಚಯಿಸಿಕೊಂಡಿದ್ದರು. ನಂತರ ಸಾರಂಗಿ ಬಿಜೆಪಿಯ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಸೇರಿ ಓಡಾಡಿದಳು. ಪ್ರಮೋದ್ ಮಹಾಜನ್ ಜೊತೆ ಅವಳ ಒಡನಾಟವೂ ಬೆಳೆಯಿತು. ಆಮೇಲೆ ಬಿಜೆಪಿ ನಾಯಕ ಪ್ರಮೋದ್ ಸಾರಂಗಿಯನ್ನು ತನ್ನ ತಮ್ಮ ಪ್ರವೀಣನೊಂದಿಗೆ ಮದುವೆ ಮಾಡಿಸಿದ್ದರು.

ಅಲ್ಲಿಂದಾಚೆಗೆ ಈ ಮೂವರ ನಡುವಿನ ಕೌಟುಂಬಿಕ ಒಡನಾಟಗಳ ಬಗ್ಗೆ ಯಾರಿಗೂ ಹೆಚ್ಚು ತಿಳಿದಿಲ್ಲ. ಪ್ರಮೋದ್ ಮಹಾಜನ್ ಮುಂಬೈ ಸೇರಿಕೊಂಡು 1996 ರಲ್ಲಿ ಮೊದಲ ಬಾರಿಗೆ, ಎಲೆಕ್ಷನ್ ಗೆದ್ದು ಪಾರ್ಲಿಮೆಂಟ್‌ಗೆ ಹೋದರು. ತಮ್ಮ ಪ್ರವೀಣ ಮುಂಬೈ ಸಮೀಪದ ಥಾಣೆ ಪಟ್ಟಣದಲ್ಲಿ ನೆಲೆನಿಂತು ಕಟ್ಟಡ ನಿರ್ಮಾಣ ವ್ಯವಹಾರ ಶುರು ಮಾಡಿಕೊಂಡ. ಲಾಭ-ನಷ್ಟ ಎರಡೂ ಕಂಡ, ಆರಕ್ಕೇರದ ಮೂರಕ್ಕಿಳಿಯದ ವಿಚಿತ್ರ ಸ್ಥಿತಿಯಲ್ಲೇ ಉಳಿದಿದ್ದ. ಅತ್ತ ಬಿಜೆಪಿಯಲ್ಲಿ ಪ್ರಭಾವಶಾಲಿ ನಾಯಕನಾಗಿ ಬೆಳೆದಿದ್ದ ಪ್ರಮೋದ್ ಮಹಾಜನ್ ವಾಜಪೇಯಿ ಸರ್ಕಾರದಲ್ಲಿ ದೂರ ಸಂಪರ್ಕ ಖಾತೆ ಸಚಿವರಾದರು. ಆಗಲೇ ರಿಲೆಯನ್ಸ್ ಇನ್‌ಫೋಕಾಂ ಜೊತೆ ಪ್ರಮೋದ್ ಕುದುರಿಸಿದ್ದ 700 ಕೋಟಿಯ ಭ್ರಷ್ಟಾಚಾರದ ಡೀಲ್ ಹೊರಬಿತ್ತು. ಅದೇ ರಿಲೆಯನ್ಸ್ ಕಂಪನಿಯಲ್ಲಿ ತಮ್ಮ ಪ್ರವೀಣನಿಗೆ ಕನ್‌ಸಲ್‌ಟೆಂಟಾಗಿ 70 ಸಾವಿರ ಸಂಬಳ ಬರುವ ಕೆಲಸ ಕೊಡಿಸಿದ್ದರು ಮಿನಿಸ್ಟರ್ ಪ್ರಮೋದ್ ಮಹಾಜನ್. ಆಶ್ಚರ್ಯದ ವಿಚಾರವೇನೆಂದರೆ ಈ ಸಂಬಳದ ಹಣ ಕೆಲಸಗಾರ ಪ್ರವೀಣ್‌ಗೆ ಬದಲು ಅವನ ಹೆಂಡತಿ ಸಾರಂಗಿಯ ಕೈಗೆ ತಲುಪುವಂತೆ ವ್ಯವಸ್ಥೆ ಮಾಡಲಾಗಿತ್ತು. ಇದು ಪ್ರವೀಣನ ಆತ್ಮಗೌರವಕ್ಕೆ ಪೆಟ್ಟಾಗುವ ಸಂಗತಿ ಯಷ್ಟೇ ಅಲ್ಲ; ಹಣ ಸಾರಂಗಿಗೇ ತಲುಪಿಸುವ ಪ್ರಮೋದರ ಉದ್ದೇಶಗಳ ಬಗ್ಗೆಯೂ ಅನುಮಾನ ಮೂಡಿಸು ವಂತಿದೆ.

ಇದರೊಂದಿಗೆ ಪ್ರವೀಣನ ಕಟ್ಟಡ ನಿರ್ಮಾಣ ಬ್ಯುಸಿನೆಸ್‌ಗೆ ಒಂದಷ್ಟು ಗುತ್ತಿಗೆ ಕೊಡಿಸಿದ್ದ ಪ್ರಮೋದ್ ಇಡೀ ಥಾಣೆ ಜಿಲ್ಲೆಯ ಅಪೊಲೋ ಟೈರ್ ಏಜನ್ಸಿಯನ್ನು ತಮ್ಮನಿಗೆ ಕೊಡಿಸಿದ್ದರು.

ಒಂದು ಸಣ್ಣ ಅಪಾರ್ಟ್‌ಮೆಂಟು, ಚಿಕ್ಕ ಮಾರುತಿ ಸ್ವಿಫ್ಟ್ ಕಾರು, ಯಥೇಚ್ಛ ಸಾಲ ಇವಿಷ್ಟೇ 45 ವರ್ಷದ ಪ್ರವೀಣನ ಸಾಧನೆಗಳು. ಹತ್ತಿರತ್ತಿರ ಎರಡು ಸಾವಿರ ಕೋಟಿ ರೂಪಾಯಿ ಅಕ್ರಮ ಹಣ ಮಾಡಿದ್ದಾನೆನ್ನಲಾಗಿರುವ ಪ್ರಮೋದ್ ಮಹಾಜನ್‌ನ ಸಾಧನೆ ಎದಿರು ಇದು ಕಿಲುಬು ಕಾಸಿಗೂ ಸಮವಲ್ಲ.

ಆದರೆ ಅಣ್ಣ-ತಮ್ಮಂದಿರ ನಡುವಿನ ಈ ಅಂತಸ್ತಿನ ತಾರತಮ್ಯವೊಂದೇ ಈ ಹತ್ಯೆಗೆ ಕಾರಣವಾ ಎಂದು ನೋಡಿದರೆ ಪ್ರವೀಣನ ವರ್ತನೆ ಅದನ್ನು ಸಮರ್ಥಿಸುತ್ತಿಲ್ಲ.

ಏಪ್ರಿಲ್ 22 ರಂದು ಅಣ್ಣ ಪ್ರಮೋದ್‌ಗೆ ಗುಂಡು ಹೊಡೆದು ತಾನೇ ತಣ್ಣಗೆ ನಡೆದು ಪೋಲೀಸರೆದಿರು ಶರಣಾಗಿದ್ದ ಈ ಪ್ರವೀಣ್, 'ಈ ಹತ್ಯೆ ನಡೆಸಲು ಒಂದು ತಿಂಗಳಿಂದ ಕಾದಿದ್ದೆ' ಎಂದೂ ಹೇಳಿದ್ದಾನೆ. ಈ ಹತ್ಯೆಯ ಪರಿಣಾಮದಿಂದ ತನ್ನ ಉಳಿದ ಜೀವಮಾನವಿಡೀ ಜೈಲಿನಲ್ಲಿರಬೇಕಾಗುತ್ತದೆ. ತನ್ನ ಪಾಲಿಗೆ ಹೊರ ಜಗತ್ತು ಮುಚ್ಚಿಹೋಗುತ್ತದೆ ಎಂಬುದು ಪ್ರವೀಣನಿಗೆ ಗೊತ್ತಿಲ್ಲದೆ ಏನಿಲ್ಲ. ಆದರೂ ಅವನು ಈ ಹತ್ಯೆಯ ನಿರ್ಧಾರ ಮಾಡುತ್ತಾನೆಂದರೆ ಅದರ ಹಿಂದೆ ಜುಜುಬಿ ಹಲವು ಲಕ್ಷಗಳ ಹಣ, ಹಠಾತ್ತನೆ ಉಕ್ಕಿಬಂದ ಆವೇಶ ಮಾತ್ರ ಕಾರಣವಾಗಿರಲಿಕ್ಕಿಲ್ಲ.




ಈಗ್ಗೆ ಕೆಲ ವರ್ಷಗಳ ಹಿಂದಿನಿಂದ ಬಿಜೆಪಿಯೊಳಗೇ ಪ್ರಮೋದ್ ಮಹಾಜನ್ ರಾಸಲೀಲೆಗಳ ಬಗ್ಗೆ ಪುಕಾರುಗಳಿದ್ದವು. ಮೋನಿಕಾ ಪ್ರಕರಣವೂ ಅದರಲ್ಲೊಂದು. ಪ್ರಮೋದ್ ಮಹಾಜನ್ ಕೇಂದ್ರ ಸರ್ಕಾರದಲ್ಲಿ ದೂರ ಸಂಪರ್ಕ ಖಾತೆ ಸಚಿವರಾಗಿದ್ದಾಗ ಇಲಾಖೆಯ ಸಲಹಾ ಸಮಿತಿಗೆ ಮೋನಿಕಾ ಎಂಬ ಎಳೆ ಹುಡುಗಿಯೊಬ್ಬಳನ್ನು ಸದಸ್ಯೆಯನ್ನಾಗಿ ನೇಮಿಸಿದ್ದರು. ಈ ಮೋನಿಕಾಳೂ ಸಹ ಎಬಿವಿಪಿ ಕಾರ್ಯಕರ್ತೆಯಾಗಿದ್ದವಳೆ. ಜೊತೆಗೆ ಪ್ರಮೋದ್ ಮಹಾಜನ್‌ರೊಂದಿಗೆ 'ಆಪ್ತ' ಒಡನಾಟ ಹೊಂದಿದ್ದ ವಿಷಯ ಇಡೀ ಬಿಜೆಪಿಗೆ ಗೊತ್ತಿತ್ತು. ಟೆಲಿಕಮ್ಯೂನಿಕೇಷನ್ ಸಲಹಾ ಸಮಿತಿಯ ಸದಸ್ಯೆಯಾಗುವ ಯೋಗ್ಯತೆ, ಪರಿಣಿತಿ ಎರಡೂ ಅವಳಿಗಿರಲಿಲ್ಲ. ಪ್ರಮೋದ್ ಜೊತೆ ಲಲ್ಲೆ ಹೊಡೆಯಲು ಸಿದ್ಧಳಿದ್ದಳೆಂಬುದೇ ಅವಳಿಗಿದ್ದ ಅರ್ಹತೆ ಯಾಗಿತ್ತು.

ಬಿಜೆಪಿಯ ಆಶಾಕಿರಣ, ಭಾರತದ ಭವಿಷ್ಯದ ಪ್ರಧಾನಿ, ವಾಜಪೇಯಿಯ ದೃಷ್ಟಿಯಲ್ಲಿ 'ಲಕ್ಷ್ಮಣ'ನೆನಿಸಿಕೊಂಡಿದ್ದ ಪ್ರಮೋದ್ ಮಹಾಜನ್‌ರ ವೈಯಕ್ತಿಕ ಬದುಕಿನಲ್ಲಿ 'ರಾಮ'ನ ಗುಣಗಳಿಗಿಂತಾ ಹೆಚ್ಚಾಗಿ ಇಂತಾ ರಂಗೀಲಾ ಚಟುವಟಿಗಳೇ ಜಾಸ್ತಿ ಇದ್ದವೆಂಬುದರ ಹಿನ್ನೆಲೆಯಲ್ಲಿ ಅವರ ಹತ್ಯೆಯನ್ನು ವಿಶ್ಲೇಷಿಸುವ ಕೆಲಸ ಈಗ ನಡೆದಿದೆ.

ಬಿಜೆಪಿಗೆ ಪ್ರಮೋದ್ ಮಹಾಜನ್ ಸಾವು ಒಂದು ಪೆಟ್ಟಾದರೆ ಈಗ ಪರಪತ್ನಿ ಪೀಡನೆಯ ಅಸಲಿ ಸಂಗತಿಗಳು ಹೊರಬೀಳುತ್ತಿರುವುದಂತೂ ಈ ರಾಮಭಕ್ತರಿಗೆ ಇನ್ನೂ ದೊಡ್ಡ ಪೆಟ್ಟು.

"307 ಬದಲು 302.... ಅಷ್ಟೇ ತಾನೆ"

ಅಣ್ಣ ಪ್ರಮೋದ್ ಮಹಾಜನ್ ಸತ್ತ ಸುದ್ದಿ ಹೇಳಿದ ಮುಂಬೈ ಜೈಲಿನ ಜೈಲರ್‌ಗೆ ಕೊಲೆಗಾರ ಪ್ರವೀಣ್ ನೀಡಿದ ಉತ್ತರ "ತ್ರೀ ನಾಟ್ ಸೆವೆನ್ ಬದಲು ತ್ರೀ ನಾಟ್ ಟೂ ಆಗುತ್ತೆ ಅಷ್ಟೇ ತಾನೆ" ಎಂದು. 307 ಅಂದರೆ ಅಟೆಂಪ್ಟ್ ಟು ಮರ್ಡರ್, 302 ಅಂದರೆ ಕೊಲೆ ಎಂದು ಇಂಡಿಯನ್ ಪೀನಲ್ ಕೋಡ್ ಹೇಳುತ್ತದೆ.



ಈ ಪ್ರವೀಣ ಮುಂದೆ ತನಗ್ಯಾವ ಶಿಕ್ಷೆಯಾಗುತ್ತದೆ ಎಂಬ ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಅದರ ಬದಲಾಗಿ ತನಗೆ ಪ್ರತಿ ದಿನ ನ್ಯೂಸ್ ಪೇಪರ್ ಓದಲು ಹಾಗೂ ಟಿವಿ ನ್ಯೂಸ್ ನೋಡಲು ಅವಕಾಶ ನೀಡುವಂತೆ ಪೋಲೀಸರಿಗೆ ಕೇಳಿದ್ದಾನೆ.

ಹತ್ಯೆಗೆ ಮುನ್ನ ಎರಡು ಬಾರಿ 'ನಿನ್ನ ಕಿರಿಕಿರಿ (humiliation) ನಿಲ್ಲಿಸದಿದ್ದರೆ ಕೊಲ್ಲಬೇಕಾಗುತ್ತದೆ' ಎಂದು ಪ್ರಮೋದ್‌ಗೆ ಎಚ್ಚರಿಸಿದ್ದೆ ಎಂಬುದಾಗಿ ಪ್ರವೀಣ್ ಪೋಲೀಸರಿಗೆ ಹೇಳಿಕೆ ನೀಡಿದ್ದಾನೆ. ಈ ಕಿರಿಕಿರಿ ಸಾರಂಗಿಗೆ ಸಂಬಂಧಿಸಿದ್ದಾಗಿತ್ತೆ ಎಂಬುದೇ ಪ್ರಶ್ನೆ. ಏಕೆಂದರೆ 'ಹಣ-ಆಸ್ತಿಗಾಗಿ ಈ ಕೊಲೆ ಮಾಡಿದೆಯಾ' ಎಂಬ ವಿಚಾರಣೆಗೆ 'ನಾನು ಭಿಕ್ಷುಕನಲ್ಲ, ನನ್ನ ಅನ್ನ ದುಡಿದುಕೊಳ್ಳಬಲ್ಲೆ' ಎಂದುತ್ತರಿಸಿದ್ದಾನೆ ಪ್ರವೀಣ್.

ಚಿಂದು ಎಂಬ ಅಡ್ಡ ಹೆಸರಿನ ಪ್ರವೀಣ ಮದುವೆಗೆ ಮುನ್ನ teetotaller ನಂತಿದ್ದವನು ನಿಧಾನವಾಗಿ ಕುಡಿತ ಶುರು ಮಾಡಿದ್ದ. ಆದರೆ ಅವನ ಕುಡಿತದ ಬಗ್ಗೆ ನೆರೆಹೊರೆ[redacted]ಯಿಂದ ದೂರುಗಳೇನೂ ಇರಲಿಲ್ಲ. ಪ್ರಮೋದ್ ಹಾಗೂ ಸಾರಂಗಿ ಬಗ್ಗೆ ಬಿಜೆಪಿಯೊಳಗೇ ಗೇಲಿ ಮಾತುಗಳು ಶುರುವಾದಾಗ ಬಹುಶಃ ಪ್ರವೀಣನ ಮನಸ್ಸು ಕುದ್ದು ಹೋಗಿರಬೇಕು. ಕೊಲೆಯ ಹಿಂದಿನ ದಿನ ಹೆಂಡತಿ ಮಕ್ಕಳನ್ನು ಕರೆದೊಯ್ದು ಹೋಟೆಲಿನಲ್ಲಿ ಊಟ ಮಾಡಿಸಿದ್ದಾನೆ ಪ್ರವೀಣ. ಅದೇ ರಾತ್ರಿ ಪ್ರಮೋದ್ ಮಹಾಜನ್‌ನೊಂದಿಗೆ ಹನ್ನೊಂದೂವರೆ ಹೊತ್ತಿನಲ್ಲಿ ಫೋನ್ ಮಾಡಿ ಬಿರುಸಾಗಿ ಮಾತಾಡಿದ್ದಾನೆ. ಆ ರಾತ್ರಿ ಏನೆಂದು ನಿರ್ಧರಿಸಿಕೊಂಡನೊ ಏನೋ ಪ್ರವೀಣ ಬೆಳಗ್ಗೆ ಐದಕ್ಕೆ ಎದ್ದು ಸೀದಾ ಮುಂಬೈಗೆ ಬಂದು ಪ್ರಮೋದ್‌ಗೆ ಗುಂಡಿಟ್ಟ. ಈ ಹತ್ಯೆಗೆ ಕೆಲವೇ ನಿಮಿಷ ಮುನ್ನ ದಾರಿಯಲ್ಲೇ ಮೂರು ಸಾರಿ ಕಾರು ನಿಲ್ಲಿಸಿ 'ಕೊಲೆ ಮಾಡುವುದು ಸರೀನಾ.... ಈ ಕೊಲೆ ಆಗಲೇಬೇಕಾ.... ಪ್ರಮೋದ್ ಸಾಯಲೇಬೇಕಾ' ಎಂದೆಲ್ಲಾ ಯೋಚಿಸಿದ್ದಾಗಿ ಪ್ರವೀಣ್ ಪೋಲೀಸರಿಗೆ ಹೇಳಿದ್ದಾನೆ.

ಅಂದರೆ ಅವನ ಮನಸ್ಸು ಒಮ್ಮೆ ಹಿಂಜರಿದರೆ ಮತ್ತೊಮ್ಮೆ ಯಾವುದೋ ಸೇಡಿಗೆ ಬಿದ್ದಂತೆ ಆತ್ಮಹತ್ಯಾ ಬಾಂಬರ್‌ನಂತೆ ಪ್ರಮೋದ್ ಮಹಾಜನ್ ಬಳಿಗೆ ಕರೆದೊಯ್ದಿದೆ.

ಈ ಇಡೀ ದುರಂತ ಘಟನೆಗಳ ಕ್ಲೈಮ್ಯಾಕ್ಸ್ ಏನೆಂದರೆ ಪ್ರಮೋದ್ ನಿಧನರಾದಾಗ ಪ್ರವೀಣ್ ಹೇಳಿರುವ ಇನ್ನೊಂದು ಮಾತು:

"ಕೊನೆಗೂ ಹೋದ...." ಎಂದನಂತೆ ಪ್ರವೀಣ್.

ಅಂದರೆ ಇಡೀ ಬಿಜೆಪಿ, ಕೆಲ ಜನಸಾಮಾನ್ಯರು ಪ್ರಮೋದ್ ಮಹಾಜನ್ ಬದುಕುಳಿಯಲಿ ಎಂದು ಅಪೇಕ್ಷೆ ಪಡುತ್ತಿದ್ದಾಗ, ಕುಟುಂಬದವರೆಲ್ಲಾ ಕಳವಳ ಪಡುತ್ತಿದ್ದಾಗ ಈ ಪ್ರವೀಣನೊಬ್ಬ ಮಾತ್ರ ಪ್ರಮೋದ್ ಸಾವನ್ನು ಬಯಸುತ್ತಿದ್ದ!

ಯಾಕೆ?

ಯಾವುದೇ ಕೊಲೆಯ ತನಿಖೆ ಶುರು ಮಾಡುವಾಗ ಪೋಲೀಸರು ಕೆಲಸಾಮಾನ್ಯ ಕಾರಣಗಳನ್ನು ಹುಡುಕುತ್ತಾರೆ. ಹಣ-ಆಸ್ತಿ, ಸ್ತ್ರೀ, ವೈರತ್ವ ಇಂತವು.

ಪ್ರಮೋದ್‌ರ ಹತ್ಯೆಯಲ್ಲಿ ಈ ಎಲ್ಲಾ ವಿಚಾರಗಳೂ ಒಂದರೊಳಗೊಂದು ತಳಕು ಹಾಕಿಕೊಂಡಂತಿವೆ.

ಪೋಲೀಸರೇ ಈ ಸಿಕ್ಕು ಬಿಡಿಸಬೇಕು; ಇಲ್ಲ ಪ್ರವೀಣನೆ ಪೂರಾ ಬಾಯಿ ಬಿಡಬೇಕು ಅಷ್ಟೇ.

ಮದನ್‌ಲಾಲ್ ಖುರಾನ ಬ್ಲ್ಯಾಕ್‌ಮೇಲ್



ಬಿಜೆಪಿಯಿಂದ ಈಗ ಸಸ್ಪೆಂಡಾಗಿರುವ ದೆಹಲಿಯ ಮಾಜಿ ಮುಖ್ಯಮಂತ್ರಿ ಮದನ್‌ಲಾಲ್ ಖುರಾನಾ ಕೆಲ ವಾರಗಳ ಹಿಂದೆ ಬಿಜೆಪಿ ಮೇಲೇ ಒಂದು ಬಾಂಬ್ ಹಾಕಿದ್ದರು.

ಪಾರ್ಟಿಯ ಕೆಲ ನಾಯಕರ ವೈಯಕ್ತಿಕ ಭ್ರಷ್ಟ, ಅನೈತಿಕ ಜೀವನದ ಬಗ್ಗೆ ತಮ್ಮ ಬಳಿ ಸಾಕ್ಷ್ಯಾಧಾರಗಳಿರುವುದಾಗಿಯೂ, ತಾವದನ್ನು ಬಹಿರಂಗಪಡಿಸುವುದಾಗಿಯೂ ಖುರಾನ ಧಮಕಿ ಕೊಟ್ಟಿದ್ದರು.

ಬಿಜೆಪಿ ವಲಯದೊಳಗೆ ಆಗ ಖುರಾನಾರ ಈ ಹೇಳಿಕೆ 'ಪ್ರಮೋದ್ ಮಹಾಜನ್‌ಗೆ ಮೋನಿಕಾ ಹಾಗೂ ಸಾರಂಗಿ ಜೊತೆಗಿದ್ದ ಒಡನಾಟದ ಕುರಿತಂತೆ ಇದೆ' ಎಂಬುದು ಗೊತ್ತಾಗಿತ್ತು. ಈ ಹೇಳಿಕೆ ನೀಡಿದ ಖುರಾನರನ್ನು ಬಿಜೆಪಿ ತಕ್ಷಣ ಸಸ್ಪೆಂಡ್ ಮಾಡಿತ್ತು. ಖುರಾನ ಏನನ್ನಾದರೂ ಹೇಳುವ ಮೊದಲೇ ಪ್ರಮೋದ್‌ಗೆ ತಮ್ಮನಿಂದಲೇ ಗುಂಡೇಟು ಬಿತ್ತು.

ಖುರಾನಾ ಸುಮ್ಮನಾಗಿಬಿಟ್ಟರು. ಆದರೆ ಬೆಂಕಿಯಿಲ್ಲದೆ ಹೊಗೆಯಾಡಲು ಹೇಗೆ ಸಾಧ್ಯ?

ರಾಯಚೂರು ಬಡ ಮುಸ್ಲಿಂ ಹುಡುಗೀರು ಗುಜರಾತ್‌ಗೆ!



ಬೇಕಾರ್ ಅರಬ್ ಸಿರಿವಂತರಿಗೆ ಕೇರಳದ ಅಮಾಯಕ ಹುಡುಗಿಯರು ಬಲಿಯಾಗುತ್ತಲೇ ಇದ್ದಾರೆ. ಹಾಗೆಯೇ ಗುಜರಾತಿನ ಐಶ್ವರ್ಯವಂತರ ಹಾಸಿಗೆ ದಾಹಕ್ಕೆ ರಾಯಚೂರಿನ ಬಡ ಮುಸ್ಲಿಂ ಹುಡುಗಿಯರು ತಮ್ಮ ದೇಹವನ್ನು ತೇಯುತ್ತಲೇ ಇದ್ದಾರೆ.

ರಾಯಚೂರಿನ ಎಲ್.ಬಿ.ಎಸ್. ನಗರ, ಸಿಯಾಟಲಾವ್, ಅರಬ್ ಮೊಹಲ್ಲಾ, ಮಂಗಳವಾರಪೇಟೆಗಳಲ್ಲಿ ವಾಸವಾಗಿರುವ ಬಡ ಮುಸ್ಲಿಂ ಕುಟುಂಬಗಳ ಹೆಣ್ಣು ಮಕ್ಕಳನ್ನು ಮೋಸಗೊಳಿಸುವ ಜಾಲವೊಂದು ಆ ಕಾಲದಿಂದಲೂ ಜಾರಿಯಲ್ಲಿದೆ.

ಅಂದಹಾಗೆ ಈ ಏರಿಯಾಗಳ ಬಹುತೇಕ ಕುಟುಂಬಗಳಿಗೆ ಗುಜರಾತ್‌ನ ಜಾಮ್ ನಗರದೊಂದಿಗೆ ಬೀಗತನದ ಸಂಪರ್ಕಗಳಿವೆ. ರಾಯಚೂರಿನ ಸುಮಾರು 150 ಕ್ಕಿಂತ ಹೆಚ್ಚು ಮುಸ್ಲಿಂ ಹೆಣ್ಣು ಮಕ್ಕಳನ್ನು 'ಮದುವೆ' ಹೆಸರಲ್ಲಿ ಜಾಮ್‌ನಗರದ ಸೊಸೆಯಂದಿರನ್ನಾಗಿ ಮಾಡಲಾಗಿದೆ. ಈ ಜಾಮ್ ನಗರದ ಸೊಸೆಯಂದಿರ ಬಾಳು ನರಕಮಯವಾಗಿದೆ ಎನ್ನುವುದು ಆಗಾಗ ಅಲ್ಲಿಂದ ಓಡಿ ಬರುವ ರಾಯಚೂರು ಪುತ್ರಿಯರ ಅಳಲಿನಿಂದಲೇ ಸಾಬೀತಾಗಿದೆ. ಈಗ ಮತ್ತೊಂದು ಪ್ರಕರಣ ಸುದ್ದಿಯಲ್ಲಿದೆ.


ವ್ಹೊ ಮರ್ಡರ್ ಔರ್....

2004... ಅವತ್ತೊಬ್ಬ ಬ್ರೋಕರ್‌ನ ನಿಗೂಢ ಕೊಲೆಯಾಗಿ ಹೋಗಿತ್ತು. ಮದುವೆಗಳನ್ನು ಮಾಡಿಸುವುದನ್ನೇ ದಂಧೆಯಾಗಿಸಿಕೊಂಡಿದ್ದ ಜಾಮ್ ನಗರದ ಹರಿಪುರದವರಾದ ಹಿಮ್ಮತಲಾಲ್ ಹಾಗೂ ಜುಲೇಖಾ ಎಂಬಿಬ್ಬರು ಜೂನ್ 14, 2004 ರಂದು ರಾಯಚೂರಿನ ತೀನ್ ಕಂದೀಲ್ ಹತ್ತಿರ ಇರುವ ಖಾನ್ ಸಹೋದರರ ಪ್ಯಾರಡೈಸ್ ಲಾಡ್ಜ್‌ನಲ್ಲಿ ತಂಗಿದ್ದರು. ಅವರಿಬ್ಬರೂ ರಾಯಚೂರಿನ ಮುಸ್ಲಿಂ ಹೆಣ್ಣುಗಳ ಖರೀದಿಗೆಂದೇ ಬಂದಿದ್ದರು. ಅದೇನು ಎಡವಟ್ಟಾಯ್ತೋ ಏನೋ? ಜೂನ್ 15 ಮತ್ತು 16 ರ ಮಧ್ಯೆ ಹಿಮ್ಮತ್‌ಲಾಲ್‌ನನ್ನು ಕಟ್ಟಿಗೆ ಕುರ್ಚಿಯಿಂದ ಹೊಡೆದ್ಹೊಡೆದು ಸಾಯಿಸಿಬಿಟ್ಟದ್ದು ಅವನ ಮಿತ್ರ ಜುಲೇಖಾ! ಮುಂದೆ ರಾಯಚೂರಿನ ಪೊಲೀಸರು ಜಾಮ್‌ನಗರದಿಂದ ಜುಲೇಖಾನನ್ನು ಎತ್ತಿ ಹಾಕಿಕೊಂಡು ಬಂದಾಗಲೇ ಮುಸ್ಲಿಂ ಹೆಣ್ಣುಮಕ್ಕಳ ಮಾರಾಟದ ಜಾಲದ ಬಗ್ಗೆ ಸಾರ್ವಜನಿಕರಿಗೆ ಒಂದಿಷ್ಟು ಅರಿವು ಮೂಡಿದ್ದು.

ಕೊಲೆಯಾದ ಮದುವೆ ಬ್ರೋಕರ್ ಹಿಮ್ಮತ್‌ಲಾಲ್‌ನ ನೆರವಿನೊಂದಿಗೆ ಆರೋಪಿ ಜುಲೇಖಾ ರಾಯಚೂರಿನ ಬಡ ಮುಸ್ಲಿಂ ಹುಡುಗಿಯೊಬ್ಬಳನ್ನು ಮೊದಲೇ ಮದುವೆ ಆಗಿದ್ದ. ಜುಲೇಖಾನ ವಿಕೃತಿಗಳಿಗೆ ನೊಂದ ರಾಯಚೂರು ಹುಡುಗಿ ಜಾಮ್‌ನಗರದಿಂದ ಓಡಿ ಬಂದು ತವರು ಸೇರಿದ್ದಳು. ಬ್ರೋಕರ್ ಹಿಮ್ಮತ್‌ಲಾಲ್‌ನ ಸಹಾಯದಿಂದ ಮತ್ತೆ ಆ ಹುಡುಗಿಯನ್ನು ಅಥವಾ ಹೊಸ ಎಳೆ ಹುಡುಗಿಯನ್ನು 'ಹೆಂಡ್ತಿ' ಮಾಡಿಕೊಳ್ಳಲು ಬಂದಿದ್ದ ಜುಲೇಖಾ ಹಿಮ್ಮತ್‌ಲಾಲ್‌ನನ್ನು ಫಿನಿಶ್ ಮಾಡಿಬಿಟ್ಟಿದ್ದ. ಈಗ ಮೊನ್ನೆ ಮಾರ್ಚ್ 9 ರಂದು ಜುಲೇಖಾನಿಗೆ ಅಜೀವ ಜೈಲು ಶಿಕ್ಷೆಯಾಗಿದೆ.

ಈ ಹಿಂದೆ ದುಡ್ಡಿನ ಆಸೆಗೆ ತಮ್ಮ ಮುದ್ದು ಹೆಣ್ಣುಮಕ್ಕಳನ್ನು ಜಾಮ್‌ನಗರಕ್ಕೆ ಧಾರೆ ಎರೆಯುತ್ತಿದ್ದ ಬಡ ಮುಸ್ಲಿಮರು ಈಗ ಜುಲೇಖಾ ಪ್ರಕರಣದಿಂದ ಎಚ್ಚೆತ್ತಿದ್ದಾರೆ.

ಈಗ ಜಾಮ್‌ನಗರದ ಇರ್ಫಾನ್ ಅಲಿ, ಗಫಾರ್ ಇಸ್ಮಾಯಿಲ್, ಫಾರೂಕ್ ಎಂಬುವವರು ರಾಬಿಯೇ ಇಸ್ಮಾಯಿಲ್ ಮತ್ತು ಸಯೀದಾ ಎನ್ನುವ ಹೆಣ್ಣುಮಕ್ಕಳೊಂದಿಗೆ ರಾಯಚೂರಲ್ಲಿ ತಳವೂರಿ ಬಡ ಮುಸ್ಲಿಂ ಹೆಣ್ಣುಮಕ್ಕಳ ಬೇಟೆಯಲ್ಲಿ ತೊಡಗಿದ್ದಾರೆ.



ಎಸ್ಪಿ ಹಿತೇಂದ್ರ

ಜಾಮ್‌ನಗರದ ಈ ಐವರು ಪದೇಪದೇ ತನ್ನಲ್ಲಿ ಬಂದು ಬಡ ಮುಸ್ಲಿಂ ಹೆಣ್ಣುಮಕ್ಕಳಿಗಾಗಿ ಪೀಡಿಸುತ್ತಿದ್ದರು ಎಂದು ಸದರ ಬಜಾರ್ ಠಾಣೆಯಲ್ಲಿ ನಗರದ ಹೋಟೆಲ್ ಉದ್ಯಮಿ ಸೈಯದ್ ಮುಷ್ತಾಕ್ ದೂರು ದಾಖಲಿಸಿದ್ದಾರೆ. ಗುಜರಾತ್‌ನ ಜಾಮ್ ನಗರಕ್ಕೆ ಮದುವೆ ನೆಪದಲ್ಲಿ ಸಾಗಿಸಲ್ಪಟ್ಟ ಬಹುತೇಕ ಹುಡುಗಿಯರು ಅಲ್ಲಿ ವೇಶ್ಯಾ ಜಾಲದಲ್ಲಿ ನರಳುತ್ತಿದ್ದಾರೆ ಎಂಬ ಅನುಮಾನಗಳೂ ಇವೆ.

ಒಂದೊಮ್ಮೆ ಈ ಹೆಣ್ಣು ಮಾರಾಟ ಜಾಲದಿಂದ ಕೊಲೆಯಾಗಿತ್ತು ಈಗ ಮತ್ತೆ ಪ್ರಕರಣವೊಂದು ದಾಖಲಾಗಿದೆ. ರಾಯಚೂರು ಎಸ್ಪಿ ಹಿತೇಂದ್ರ ಸಾಹೇಬರು ಸಿದ್ಧೆ ರೋಗದಿಂದ ಹೊರಬಂದರೆ ರಾಯಚೂರಿನ ಅಮಾಯಕ ಬಡ ಮುಸ್ಲಿಂ ಹುಡುಗಿಯರು ಜಾಮ್‌ನಗರದ ನರಕದಿಂದ ಮುಕ್ತರಾಗುಬಲ್ಲರು.... -ಅಶೋಕ್ ನೀಮ್‌ಕರ್

ಮಹಾಜನ್ ಗುಂಡು ಅದ್ವಾನಿ ರಥಕ್ಕೂ ಬಡಿಯಿತಂತಲ್ಲಾ




ಬಿಜೆಪಿಗೆ ಕೇಡುಗಾಲ ಬಂತೆಂದು ಕಾಂಗ್ರೆಸ ಜ್ಯೋತಿಷಿಗಳು ಕವಡೆ ಬಿಟ್ಟುಕೊಂಡು ಕಣಿ ಹೇಳತೊಡಗಿವೆಯಂತಲ್ಲಾ, ಅವರ ಪ್ರಕಾರ ಅದ್ವಾನಿ ಎಂಬ ಕರಾಚಿಯ ಜಟಕಾವಾಲನಿಗೆ ಆಗಾಗ್ಗೆ ಜಟಕಾಗಾಡಿಗೆ ರಥದ ಅಲಂಕಾರ ಮಾಡಿ ತಿರುಗುವ ಚಟವಂತೆ. ಹೀಗೆ ಭಾರತವನ್ನು ಎರಡು ಬಾರಿ ಸುತ್ತಿದ ಜಟಕಾವಾಲ, ಮೂರನೇ ಬಾರಿ ಸುತ್ತುತ್ತಾ ಕರ್ನಾಟಕ ಪ್ರವೇಶಿಸುತ್ತಿದ್ದಂತೆ ಕನ್ನಡದ ಕಣ್ಮಣಿ ರಾಜುಕುಮಾರ ಕಣ್ಮರೆಯಾದರು. ಮಹಾತ್ಮನ ಸಾವು ಅನಿಷ್ಟಗಳನ್ನು ತಡೆಯುವಂತೆ ರಾಜ್‌ಕುಮಾರ್ ಸಾವು ಅದ್ವಾನಿ ರಥಯಾತ್ರೆಯನ್ನೇ ನಿಲ್ಲಿಸಿಬಿಟ್ಟಿತಂತಲ್ಲಾ.

ರಥದಿಂದ ಇಳಿದ ಅದ್ವಾನಿ ಎತ್ತ ಹೋಗುವುದೆಂದು ಯೋಚಿಸುತ್ತ ನಿಂತಿರುವಾಗ, ಉಮಾ ಭಾರತಿ ಎಂಬ ಶೂರ್ಪನಖಿ ತನ್ನೊಂದಿಗೆ ಖುರಾನನನ್ನು ಸೇರಿಸಿಕೊಂಡು ಹೊಸ ಬಿಜೆಪಿ ಕಟ್ಟಿದ ಸುದ್ದಿಯು ಬರಸಿಡಿಲು ಬಂದೆರಗಿತಂತಲ್ಲಾ. ಇದನ್ನು ಸಹಿಸಿಕೊಂಡು ಹೋರಾಡುವುದೇಗೆಂದು ಅದ್ವಾನಿ ಯೋಚಿಸುತ್ತಿರುವಾಗಲೇ ಅದ್ವಾನಿ ನಂತರದ ಪ್ರಧಾನಿ ಎಂದು ಬಿಂಬಿತವಾಗಿದ್ದ ಪ್ರಮೋದ್ ಮಹಾಜನ್ ಎಂಬುವನ ತಮ್ಮ ಭವ್ಯ ಭಾರತದ ಭಾವಿ ಪ್ರಧಾನಿಯನ್ನೇ ಗುಂಡು ಹಾರಿಸಿ ಮುಗಿಸಿದನಂತಲ್ಲಾ. ಪ್ರಮೋದ್ ಮಹಾಜನ್‌ನನ್ನು ಮುಗಿಸಿದ ಗುಂಡು ಅಷ್ಟಕ್ಕೇ ಸುಮ್ಮನಾಗದೆ ತನ್ನ ರಥವನ್ನೇ ಪುಡಿ ಮಾಡಿದ್ದನ್ನು ನೋಡಿದ ಅದ್ವಾನಿ ಬಿಕ್ಕಿ ಬಿಕ್ಕಿ ಅತ್ತರಂತಲ್ಲಾ, ಥೂತ್ತೇರಿ!!

* * * * * * * *

ಅತ್ತ ಬಿಜೆಪಿಗೆ ಬಂದ ಕೇಡುಗಾಲದಂತೆಯೇ ಇತ್ತ ಬಿಜೆಪಿ ಗುಂಪಿನ ಮಂತ್ರಿಯಾಗಿರುವ ಕೆ.ಎಸ್. ಈಶ್ವರಪ್ಪನೆಂಬುವನ ರಾಶಿಗೆ ದೇವೇಗೌಡನೆಂಬ ಶನಿ ಏಳನೇ ಸ್ಥಾನಕ್ಕೆ ವಕ್ಕರಿಸುವ ದಿನ ಬಹಳ ದೂರವಿಲ್ಲವೆಂದು ದಳದ ಹುಡುಗರೇ ಗುಟುರು ಹಾಕುತ್ತಿವೆಯಂತಲ್ಲಾ. ನೀರಾವರಿ ಇಲಾಖೆಯಲ್ಲಿ ನಡೆದಿರುವ ಕಳಪೆ ಕಾಮಗಾರಿ ವಿಷಯದ ತನಿಖೆ ಬಗ್ಗೆ ಈಶ್ವರಪ್ಪ ತಾರಕ ಸ್ವರದಲ್ಲಿ ಕೂಗುತ್ತಿರುವಾಗ, ಪತ್ರಕರ್ತರು "ಸ್ವಲ್ಪ ಇರಿ ಈಶ್ವರಪ್ಪನವರೆ. ತುಂಡು ಗುತ್ತಿಗೆ ಕಾಮಗಾರಿಯಿಂದಲೇ ಮೇಲ್ಬಂದು ಈಗ ಅದೇ ತುಂಡುಗುತ್ತಿಗೆ ಅವ್ಯವಹಾರದಲ್ಲಿ ತಮ್ಮ ಹೆಸರನ್ನು ಸೇರಿಸಿಕೊಂಡಿರುವ ಮಾಜಿ ಪ್ರಧಾನಿಯಾದ ದೇವೇಗೌಡರನ್ನು ತನಿಖೆ ಮಾಡುತ್ತೀರಾ?" ಎಂದು ಕೇಳಲಾಗಿ, ಈಶ್ವರಪ್ಪ "ಮುಲಾಜಿಲ್ಲದೆ ತನಿಖೆ ಮಾಡಿಸುತ್ತೇನೆ" ಎಂದು ಹೇಳಿದ್ದಲ್ಲದೆ, ಆ ಕೂಡಲೇ ಎಚ್ಚೆತ್ತುಕೊಂಡು "ದೇವೇಗೌಡರು ತುಂಡು ಗುತ್ತಿಗೆ ಕಂಟ್ರಾಕ್ಟರ್ ಅಲ್ಲವಲ್ಲ" ಎಂದು ಇನ್ನೂ ಜೋರಾಗಿ ಹೇಳಿದರಂತಲ್ಲಾ, ಇದನ್ನು ಕೇಳಿಸಿಕೊಂಡ ದೇವೇಗೌಡರು ಕಾಕಾ ವಾಹನನ ಅಬ್ಬರದಲ್ಲಿ, "ನಾನು ಈ ಸರ್ಕಾರದ ವಿರುದ್ಧವೂ ಹೋರಾಡಲು ಸಿದ್ಧ, ಬೇಕಿದ್ದರೆ ಈಗಿಂದೀಗಲೇ ಪತ್ರ "ಬರೆಯಬಲ್ಲೆ" ಎಂದು ಪೆನ್ನು ಪೇಪರ್ ರೆಡಿಯಾಗಿಟ್ಟುಕೊಳ್ಳಲು ದತ್ತನಿಗೆ ಸೂಚಿಸಿದರಂತಲ್ಲಾ, ಥೂತ್ತೇರಿ!!



* * * * * * * *

ಇತ್ತ ಕರ್ನಾಟಕದ ರಾಜಕಾರಣ ಶಾನೆ ಮನರಂಜನೆಯಿಂದ ಕೂಡಿದೆಯಂತಲ್ಲಾ, ಧರ್ಮಸಿಂಗ್ ಎಂಬ ಜೀವಿ, ದೇವೇಗೌಡರ ಹಿರಿ ಹೆಂಡತಿಯಷ್ಟೇ ವಿಧೇಯವಾಗಿದ್ದುಕೊಂಡು, ಎರಡು ವರ್ಷ ಬಾಳುವೆ ಮಾಡಿ ಬಿಡುಗಡೆ ಪಡೆದ ನಂತರ ಗೌಡರು ತನಗೆ ಬರೆದ ಪ್ರೇಮ ಪತ್ರಗಳನ್ನು ಪ್ರಕಟಿಸುತ್ತೇನೆಂದು ಸಿನಿಮಾ ನಟಿ ರಮಾದೇವಿಯ ವೈಯಾರದಲ್ಲಿ ಹೇಳಿದರಂತಲ್ಲಾ, ಆ ಕೂಡಲೇ ದೇವೇಗೌಡರ ಬಳಿ ನಿಂತಿದ್ದ ದತ್ತ "ಸಾರ್ ಅವರಿಗಿಂತ ಮೊದಲು ನಾವೇ ಪ್ರಕಟಿಸಿದರೆ ಹೇಗೆ" ಎಂದನಂತಲ್ಲಾ, ಹೇಗಿದ್ದರೂ ನಮ್ಮವರು ಇವು ದತ್ತ ಬರೆದ ಪತ್ರಗಳೆಂದೇ ಗುರುತಿಸುತ್ತಾರೆಂದು ಹೇಳಿದ ದತ್ತನ ಸಲಹೆಗೆ ಮಣಿದ ಗೌಡರು ಕೂಡಲೇ "ಆಗಲಿ" ಎಂದುಬಿಟ್ಟರಂತಲ್ಲಾ, ಇದರ ಫಲವಾಗಿ ಪ್ರಕಟವಾದ "ಅನುಭವದ ಅಕ್ಷರ ರೂಪ ಆಡಳಿತಗಾರರಿಗೆ ದಾರಿ ದೀಪ" ಎಂಬ ಮೂಗರ್ಜಿ ಸಂಪುಟವನ್ನು ತುಂಬ ಗಾಢವಾದ ವಿಮರ್ಶೆಗೆ ಗುರಿ ಮಾಡಿರುವ ಜನಾರ್ದನ್ ಪೂಜಾರಿ, "ಸದ್ಯಕ್ಕೆ ಕೆಲಸವಿಲ್ಲದೆ ಕುಳಿತಿದ್ದೆ, ಮುಂದೆ ನನಗೆ ಕಂಠ ಬಿಟ್ಟೆ ಭಾಷಣ ಮಾಡಲಿಕ್ಕೆ ಸಮಾ ವಿಷಯ ಸಿಕ್ಕಿತು. ಈ ದೇವೇಗೌಡರು ನಮ್ಮದು ವಂಶಾಡಳಿತವಲ್ಲ ಎಂದಿದ್ದಾರೆ. ಹಾಗಾದರೆ ಕುಮಾರಸ್ವಾಮಿ ಇವರ ಮಗನಲ್ಲವ? ನಾನು ಕುಮಾರಸ್ವಾಮಿ ಅವರ ಮಗ ಎಂಬುದನ್ನು ನಾನು ಸಾಬೀತು ಮಾಡದಿದ್ದರೆ, ರಾಜಕಾರಣದಿಂದ ನಿವೃತ್ತಿಯಾಗಿ ಬರಿ ಪೂಜಾರಿ ಕೆಲಸ ಮಾಡಿಕೊಂಡಿರುತ್ತೇನೆ" ಎಂದಿಲ್ಲವಂತಲ್ಲಾ, ಥೂತ್ತೇರಿ!!

* * * * * * * *

ನೀರಾವರಿ ಎಕ್ಸ್‌ಪರ್ಟ್ ನಂಜೇಗೌಡರು ನಿಧಾನವಾಗಿ ಎಚ್ಚೆತ್ತುಕೊಂಡವರಂತೆ ಬಿಜೆಪಿಗಳನ್ನು ಎಚ್ಚರಿಸುತ್ತ "ಹುಷಾರು, ನೀವೇನಾದರೂ ಮೈಮರೆತು ಬಗ್ಗಿದರೆ ಗೌಡರು ನಿಮ್ಮ ಸರ್ವಸ್ವವನ್ನು ಆರಿಸಿಕೊಂಡು ಬಿಡುತ್ತಾರೆ. ಆಗ ನೀವು ಹಿಡ ಮಾಡಿಸಿಕೊಂಡ ಮಿಕಗಳಂತೆ ಅವರ ಜೀತ ಮಾಡಬೇಕಾಗುತ್ತದೆ" ಎಂದು ಬುದ್ಧಿ ಹೇಳಿದರಂತಲ್ಲಾ, ಈ ನಂಜೇಗೌಡರಿಗೆ ಬಿಜೆಪಿಗಳಿಗೆ ಬುದ್ಧಿ ಮಾತನ್ನು ಹೇಳುವಂತಹ ಕಾಳಜಿಯೇಕೆ ಎಂದು ಆಹಿಂದಗಳೆಲ್ಲ ಅನುಮಾನ ಪಡುತ್ತಿರುವಾಗ, "ಎಷ್ಟೇ ಆಗಲಿ ನಂಜೇಗೌಡರೂ ಬಿಜೆಪಿಯೊಳಗಿದ್ದವರಲ್ಲವೆ, ಅಷ್ಟಕ್ಕೂ ಅವರನ್ನ ಗರ್ಭಗುಡಿಯೊಳಕ್ಕೆ ಬಿಡ್ದಿ ಪೂಜಾರಿಗಳು ಬಿಟ್ಟುಕೊಂಡಿದ್ದರೆ ಇವತ್ತು ಅವರೇ ನೀರಾವರಿ ಮಂತ್ರಿ ಆಗಿರುತ್ತಿದ್ದರು" ಎಂದು ಆಡಿಕೊಂಡರಂತಲ್ಲಾ, ಇದನ್ನು ಒಪ್ಪದ ಗೌಡರ ಕಡೆಯವರು "ನಂಜೇಗೌಡರು ಹಾಗೆ ಹೊಂದಾಣಿಕೆ ರಾಜಕಾರಣ ಮಾಡುವುದಿದ್ದರೆ, ಧರ್ಮು, ಖರ್ಗೆ ಜೊತೆಯಲ್ಲಿ ಮೂರನೆ ಎತ್ತಾಗಿ ಇರುತ್ತಿದ್ದರು. ಅನುಮಾನಗಳು ಕಂಡ ಕೂಡಲೇ ರಾಜೀನಾಮೆ ಕೆರೆದು ಬಿಸಾಡಿ ಅಲ್ಲಿಂದ ಕಾಲ್ತೆಗೆವ ನಂಜೇಗೌಡ, ನ್ಯಾಯಾಧೀಶರಿಗೂ ಹೆದರುವುದಿಲ್ಲ, ನ್ಯಾಯಮೂರ್ತಿಯೊಬ್ಬರು ವಿಧಾನಸೌಧಕ್ಕೆ ಬಂದು ಕುಮಾರಸ್ವಾಮಿಗಾಗಿ ಅರ್ಧ ಗಂಟೆ ಕಾದು ಕಾಫಿ, ಉಪ್ಪಿಟ್ಟು ತಿಂದು ಹೋಗಿದ್ದನ್ನು ಪತ್ತೆಹಚ್ಚಿ ನ್ಯಾಯಮೂರ್ತಿಗಳು ನ್ಯಾಯವಾಗಿ ರಾಜೀನಾಮೆ ಕೊಡಬೇಕೆಂದು ನ್ಯಾಯ ಕೋರಿದ್ದಾರಂತಲ್ಲಾ, ಥೂತ್ತೇರಿ!!

* * * * * * * *

"ಜಗಳವಿಲ್ಲವೆ ಜಂಗಮಯ್ಯ ಅಂದ್ರೆ ಭಿಕ್ಷೆ ನೀಡೆ ಶಿವಿ ಹರುಕು ಮುಂಡೆ" ಅಂದನಂತೆ. ಈ ಗಾದೆ ಮಾತು ಯಾರಿಗೆ ಅನ್ವಯಿಸುತ್ತೆ ಊಹಿಸಿಕೊಳ್ಳಿ! ನಿಮ್ಮ ಊಹೆ ನಿಜ, ಎಷ್ಟೇ ಆಗಲಿ ನೀವು ಅತಿ ಸೂಕ್ಷ್ಮ ಮನಸ್ಸಿನ ಓದುಗರಲ್ಲವೆ. ಹೋದಲ್ಲಿ ಬಂದಲ್ಲಿ ವಿನಾಕಾರಣ ಕಾಲು ಕೆರೆದು, ಜಗಳದ ಜೊತೆಗೆ ಗಾಯವನ್ನೂ ಮಾಡಿಕೊಂಡು ಮರಳಿ ಅದೇ ಜಾಗಕ್ಕೆ ಹೋಗುವ ನಮ್ಮ ಚಂಪಾ "ಇನ್ನಾರ ಸಹವಾಸವೂ ಬೇಡ, ನಾನೇ ಒಂದು ಪಾರ್ಟಿ ಕಟ್ಟುತ್ತೇನೆ" ಎಂದು ಹೊರಟುಬಿಟ್ಟಿದ್ದಾರಂತಲ್ಲಾ, "ಇಂತಹವರ ಮಾತು ನೆಚ್ಚಿಕೊಂಡು ಸರ್ವೋದಯ ಬೀಡಿ ಸೇದುತ್ತ ಕುಳಿತಿರುವ ದೇವನೂರು ಮಹಾದೇವರ ಕತೆಯೇನಾಗಬೇಕು" ಎಂದು ಹಲವರು ಹಲುಬುತ್ತಿದ್ದರೆ, "ಆ ದೇವನೂರು ಪಾರ್ಟಿ ವಿರೋಧಿಸಲೆಂದೇ ಚಂಪಾ ಪಾರ್ಟಿ ಹುಟ್ಟು ಹಾಕುತ್ತಿರುವುದು. ಚಂಪಾ ಪಾರ್ಟಿಯಲ್ಲಿ ಇನ್ನು ಜಗಳವಿರುವುದಿಲ್ಲ, ಏಕೆಂದರೆ ಅವರ ಪಾರ್ಟಿಗೆ ಅವರೇ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿ, ಖಜಾಂಚಿ ಮತ್ತು ಕಾರ್ಯಕರ್ತ. ಹಾಗಾಗಿ ಇನ್ನು ಜಗಳದ ಪ್ರಶ್ನೆಯೇ ಇಲ್ಲ" ಎಂದು ಚಂಪಾ ಕಂಡರಾಗದ ಚುರುಮರಿ ಜನ ಗೇಲಿ ಮಾಡುತ್ತಿದ್ದಾರಂತಲ್ಲಾ, ಥೂತ್ತೇರಿ!!

* * * * * * * *

ರಾಜ್‌ಕುಮಾರ್ ಸಾವಿನಿಂದ ಸಿನಿಮಾ ಜಗತ್ತು ಯಜಮಾನನನ್ನು ಕಳೆದುಕೊಂಡ ಮನೆಯಂತೆ ಮಂಕಾಗಿರುವ ಸಮಯದಲ್ಲೇ "ಅಣ್ಣಾವರನ್ನು ಅನುಕರಿಸುತ್ತ ಆಕ್ಟ್ ಮಾಡುತ್ತಿದ್ದೆ" ಎಂದು ಹೇಳಿರುವ ನಟ ಶಿಖಾಮಣಿ ಶಿವರಾಂ ಇನ್ನುಮುಂದೆ ಗಿರೀಶ್ ಕಾಸರವಳ್ಳಿ ಸಿನಿಮಾದಲ್ಲಿ ಮಾತ್ರ ನಟಿಸುತ್ತಾರಂತಲ್ಲಾ! ಇದನ್ನು ಕೇಳಿದ ಸಿನಿಮಾ ಪ್ರೇಮಿಗಳು, "ಈ ಶಿವರಾಂಗೆ ಕನ್ನಡ ಪ್ರೇಕ್ಷಕರ ಮೇಲೆ ಇನ್ನೆಂತಹಾ ಸೇಡಿರಬಹುದು? ಕಮರ್ಷಿಯಲ್ ಚಿತ್ರ ನೋಡುವ ನಾನೂರು ಮಂದಿಯನ್ನು ಥಿಯೇಟರಿನಿಂದ ಓಡಿಸಿರುವ ಈ ನಟ, ಈಗ ಕಾಸರವಳ್ಳಿ ಸಿನಿಮಾಕ್ಕೂ ನಾಲ್ಕು ಜನ ಬರದಂತೆ ಮಾಡುವ ಹಟ ತೊಟ್ಟಿದ್ದಾರಾಲ್ಲಾ!" ಎಂದರಂತಲ್ಲಾ, ಇದೇನಾದರೂ ತಮಾಷೆಯಿರಬಹುದೇ ಎಂದು ಯೋಚಿಸುತ್ತಿರುವಾಗಲೇ ನಾಗತಿಹಳ್ಳಿ ಹಿಂಬಾಲಕರು, "ಶಿವರಾಂ ಒಳಗಿದ್ದ ಒಂದಿಷ್ಟು ನಟನೆಯನ್ನು ನಾವಾಗಲೇ ಬಾನಲ್ಲೆ ಚಿತ್ರದಲ್ಲಿ ಬಸಿದುಕೊಂಡು ಬಿಸಾಕಿದ್ದೇವೆ. ಆ ಚಿತ್ರದಲ್ಲೂ ಅವರು ಅಭಿನಯಿಸಿದ್ದು ಒಂದೇ ಸೀನು. ನಲ್ಲೆಯನ್ನು ಬೆಟ್ಟದಿಂದ ನೂಕಿ ಸಾಯಿಸಿದ ಅಪರಾಧಿ ಇವನೇ ಎಂದು ಗೊತ್ತಾದಾಗ ಶಿವರಾಂ ಕೆಂಡದ ಟೈಲ್ ತೆಗೆದುಕೊಂಡು ಓಡುತ್ತಾರಲ್ಲ, ಆಗಲೇ ಅವರು ಅಭಿನಯಿಸಿದ್ದು, ಈಗಲೂ ಸರ್ಕಾರದಲ್ಲಿ ತಿಂದ ಊಟದ ಹಂಗಿನ ವಿಷಯದಲ್ಲಿ ಇಂಥದೇ ಅಭಿನಯ ಮುಂದುವರಿಸಿದ್ದಾರೆ" ಅಂದರಂತಲ್ಲಾ, ಥೂತ್ತೇರಿ!!

-ಯಮಾರೂಪ

IAS/IPS ವರ್ಗಾ

ಅಧಿಕಾರಸ್ಥರ ಆಡಂಬೋಲ!

ಒಂದೇ ದಿನದಲ್ಲಿ 91 ಮಂದಿ ಪ್ರತಿಷ್ಠಿತ ಸರ್ಕಾರಿ ಅಧಿಕಾರಿಗಳ ವರ್ಗಾವಣೆ.....

"ಇದು ಇತ್ತೀಚಿನ ಎಲ್ಲಾ ವರ್ಗಾವಣೆಗಳ ತಾಯಿ...." (Mother of Transfers!) ಎಂದು ಪೇಜ್ 3 ಪತ್ರಿಕೋದ್ಯಮದ ಪಡ್ಡೆ ಹುಡುಗರಿಂದ ಕೊಂಡಾಡಲ್ಪಟ್ಟ ಕಳೆದ ವಾರದ ವರ್ಗಾವರ್ಗಿ "ಹಬ್ಬ"ದಿಂದ ನಗರವಾಸಿ ಮೇಲ್ಮಧ್ಯಮ ವರ್ಗದ ನಾಗರಿಕರಲ್ಲಿ ವಿಚಿತ್ರವಾದ ರೋಮಾಂಚನ!

ಹಿಂದೆ ಎಸ್.ಎಂ. ಕೃಷ್ಣರ ಹೈಟೆಕ್ ಸರ್ಕಾರದಲ್ಲಿ ಆಯಕಟ್ಟಿನ ಜಾಗಗಳಲ್ಲಿದ್ದು ಬೆಂಗಳೂರನ್ನು ಸಿಂಗಾಪೂರನ್ನಾಗಿ ಮಾಡುವ ಸುಂದರವಾದ ಕನಸಿನ ಸೌಧವನ್ನು ಕಟ್ಟಿದ್ದ ಐಎಎಸ್, ಐಪಿಎಸ್ ಮತ್ತು ಕೆಎಎಸ್ ಕಲಿಗಳಿಗೆಲ್ಲಾ ಮತ್ತೆ ಪುನರ್ಜನ್ಮ... ಇವರಲ್ಲಿ ಅನೇಕರು ಧರಂಸಿಂಗ್ ದರಬಾರಿನ ದೇವೇಗೌಡರ ರಿಮೋಟ್ ಕಂಟ್ರೋಲ್ ರಾಜಕೀಯದಿಂದಾಗಿ ಎರಡು ವರ್ಷಗಳ ಕಾಲ ಕಡ್ಡಾಯ ಅಜ್ಞಾತವಾಸಕ್ಕಟ್ಟಲ್ಪಟ್ಟವರು....



ಜೈ ರಾಜ್

ಒಟ್ಟು 34 ಐಎಎಸ್, 35 ಕೆಎಎಸ್ ಮತ್ತು 19 ಐಪಿಎಸ್ ಅಧಿಕಾರಿಗಳನ್ನು ಒಂದೇ ಏಟಿಗೆ ಸ್ಥಾನಪಲ್ಲಟ ಮಾಡಿದ ಕುಮಾರಣ್ಣನ ಕರ್ನಾಟಕ ಅಭಿವೃದ್ಧಿ ರಂಗ ಸರ್ಕಾರ ಅಷ್ಟರಿಂದಲೇ ರಾಜ್ಯದಲ್ಲಿ "ಸುವರ್ಣ ಕ್ರಾಂತಿ" ಯನ್ನೇ ಸಾಧಿಸಿಬಿಟ್ಟಿತೆಂಬ ಸಂಭ್ರಮವನ್ನು ದಿನಪತ್ರಿಕೆಗಳು ಬಿಂಬಿಸತೊಡಗಿವೆ....

ರವೀಂದ್ರ ರೇಶ್ಮೆ

ಅಸಲಿಗೆ ಈಗ ನಡೆದಿರುವುದು ಅತ್ಯುನ್ನತ ಅಧಿಕಾರಶಾಹಿಯ ಸಕಲ ಸವಲತ್ತು, ಸರಂಜಾಮು ಹಾಗೂ ಸುಖವನ್ನುಂಡ ಡಜನ್‌ಗಟ್ಟಲೇ ಜಡಭರತರು ಹಾಗೂ ನಿರಾಸಕ್ತ ಸುಂದರಿಯರ ಮ್ಯೂಸಿಕಲ್ ಚೇರ್ ಆಟವಷ್ಟೇ....

ಮೇಲಿನ ಪಟ್ಟಿಯಲ್ಲಿ ಭಾರಿ ತೂಕದ ಹುದ್ದೆಗಳನ್ನು ಗಿಟ್ಟಿಸಿದ ಅದೃಷ್ಟವಂತರಾಗಲಿ ಅಥವಾ ಅಂತಹ ಆಯಕಟ್ಟಿನ ಹುದ್ದೆಗಳಿಂದ ಅನಾಕರ್ಷಕ ಸ್ಥಾನಗಳಿಗೆ ತಳ್ಳಲ್ಪಟ್ಟ "ನತದೃಷ್ಟ"ರುಗಳಾಗಲೀ ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಡಿದು ಕಟ್ಟೆ ಹಾಕಿದ್ದು ಅಷ್ಟಕ್ಕಷ್ಟೇ ಎಂಬುದಂತೂ ಸತ್ಯ....

ದಕ್ಷತೆ, ಪ್ರಾಮಾಣಿಕತೆ ಮತ್ತು ಇದುವರೆಗಿನ ಸೇವಾವಧಿಯ ಸಾಧನೆಗಳಿಗಿಂತ ಹಾಲಿ ಆಳುವಕೂಟದ ಬಲಿಷ್ಠ ನಾಯಕರುಗಳ ಮರ್ಜಿ ಕಾಯುವಿಕೆಯ ಮಾನದಂಡವೇ ಈ ಗಣ್ಯ ಅಧಿಕಾರಿಗಳ ವರ್ಗಾ ಜಾತ್ರೆಯಲ್ಲಿ ನಿರ್ಣಾಯಕವೆನಿಸಿರುವಂತಿದೆ.

ಇಂತಹ ಅನಿಸಿಕೆಗೆ ಪುರಾವೆ ನೀಡಬಲ್ಲಂತಹ, ಈಗಾಗಲೇ ಸಾಕಷ್ಟು ಮೀಡಿಯಾ ಪ್ರಚಾರ ಗಿಟ್ಟಿಸಿಕೊಂಡ ಹಲವು ಖ್ಯಾತ ನಾಮ ಅಧಿಕಾರಿಗಳ ಇತ್ತೀಚಿನ ಇತಿಹಾಸವನ್ನಿಲ್ಲಿ ಮೆಲುಕು ಹಾಕಿ ಪರೀಕ್ಷಿಸಿ ನೋಡಬಹುದಾಗಿದೆ....

ಶೋಮ್ಯಾನ್ ಜೈರಾಜ್ ಪುನರಾಗಮನ

ಮಾಜಿ ಮುಖ್ಯಮಂತ್ರಿ ಕೃಷ್ಣರಷ್ಟೇ ಅಲ್ಲ ಅವರ ಚಾಲಾಕು ಅಳಿಯ ಕಾಫಿ ಡೇ ಸಿದ್ಧಾರ್ಥರಿಗೂ ಆಪ್ತಮಿತ್ರನೆನಿಸಿ ಕೊಂಡೇ 2004 ರ ಮೇ ತಿಂಗಳವರೆಗೂ ಮಿಂಚಿದ್ದ ಕೆ. ಜೈರಾಜ್ ಕಳೆದೆರಡು ವರ್ಷ ನ್ಯೂಯಾರ್ಕಿನ ವಿಶ್ವಬ್ಯಾಂಕ್ ಹುದ್ದೆಯ ಅದ್ದೂರಿತನದಿಂದ ಬೇಸತ್ತು ಮತ್ತೆ ತವರಿಗೆ ಮರಳಿದ್ದಾರೆ.... ಅದೂ ಅವರ (ಅವರ ಪ್ರತಿಸ್ಪರ್ಧಿಗಳಿಗೂ ಕೂಡ!) ಅಚ್ಚುಮೆಚ್ಚಿನ ಮಹಾನಗರಪಾಲಿಕೆ ಕಮಿಷನರ್ ಹುದ್ದೆಗೆ!

ಹಲವಾರು ವರ್ಷ ಪವರ್ ಕಾರ್ಪೋರೇಷನ್ನು, ಕೆಎಸ್ಆರ್‌ಟಿಸಿಗಳ ಮುಖ್ಯಸ್ಥ ಹುದ್ದೆಗಳಲ್ಲಿ ವಿಜೃಂಭಿಸಿದ್ದ ಜೈರಾಜ್ ಹೇಳಿಕೇಳಿ ಒಬ್ಬ ಶೋಮ್ಯಾನ್....


ಗತ್ತು, ಗೈರತ್ತು, ಮಾತುಗಾರಿಕೆ ಹಾಗೂ ಮೀಡಿಯಾ-ಮೋಹಕತೆಗಳನ್ನೇ ಅಸ್ತ್ರವಾಗಿ ಬಳಸಿಕೊಳ್ಳುತ್ತ ಬಂದ ಜೈರಾಜ್‌ದು ಜನಸಾಮಾನ್ಯರಲ್ಲಿ ಶಾಶ್ವತವಾಗಿ ನೆಮ್ಮದಿ ತರಬಲ್ಲ ಕೆಲಸಗಳಿಗಿಂತ ಖಾಸಗಿ ಕಾರ್ಪೋರೇಟ್ ಉದ್ಯಮಿಗಳ ಒಡನಾಟಗಳನ್ನೇ ಹೆಚ್ಚಾಗಿ ಇಷ್ಟಪಡುವ ಜಾಯಮಾನ....

ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತ ಹುದ್ದೆಯ ಎರಡನೇ ಛಾನ್ಸು ಜೈರಾಜರಲ್ಲೇನಾದರೂ ಕ್ರಿಯಾಶೀಲತೆ, ಜನಪರ ಕಾಳಜಿಗಳಿದ್ದಲ್ಲಿ ಅವುಗಳನ್ನು ಸಾಬೀತು ಮಾಡಲೇಬೇಕಾದ ಸವಾಲಿನಂತಿದೆ...

ಹೈಟೆಕ್ "ಗೌಡಾ" ಬಿಡಿಎಗೆ

ಎಂ.ಕೆ. ಶಂಕರಲಿಂಗೇಗೌಡ್ರು ಅನ್ನೋದಕ್ಕಿಂತ ಎಂ.ಕೆ.ಎಸ್. ಗೌಡಾ ಎಂದೇ ಗುರುತಿಸಲ್ಪಡಲು ಇಚ್ಛಿಸುವ ಈ ಕಾಸ್ಮಾಪಾಲಿಟನ್ ಕಾಸ್ಟ್ಯೂಮ್‌ಧಾರಿ ಗೌಡರನ್ನ ಆತ ಕೃಷ್ಣರ ದರಬಾರಿನ ಆಪ್ತನೆಂದು ಗೊತ್ತಿದ್ದೂ ಅದ್ಯಾಗೋ ಬಿಡಿಎ ಕಮಿಷನರ್ ಹುದ್ದೆಗೆ ನೇಮಿಸಿದ್ದಾರೆ ದೇವೇಗೌಡರ ಪುತ್ರ ಕುಮಾರಸ್ವಾಮಿ...

ಕೆಎಎಸ್‌ನಿಂದ ಐಎಎಸ್‌ಗೆ ಬಡ್ತಿ ಪಡೆದ ಶಂಕರಲಿಂಗೇಗೌಡರು ಯಾವುದೇ ವಿದೇಶ ವ್ಯಾಸಂಗದ ಹಿನ್ನೆಲೆಯಿಲ್ಲದಿದ್ದಾಗ್ಯೂ ಫಾರಿನ್ ಸ್ಟೈಲು ಸೂಟ್, ಬೂಟ್-ಟೈ ಧರಿಸಿ ಬುಲ್ಗಾನಿನ್-ಸ್ಟೈಲ್ ಗಡ್ಡಬಿಟ್ಟು ನಿನ್ನೆ ಮೊನ್ನೆವರೆಗೂ ಐಟಿ-ಬಿಟಿ ವಲಯದ ಕುಬೇರರೊಂದಿಗೇ ಕಂಫರ್ಟೆಬಲ್ಲಾಗಿ ಕಾಲ ತಳ್ಳುತ್ತ ಬಂದವರು....



ಶಂಕರಲಿಂಗೇಗೌಡ

ಎಸ್.ಎಂ. ಕೃಷ್ಣಾ ದರಬಾರಿನಲ್ಲೇ ಅತ್ಯಂತ ಗೌರವಾನ್ವಿತ ಅಪವಾದವೆಂಬಂತೆ ಬಿಡಿಎ ಕಮಿಷನರ್‌ರಾಗಿ ಆ ಸಂಸ್ಥೆಗೆ ಭಾರೀ ಪುನಶ್ಚೇತನ ನೀಡಿದ್ದ ಜಯಕರ್ ಜೆರೋಮ್ ಎಂಬ ಸಮರ್ಥ ಅಧಿಕಾರಿಯ ಸಾಧನೆಯ ನೆನಪೇ ಶಂಕರಲಿಂಗೇಗೌಡರನ್ನು ತಮ್ಮ ಸುಪ್ರಸಿದ್ಧ ಬಿಂಕ, ಬಿಗುಮಾನ ತೊರೆದು ಅರ್ಥಪೂರ್ಣವಾಗಿ ಕೆಲಸ ಮಾಡುವಂತೆ ಪ್ರೇರೇಪಿಸಬೇಕಾಗಿದೆ.

ರಸಿಕ ವಿದ್ಯಾಶಂಕರ್ ಮೆಡಿಕಲ್ ಎಜುಕೇಶನ್ನಿಗೆ

ಧರಂಸಿಂಗರ ಆಸ್ಥಾನದಲ್ಲಿ ಬಿಡಿಎ ಕಮಿಷನರ್ ಹುದ್ದೆಯಲ್ಲಿದ್ದುಕೊಂಡು ಕೇವಲ ಸವಿಮಾತು, ಸೌಜನ್ಯದ ಮುಗುಳ್ನಗೆ ಹಾಗೂ ಶುದ್ಧ ಸೋಮಾರಿತನವನ್ನಷ್ಟೇ ಪ್ರದರ್ಶಿಸುತ್ತ ಬಂದ ವಿದ್ಯಾಶಂಕರ್ ಎಂಬ ರಸಿಕ ಶಿಖಾಮಣಿಯನ್ನು ಅದ್ಯಾಕೋ ವೈದ್ಯಕೀಯ ಶಿಕ್ಷಣ ಸಚಿವ ಡಾ. ವಿ.ಎಸ್. ಆಚಾರ್ಯರು ಈಗಾಗಲೇ ಸೀಟು ಸಮಸ್ಯೆಯಿಂದ ಬಸವಳಿದಿರುವ ತಮ್ಮ ಇಲಾಖೆಗೆ ತಂದುಕೊಂಡಿದ್ದಾರೆ....



ವಿದ್ಯಾಶಂಕರ್

ಜೆರೋಮ್ ಕಾಲದಲ್ಲಿ ಇಡೀ ರಾಷ್ಟ್ರದ ಗಮನ ಸೆಳೆಯುವಂತಹ ಅಭಿವೃದ್ಧಿ ಚಟುವಟಿಕೆ ಹಾಗೂ ನಿವೇಶನ ನಿರ್ಮಾಣ ಮತ್ತು ವಿತರಣಾ ಪ್ರಕ್ರಿಯೆಯಿಂದಾಗಿ ಜನಪ್ರಿಯತೆಯ ಉತ್ತುಂಗಕ್ಕೇರಿದ್ದ ಬಿಡಿಎ ಎಂಬ ಸರ್ಕಾರಿ ಸೇವಾ ಸಂಸ್ಥೆಯನ್ನು ಮತ್ತೆ ನಿಷ್ಕ್ರಿಯತೆ ಮತ್ತು ನಿರರ್ಥಕ ಜಾಹಿರಾತುಗಳ ಯುಗಕ್ಕೆ ಮರಳಿಸಿದ 'ಕೀರ್ತಿ' ಈ ವಿದ್ಯಾಶಂಕರ್ ಮಹಾಶಯರದ್ದು!

ಡಾ. ಆಚಾರ್ಯರೇನಾದ್ರೂ ಕನ್ವರ್ಟೆಡ್ ಜಾತಿ ವ್ಯಾಮೋಹಕ್ಕೆ ಬಲಿಯಾಗಿ ಈ ಐಎಎಸ್ ಮಹಾಶಯರನ್ನು ಮೆಡಿಕಲ್ ಎಜುಕೇಶನ್ನಿಗೆ ತಂದುಕೊಂಡಿದ್ದಲ್ಲಿ, ಖಂಡಿತವಾಗಿಯೂ ಅವರನ್ನು ಕಾಡಲಿದೆ ವಿದ್ಯಾಶಂಕರ್‌ರ ನಿರಂತರ 'ಜೀವನಾಸಕ್ತಿ' ಹಾಗೂ ದಿವ್ಯ ಮೈಗಳ್ಳತನ....

ಈಗಲಾದರೂ ಮಿಂಚಲಿ ಈ ಮಹಿಳಾಮಣಿಗಳು

ಸಾಮಾನ್ಯವಾಗಿ ಸೇವೆಗೆ ಸೇರಿದ ಹೊಸತರಲ್ಲಿ ಒಬ್ಬ ಮಹಿಳಾ ಐಎಎಸ್ ಅಥವಾ ಐಪಿಎಸ್ ಅಧಿಕಾರಿಯನ್ನು ಇಡೀ ಸಮಾಜವೇ ಅತ್ಯಂತ ಹೆಮ್ಮೆ ಹಾಗೂ ವಿಶೇಷ ಗೌರವದೊಂದಿಗೆ ಸ್ವಾಗತಿಸುವುದು ಸಹಜವೇ....

ತಮ್ಮ ಪುರುಷ ಸಹೋದ್ಯೋಗಿಗಳ ತೀವ್ರ ಸ್ಪರ್ಧೆಯನ್ನು ಮೆಟ್ಟಿ ನಿಂತು ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ ಗೆದ್ದು ಬಂದವರೆಂದು ಈ ಹೆಣ್ಣುಮಕ್ಕಳ ಬಗ್ಗೆ ಜನಸಾಮಾನ್ಯರಲ್ಲಿ ವಿಶೇಷ ಕುತೂಹಲ ಕೂಡ ಸರ್ವೇಸಾಮಾನ್ಯ....

ಆದರೆ ಕರ್ನಾಟಕದ ಐಎಎಸ್/ಐಪಿಎಸ್ ಕೇಡರಿನಲ್ಲಿ 20-25 ವರ್ಷಗಳಷ್ಟು ಕಾಲ ಸೇವೆ ಸಲ್ಲಿಸಿದ ನಂತರವೂ ಈ ಸೂಪರ್ ಟೈಂ ಸ್ಕೇಲ್ ಅಧಿಕಾರಿಣಿಯರಾದ ಶೋಭಾ ನಂಬೀಶನ್, ವತ್ಸಲಾ ವಾತ್ಸಾ, ಉಷಾ ಗಣೇಶ್, ಲಕ್ಷ್ಮೀ ವೆಂಕಟಾಚಲಂ, ಶಮೀಮ್ ಬಾನು, ತಾರಾ ಅಜಯ್‌ಸಿಂಗ್ ಮುಂತಾದವರೆಲ್ಲ ತಾವಿದ್ದ ಇಲಾಖೆಗಳಲ್ಲಿ ಜನಮಾನಸದಲ್ಲಿ ಅಚ್ಚಳಿಯದೆಯೆ ಉಳಿಯುವಂತಹ ಒಂದೇ ಒಂದು ಸಾಧನೆಯನ್ನೂ ದಾಖಲಿಸಿರುವ ನಿದರ್ಶನವೇ ಇಲ್ಲದಿರುವುದು ದುರದೃಷ್ಟಕರ...

ಇದುವರೆಗೂ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸ್ಥಾನದಲ್ಲಿದ್ದ ಶೋಭಾ ನಂಬೀಶನ್‌ರಾಗಲಿ ಅಥವಾ ಅವರಿಗಿಂತ ಮುಂಚೆಯಿದ್ದ ವತ್ಸಲಾರಾಗಲಿ ಖಾಸಗೀಕರಣ ಮತ್ತು ವ್ಯಾಪಾರೀಕರಣದಿಂದ ಕುಸಿಯತೊಡಗಿದ್ದ ಆ ಕ್ಷೇತ್ರಕ್ಕೆ ಕಾಯಕಲ್ಪ ನೀಡುವ ಬದಲು ಖಾಸಗಿ ಕ್ಯಾಪಿಟೇಷನ್ ಲಾಬಿಯ ಕಂತ್ರಾಟಿಕೆ ಶರಣಾದದ್ದೇ ಹೆಚ್ಚು....

ಬಿಡಿಎ, ವಾಣಿಜ್ಯ ಹಾಗೂ ಕೈಗಾರಿಕಾ ಇಲಾಖೆಗಳಂತಹ ಪ್ರತಿಷ್ಠಿತ ಹುದ್ದೆಗಳನ್ನಲಂಕರಿಸಿದ್ದ ಲಕ್ಷ್ಮೀ ವೆಂಕಟಾಚಲಂರಾಗಲಿ, ನಗರಾಭಿವೃದ್ಧಿ ಕಾರ್ಯದರ್ಶಿಯಾಗಿದ್ದ ಶಮೀಮ್ ಬಾನುರಾಗಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ನಿರ್ವಹಿಸಿದ ಅಚ್ಚ ಕನ್ನಡತಿ ಉಷಾ ಗಣೇಶರಾಗಲಿ ಕೇವಲ "ಒಳ್ಳೆಯವರು" ಎಂದೆನಿಸಿಕೊಳ್ಳುವಷ್ಟರಲ್ಲೇ ತೃಪ್ತರಾಗಿದ್ದರೇ ಹೊರತು ಕಿಂಚಿತ್ತಾದರೂ ಸಾಹಸಶೀಲತೆ, ಕ್ರಿಯಾಶೀಲತೆ ಅಥವಾ ಪ್ರಯೋಗಶೀಲತೆಯ ಸುಳಿವನ್ನೇ ನೀಡಿದವರಲ್ಲ...

ಅಷ್ಟೇ ಏಕೆ, ಹೊರರಾಜ್ಯಗಳಿಂದ ಬಂದವರಾದ ಬಹುತೇಕ ಮಹಿಳಾ ಅಧಿಕಾರಿಗಳು ಪ್ರಿನ್ಸಿಪಲ್ ಸೆಕ್ರೆಟರಿ ದರ್ಜೆಗೇರಿದ ಮೇಲೂ ಕನ್ನಡ ಭಾಷೆ, ಕನ್ನಡ ಸಂಸ್ಕೃತಿ ಮತ್ತು ಕನ್ನಡತನವನ್ನು ರೂಢಿಸಿಕೊಳ್ಳುವ ಉಸಾಬರಿಗೂ ಹೋಗಲಿಲ್ಲ!! ಇರಲಿ... ಇದೀಗ ಮೊಟ್ಟಮೊದಲ ಬಾರಿಗೆ ಇವರೆಲ್ಲರಿಗೂ ಇದುವರೆಗೂ ಪುರುಷರಿಗೇ ಮೀಸಲೆಂಬಂತಿದ್ದ ಹೋಂ ಸೆಕ್ರೆಟರಿ, ಕೆಐಎಡಿಬಿ ಸೆಕ್ರೆಟರಿ, ಹೆಲ್ತ್ ಸೆಕ್ರೆಟರಿ, ರೆವಿನ್ಯೂ ಸೆಕ್ರೆಟರಿ, ಡಿ.ಪಿ.ಎ.ಆರ್. ಸೆಕ್ರೆಟರಿ ಮುಂತಾದ ಅತಿ ಪ್ರತಿಷ್ಠಿತ ಸ್ಥಾನಗಳು ದಕ್ಕಿವೆ...

ತಮ್ಮೆಲ್ಲ ಕೌಟುಂಬಿಕ ಜಂಜಾಟಗಳು ಹಾಗೂ ಸ್ಥಳೀಯ ರಾಜಕಾರಣದ ರಂಪಾಟಗಳ ನಡುವೆಯೂ ಈ ಮಹಿಳಾ ಅಧಿಕಾರಿಗಳೆಲ್ಲ ಈಗಲಾದರೂ ತಮ್ಮೆಲ್ಲ ವೃತ್ತಿಪರ ಆದರ್ಶಗಳು ಮತ್ತು ಕನಸುಗಳ ಸ್ಫೂರ್ತಿಯೊಂದಿಗೆ ಮಿಂಚುವಂತಾಗಲಿ...

"ಸಾಧ್ಯವಿಲ್ಲ" "ತಿರಸ್ಕೃತವಾಗಿದೆ" "ನಿಯಮಬಾಹಿರವಾಗಿದೆ" "ಅನುಷ್ಠಾನ ಕಷ್ಟಕರವಾಗಿದೆ" ಮುಂತಾದ ನಕಾರಾತ್ಮಕ ಟಿಪ್ಪಣಿಗಳ ಪರಂಪರೆಯನ್ನು ತೊರೆದು ಜನಪರ ಹಿತಾಸಕ್ತಿಗೆ ಪೂರಕವಾಗುವಂತಹ ಸಕಾರಾತ್ಮಕ ತೀರ್ಮಾನಗಳ ಮೂಲಕ ಇವರೆಲ್ಲ ಸಾರ್ಥಕತೆ ಪಡೆದುಕೊಳ್ಳಲಿ....

ನಿವೃತ್ತಿಯ ನೇಪಥ್ಯಕ್ಕೆ ಜೆರೋಮ್

ಇತ್ತ ಬೆಂಗಳೂರಲ್ಲಿ ಐಎಎಸ್, ಐಪಿಎಸ್ ಅತಿರಥ-ಮಹಾರಥರ ವರ್ಗಾವಣೆ ಜಾತ್ರೆ ನಡೆದಿರುವಂತೆಯೆ ಅತ್ತ ಮುಂಬೈನ ರಾಜಭವನದಲ್ಲಿ ಮಹಾರಾಷ್ಟ್ರ ರಾಜ್ಯಪಾಲರ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದ ಕರ್ನಾಟಕ ಮೂಲದ ಅಧಿಕಾರಿ ಜಯಕರ್ ಜೆರೋಮ್ ರಿಟೈರಾಗಿದ್ದಾರೆ.....

ಸಾಧನೆಯ ಬಲವಿದ್ದರೂ ಹಿಂದಿನ ಜೆಡಿಎಸ್-ಕಾಂಗ್ರೆಸ್ ಮೈತ್ರಿಕೂಟದ ದಂಡನಾಯಕ ದೇವೇಗೌಡರ ಶಾಪಕ್ಕೆ ಗುರಿಯಾಗಿ ಬಿಡಿಎ ಆಯುಕ್ತ ಹುದ್ದೆಯಿಂದ 2004 ರ ಆಗಸ್ಟ್‌ನಲ್ಲಿ ಹಠಾತ್ತನೆ ಉಚ್ಚಾಟಿಸಲ್ಪಟ್ಟ ಜೆರೋಮ್ ಇವತ್ತಿನ ಆಡಳಿತ ಸೇವೆಯ ಅಧಿಕಾರಿಗಣಕ್ಕೆಲ್ಲ ಅನುಕರಣೀಯ ಮಾದರಿಯೆನಿಸಬಲ್ಲ ಸಮರ್ಥ ಆಡಳಿತಗಾರ....

1999 ರ ದಶಕದ ಅಂತ್ಯದಲ್ಲಿ ಸುಮಾರು 84 ಕೋಟಿ ರೂಪಾಯಿಗಳಷ್ಟು ನಷ್ಟದಲ್ಲಿದ್ದು ನಿಷ್ಪ್ರಯೋಜಕ ಸಂಸ್ಥೆಯೆನಿಸಿಕೊಂಡಿದ್ದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಆಯುಕ್ತರಾಗಿ ಬಂದು 2000 ರಿಂದ 2004 ರ ಅವಧಿಯಲ್ಲಿ ಶಿಸ್ತು, ದಕ್ಷತೆ ಹಾಗೂ ಅಪಾರ ಸಮೃದ್ಧಿಯ ಕಾಯಕಲ್ಪ ನೀಡಿದ ಕ್ರಿಯಾಶೀಲತೆ ಈ ಜೆರೋಮ್‌ರದ್ದು.

ಎರಡು ದಶಕಗಳಿಂದ ಒಂದೇ ಒಂದು ಸೈಟು ನೀಡುವಲ್ಲೂ ಸೋತು ಹೋಗಿದ್ದ ಬಿಡಿಎಯಂತಹ ರೋಗಗ್ರಸ್ತ ಸರ್ಕಾರಿ ಇಲಾಖೆಯ ಮೂಲಕ ಕೇವಲ ಮೂರೇ ವರ್ಷದಲ್ಲಿ ಮೂರು ಹೊಸ ಬಡಾವಣೆಗಳನ್ನು ನಿರ್ಮಿಸಿ 62 ಸಾವಿರ ನಿವೇಶನ ಹಂಚಿದರು ಜಯಕರ್... ತನ್ಮೂಲಕ ಸುಮಾರು 400 ಕೋಟಿ ರೂ.ಗಳಷ್ಟು ವರಮಾನ ತಂದುಕೊಟ್ಟರು....

ಬೆಂಗಳೂರಿನ ಪ್ರತಿಷ್ಠಿತ ಪ್ರದೇಶಗಳಲ್ಲಿ ಅಕ್ರಮವಾಗಿ ನಿರ್ಮಿಸಲಾಗಿದ್ದ ಭಾರಿ ಗಾತ್ರದ ವಾಣಿಜ್ಯ ಹಾಗೂ ವಸತಿ ಸಂಕೀರ್ಣಗಳನ್ನು ನೆಲಸಮಮಾಡುವ ದಿಟ್ಟತನ ತೋರಿದ ಜೆರೋಮ್ ಸುಮಾರು 1 ಲಕ್ಷ 77 ಸಾವಿರ ಚದರಡಿಯಷ್ಟು ಸಾರ್ವಜನಿಕ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವ ಮೂಲಕ ಬಿಡಿಎಗೆ 700 ಕೋಟಿ ರೂಪಾಯಿ ಬೆಲೆಯ ಸ್ಥಿರಾಸ್ತಿ ಲಭಿಸುವಂತೆ ನೋಡಿಕೊಂಡರು....



ಭೂಗಳ್ಳರ ಗೂಂಡಾಗಿರಿ, ರಾಜಕೀಯ ಒತ್ತಡ ಹಾಗೂ ಕೋರ್ಟು ಕೇಸುಗಳ ಕಿರುಕುಳವನ್ನು ಲೆಕ್ಕಿಸದೆಯೇ ಅರ್ಕಾವತಿ ಬಡಾವಣೆ ನಿರ್ಮಾಣಕ್ಕೆ ಮುಂದಾದ ಜೆರೋಮ್ ನಿವೇಶನ ಅರ್ಜಿಗಳ ಠೇವಣಿ ರೂಪದಲ್ಲೇ 800 ಕೋಟಿ ರೂಪಾಯಿ ಸಂಗ್ರಹಿಸಿಕೊಟ್ಟರು.

ಹೀಗೆ ಖಾಸಗೀಕರಣದ ಅರ್ಭಟದ ನಡುವೆಯೇ ಬಿಡಿಎನಂತಹ ದಿವಾಳಿಖೋರ ಸಂಸ್ಥೆಗೆ ಸುಮಾರು 1600 ಕೋಟಿ ರೂಪಾಯಿಗಳಷ್ಟು ಆದಾಯ ಭರಿಸಿಕೊಟ್ಟ ಜೆರೋಮ್ ಅತ್ಯಂತ ಕಮ್ಮಿ ವೆಚ್ಚದಲ್ಲಿ ಅತ್ಯುತ್ತಮ ಗುಣಮಟ್ಟದ ಫ್ಲೈಓವರ್, ಗ್ರೇಡ್ ಸೆಪರೇಟರ್ ಹಾಗೂ ರಿಂಗ್‌ರೋಡ್‌ಗಳಂತಹ ಮೂಲ ಸೌಕರ್ಯಗಳನ್ನು ನಿಗದಿತ ಅವಧಿಯಲ್ಲಿ ಕಟ್ಟಿ ಮುಗಿಸುವ ಮೂಲಕ ಬಿಡಿಎಯನ್ನು ಒಂದು ಚೈತನ್ಯಶಾಲಿ ಸಂಸ್ಥೆಯನ್ನಾಗಿ ಮಾರ್ಪಡಿಸಿಬಿಟ್ಟರು....

ಇಂತಹ ಸಾಧಕನಿಗೆ ಮುಂದೆ ರಾಜಕೀಯ ಕಾರಣಗಳಿಗಾಗಿ ಅವಮಾನಕಾರಿ ವರ್ಗಾವಣೆಯಾದಾಗ ಅದುವರೆಗೂ ಅವರನ್ನು ಕೊಂಡಾಡುತ್ತ ಬಂದ ಮೀಡಿಯಾವೀರರೆಲ್ಲ ಮೌನ ತಾಳಿಬಿಟ್ಟರು... ವಿರೋಧ ಪಕ್ಷದ ಮುಖಂಡರೂ ಮೂಕಪ್ರೇಕ್ಷಕರಂತಿದ್ದರು.... ಬೆಂಗಳೂರಿನ ಸಾಮಾನ್ಯ ನಾಗರಿಕರು ಮಾತ್ರ ಜಯಕರ್ ಜೆರೋಮ್ ಎಂಬ ಕರ್ಮಯೋಗಿಯನ್ನು ಮನದಲ್ಲೇ ಮೆಚ್ಚುಗೆ ಸಮೇತ ಸ್ಮರಿಸಿಕೊಂಡು ಅವರನ್ನು ಕಷ್ಟಕ್ಕೀಡು ಮಾಡಿದ ಮನಸ್ಸುಗಳಿಗೆ ಶಾಪ ಹಾಕಿದರು!

ದೇವರು ಪ್ರತಿಯೊಂದು ಪಕ್ಷಿಗೂ ಅನ್ನ ಕೊಡುತ್ತಾನೆ. ಆದರೆ ಅವನು ಅದನ್ನು ಹಕ್ಕಿಯ ಗೂಡಿನಲ್ಲಿ ತಂದು ಹಾಕುವುದಿಲ್ಲ -ಹೆಲನ್ ಕೆಲರ್

...ಪಿ ಎಮ್ಎಲ್‌ಸಿ ಶೋಭಾ ಕರಂದ್ಲಾಜೆ ಮುಂದಿನ ...ನಿಸ್ಟರ್ ಆಗುತ್ತಾರಾ?

...ೀ ಕರ್ನಾಟಕ ಬಿಜೆಪಿಯೊಳಗೆ ಇವತ್ತು ...ವುದು ಇದೊಂದೇ ಚರ್ಚೆ.

...ಪಮುಖ್ಯಮಂತ್ರಿ ಯಡಿಯೂರಪ್ಪನವರ ... ಕೃಪಾಕಟಾಕ್ಷದಲ್ಲಿರುವ, ಈಗಿನ್ನೂ ಮೊಟ್ಟ ... ಬಾರಿಗೆ ಎಂಎಲ್‌ಸಿಯಾಗಿರುವ ಶೋಭಾ ...ಜೆ ಒಂದು ವೇಳೆ ಮಿನಿಸ್ಟರ್ ಆಗಿಬಿಟ್ಟರೆ.... ...ಗೆ ಈಗ ಒಳಗೊಳಗೇ ಹೊಗೆಯಾಡುತ್ತಿರುವ ...ಳ ಒಳಜಗಳ ಬೀದಿಗೆ ಬರುವುದು ಗ್ಯಾರಂಟಿ. ...ಜೆಪಿಯ ಮಹಿಳಾ ಕೋಟಾದಿಂದ ಶಕುಂತಲಾ ...ಹಾಗೂ ವಿಮಲಾ ಗೌಡ ಮಂತ್ರಿಗಿರಿ ಪಡೆಯಲು ...ಲಲ್ಲಿ ನಿಂತಿರುವಾಗ, ಎರಡು ಮೂರು ಬಾರಿ ... ಗೆದ್ದು ಎಂಎಲ್‌ಎಗಳಾಗಿರುವವರೇ ಡಜನ್ ... ಇರುವಾಗ ಕೇವಲ ಮೊನ್ನೆ ಪಾರ್ಟಿಗೆ ಸೇರಿ ...ಸಕಿಯಾಗಿರುವ ಅದೂ ಎಂಎಲ್‌ಸಿಯಾಗಿರುವ ... ಮಿನಿಸ್ಟರ್ ಆಗುವುದರೆಂದರೆ ಏನರ್ಥ ಎಂಬ ...ತದ ಕೂಗು ಹೊರಡು ...ಜೆಪಿಗಳಿಂದ.

...ಮೊನ್ನೆ ಹೂವಿನ ...ಗೆ ಹೋಗಿದ್ದ ...ಮಂತ್ರಿ ...ರಸ್ವಾಮಿ ಮೇ ...ಳಗೆ ಸಂಪುಟ ... ಖಚಿತ ...ದ್ದಾರೆ. ಹೊಸ ...ಾಗಿ ದಳದಿಂದ ..., ಬಿಜೆಪಿಯಲ್ಲಿ ... ಯಾರಿಗೆ ...ದರ ಬಗ್ಗೆ ಜನ ...ಸಿಕೊಳ್ಳುತ್ತಿಲ್ಲ. ಆದರೆ ...ಾ ಕರಂದ್ಲಾಜೆಗೆ ...ಯೂರಪ್ಪನವರು ...ಗಿರಿ ದಯಪಾಲಿಸು ...ಂಬ ಸುದ್ದಿಯೇ ... ಕ್ಯಾಂಪಿನಲ್ಲಿ ಬಾಂಬ್ ...ಾಗಿ ಹೋಗಿದೆ.



ಶೋಭಾ ಕರಂದ್ಲಾಜೆ


ಗಳೂ ಬಂದಿದ್ದವು. ನಂತರ ರಿಲೆಯನ್ಸ್ ಇನ್ಸೂರೆನ್ಸ್ ಕಂಪನಿಯ ಅಡ್ವೈಸರ್ (ಏಜೆಂಟ್) ಆದ ಶೋಭಾ ಯಡ್ಡಿ ಹಾಗೂ ರಾಮಚಂದ್ರೇಗೌಡರ ಜೊತೆ ರಾಜ್ಯದೆಲ್ಲೆಡೆ ಓಡಾಡಿ ಕೈಗೆ ಸಿಕ್ಕ ಬಿಜೆಪಿಗಳಿಗೆಲ್ಲಾ ಇನ್ಸೂರೆನ್ಸ್ ಪಾಲಿಸಿ ಗಂಟು ಹಾಕಿದ್ದರು.

ಹೀಗೆ ಒಂದಿಷ್ಟು ಹಣ ಕಂಡ ಶೋಭಾಗೆ ಯಡ್ಡಿಯ ಪೂರ್ಣ ಬೆಂಬಲವಿತ್ತು, ಆಕೆಯನ್ನು ಕರೆದೊಯ್ದು ಯಡ್ಡಿ ರಾಜ್ಯ ಬಿಜೆಪಿ ಕಾರ್ಯದರ್ಶಿಯನ್ನಾಗಿ ನೇಮಿಸಿದಾಗಲೂ ಯಾರೂ ಜಾಸ್ತಿ ತಲೆ ಕೆಡಿಸಿಕೊಂಡಿರಲಿಲ್ಲ, ಆದರೆ ಯಡ್ಡಿ ಸುಮ್ಮನಿರಬೇಕಲ್ಲ, ಹಾಗಾಗಿ ಅಷ್ಟೇನು ಅನುಭವವಿರದ, ಹಿರಿಯಳೂ ಅಲ್ಲದ, ಹಣವಂತಳೂ ಆಗಿರದಿದ್ದ ಶೋಭಾ ಮಿಂಚಿನ ವೇಗದಲ್ಲಿ ವಿಧಾನ ಪರಿಷತ್ ಸದಸ್ಯೆಯೂ ಆಗಿಬಿಟ್ಟರು. ಯಡಿಯೂರಪ್ಪನವರಿಗೆ ಇದೂ ಸಮಾಧಾನ ನೀಡಲಿಲ್ಲವೇನೋ, ಈಗ ಶೋಭಾರನ್ನು ಮಂತ್ರಿ ಮಾಡಲು ಹೊರಟಿದ್ದಾರೆ.

ಹಾಗೆ ನೋಡಿದರೆ ಹಿರಿತನ ಎಂದು ನೋಡುವುದಾದರೆ ಮಂತ್ರಿಗಳಾಬೇಕಾದವರು ಬಿಜೆಪಿಯಲ್ಲಿ



ಶೋಭಾ ಸುತ್ತ ಕಾದಾಟ!




ಸಿ.ಟಿ.ರವಿ

ಯಡ್ಡಿಗೆ ಬೇಕು-ಬಿಜೆಪಿಗೆ ಬೇಡ

ಕೋ-ಜಾ ಸರ್ಕಾರ ರಚನೆಯಾದಾಗಾಗಲಿ ಅಥವಾ ಕಳೆದ ವರ್ಷ ಬಿಜೆಪಿಯನ್ನೇ ವಿಭಜಿಸಿ ದಳದೊಂದಿಗೆ ಸೇರಲು ತುದಿಗಾಲಲ್ಲಿ ನಿಂತಿದ್ದಾಗಾಗಲಿ ಎಲ್ಲೆಡೆ ಯಡಿಯೂರಪ್ಪನವರೊಂದಿಗೆ ಕಾಣಿಸಿಕೊಂಡಿದ್ದ ಏಕೈಕ ಶಾಸಕಿಯೆಂದರೆ ಈ ಶೋಭಾ ಕರಂದ್ಲಾಜೆ. ಕೇವಲ ಹತ್ತು ವರ್ಷಗಳ ಹಿಂದೆ ಎಬಿವಿಪಿ ಕಾರ್ಯಕರ್ತೆಯಾಗಿ ಉಜಿರೆ, ಮಂಗಳೂರಿನಲ್ಲಿ ಓಡಾಡಿಕೊಂಡಿದ್ದ ಆ ಯುವತಿ ಒಮ್ಮೆ ಯಡ್ಡಿಯ ಕಣ್ಣಿಗೆ ಬಿದ್ದಳು. ನಂತರ ಚಕ್ಕಂತ ರಾಜ್ಯ ಬಿಜೆಪಿ ಕಾರ್ಯದರ್ಶಿಯಾಗಿ ಪಟ್ಟಂತ ಎಂಎಲ್‌ಸಿನೂ ಆಗಿ ಈಗ ಮಂತ್ರಿಯೂ ಆಗುತ್ತಾರೆಂದರೆ ದಶಕಗಟ್ಟಲೆ ಪಾರ್ಟಿ ಕೆಲಸ ಮಾಡಿರುವ ಕಾರ್ಯಕರ್ತರು, ಶಾಸಕರು ಸುಮ್ಮನಿರುತ್ತಾರೆಯೇ?

ಅದಕ್ಕೆ ಅರವಿಂದ ಲಿಂಬಾವಳಿ, ಯತ್ನಾಳ್, ಸಿ.ಟಿ. ರವಿ ತಮಗೆ ಮಂತ್ರಿಗಿರಿ ಸಿಗದಿದ್ದರೂ ಪರವಾಗಿಲ್ಲ ಶೋಭಾ ಮಾತ್ರ ಮಿನಿಸ್ಟರ್ ಆಗಕೂಡದೆಂದು ಹಠ ಹಿಡಿಯುತ್ತಿದ್ದಾರೆ.


ಅದೂ ಅಲ್ಲದೆ ಕರ್ನಾಟಕ ಬಿಜೆಪಿಯಲ್ಲಿ ಎಂಎಲ್‌ಎಗಳು 79 ಜನರಿದ್ದಾರೆ, ಎಂಎಲ್‌ಸಿಗಳಾಗಿ 9 ಮಂದಿ ಇದ್ದಾರೆ. ಈ ಒಂಬತ್ತರ ಪೈಕಿ ಮೂವರು ಅಂದರೆ ಶಂಕರಮೂರ್ತಿ, ಈಶ್ವರಪ್ಪ ಹಾಗೂ ರಾಮಚಂದ್ರೇಗೌಡ ಈಗಾಗಲೇ ಸಚಿವರಾಗಿದ್ದಾರೆ. ಇವರೆಲ್ಲಾ ಬಿಜೆಪಿ ಒಂದು ಬರಡು ನೆಲವಾಗಿದ್ದಾಗಿನಿಂದಲೂ ಉತ್ತಿ-ಬಿತ್ತಿ ಬೆಳೆ ತೆಗೆಯಲು ಲಾಗಾ ಹಾಕಿದ್ದವರೆ. ಪಾರ್ಟಿಯ ಸೀನಿಯರ್ ಲೀಡರ್‌ಗಳೆನಿಸಿಕೊಂಡವರು.



ವಿಮಲಾ ಗೌಡ

ಆದರೆ ಎಂಎಲ್‌ಸಿ ಶೋಭಾಗೆ ಈ ಹಿನ್ನೆಲೆ ಇಲ್ಲ, ಎಬಿವಿಪಿಯ ಒಂದಿಷ್ಟು ಓಡಾಟ, ಮಂಗಳೂರು ವಿವಿಯ ಸೆನೆಟ್ ಮೆಂಬರಾಗಿ ಕೆಲಸ ಮಾಡಿ ಸೀದಾ ಬೆಂಗಳೂರಿಗೆ ಬಂದು ಠಿಕಾಣಿ ಹೂಡಿದ್ದಾಕೆ. ಕೆಲಕಾಲ ಹರಿಶ್ಚಂದ್ರ ಘಾಟ್ ಹತ್ತಿರವಿರುವ ಆರ್‌ಎಸ್‌ಎಸ್‌ನ 'ಸುಕೃಪ' ಕಟ್ಟಡದಲ್ಲೂ ನೆಲೆಸಿದ್ದು ರೂಂಮೇಟ್ ಒಬ್ಬಳ ಸರ ಕಳುವಾದಾಗ ಇದೇ ಶೋಭಾ ಮೇಲೆ ಆರೋಪ

ಬೇಕಾದಷ್ಟು ಜನರಿದ್ದಾರೆ. ಕಾಗೇರಿ, ರಘುಪತಿ ಭಟ್, ಮತ್ತೊಂದೆಡೆ ದಲಿತ ಕೋಟಾದಲ್ಲಿ ನಾರಾಯಣಸ್ವಾಮಿ ಹಾಗೂ ಬೀದರ್ ಜಿಲ್ಲೆಯ ರಾಜೇಂದ್ರ ವರ್ಮ ಕಿತ್ತಾಡಿಕೊಳ್ಳುತ್ತಿದ್ದಾರೆ. ಯುವಕರ ಲಿಸ್ಟ್‌ನಲ್ಲಿ ಅರವಿಂದ ಲಿಂಬಾವಳಿ, ಸಿ.ಟಿ. ರವಿ, ಸುನೀಲ್‌ಕುಮಾರ್ ಛಾನ್ಸ್ ಸಿಕ್ಕರೆ ಯಾಕೆ ಬೇಡ ಎನ್ನುತ್ತಿದ್ದಾರೆ. ಬಹಳ ಮುಖ್ಯವಾಗಿ ಬಿಜೆಪಿಯ ಮಹಿಳಾ ಕೋಟಾದಲ್ಲೇ ನೇರ ಚುನಾವಣೆಯಲ್ಲಿ ಗೆದ್ದಿರುವ ಶಕುಂತಲಾ ಶೆಟ್ಟಿ ಹಾಗೂ ಹಿರಿಯ ನಾಯಕಿ ಎಂಎಲ್‌ಸಿ ವಿಮಲಾ ಗೌಡ ಮಂತ್ರಿಯಾಗುವ ಹಕ್ಕು ಮುಂದಿಡುತ್ತಿದ್ದಾರೆ.



ಅರವಿಂದ ಲಿಂಬಾವಳಿ

[illegible]

ಕರ್ನಾಟಕದಲ್ಲಿ ಇದೇ ಮೊದಲ ಬಾರಿಗೆ ಅಧಿಕಾರ ಪಡೆದಿರುವ ಬಿಜೆಪಿಯೊಳಗೆ ಮಂತ್ರಿಗಳಾಗಲು ಹೀಗೆ ಡಜನ್‌ಗಟ್ಟಲೆ ಜನ ಕ್ಯೂ ನಿಂತಿರುವಾಗ ಇವರನ್ನೆಲ್ಲಾ ಓವರ್‌ಟೇಕ್ ಮಾಡಿಸಿ ಜೂನಿಯರ್ ಶೋಭಾ ಕರಂದ್ಲಾಜೆಗೆ ಯಡ್ಡಿ ಮಂತ್ರಿಗಿರಿ ಕೊಡಿಸಿದರೆ ಅವರೆಲ್ಲಾ ಸುಮ್ಮನಿರುತ್ತಾರಾ?

ಮುಂದಿನ ಸಂಪುಟ ವಿಸ್ತರಣೆಯಲ್ಲಿ ಮಾಯಕೊಂಡ ರವೀಂದ್ರನಾಥ್, ರಾಜೇಂದ್ರ ವರ್ಮ, ಶಿವಾನಂದ ನಾಯ್ಕ ಯಡ್ಡಿಯ ಶಾರ್ಟ್‌ಲಿಸ್ಟ್‌ನೊಳಗೆ ಸೇರಿದ್ದಾರೆ. ಅವಕಾಶ ಸಿಗಲ್ಲ ಎಂಬ ಅನುಮಾನವಿರುವವರು 'ಪಾರ್ಟಿಲಿ ಎಂಭತ್ತರ ಹತ್ತಿರ ಎಂಎಲ್‌ಎಗಳಿದ್ದಾರೆ. ನೀವು ಬರೀ ಎಂಎಲ್‌ಸಿಗಳನ್ನೇ ಮಂತ್ರಿ ಮಾಡುತ್ತಾ ಹೋದರೆ ಹೇಗೆ' ಎಂದು ಜಗಳ ಶುರು ಮಾಡಿದ್ದಾರೆ. ಹೀಗಿರುವಾಗ ಮತ್ತೊಬ್ಬ ಎಂಎಲ್‌ಸಿ ಶೋಭಾ ಕರಂದ್ಲಾಜೆ ಮಂತ್ರಿಯಾಗಿಬಿಟ್ಟರೆ ಬಿಜೆಪಿಯೊಳಗಿನ ಜಗಳವನ್ನು ಏಕಪತ್ನಿ ವ್ರತಸ್ಥ ಸಾಕ್ಷಾತ್ ಶ್ರೀರಾಮನೇ ಇಳಿದು ಬಂದರೂ ಪರಿಹರಿಸಲಾಗುವುದಿಲ್ಲ.

ತಮ್ಮ ಪತ್ನಿ ಮೈತ್ರಾದೇವಿ ಸಾವು ತಂದುಕೊಳ್ಳುವ ಮೊದಲು, ಆ ನಂತರವೂ ಶೋಭಾ ಕರಾಂದ್ಲಾಜೆ ಜೊತೆ ಯಡ್ಡಿ ಪದೇಪದೇ ಕಾಣಿಸಿಕೊಂಡಿದ್ದಾರೆ. ಪಾರ್ಟಿ ಕೆಲಸಕ್ಕೆ, ಊರೂರು ಸುತ್ತುತ್ತಾ ಹೆಲಿಕಾಪ್ಟರಿನಲ್ಲಿ ದೇವಸ್ಥಾನಗಳಿಗೆ ಕರೆದೊಯುತ್ತಾ, ಕೊನೆಗೆ ಸರ್ಕಾರ ರಚಿಸುವಾಗ ಗವರ್ನರ್ ಮನೆಗೂ ಯಡ್ಡಿ ಶೋಭಾರನ್ನು ಕರೆದೊಯ್ದಿದ್ದರು.

ಇದೆಲ್ಲಾ ಜನ ಮಾತಾಡುವ ಹೊತ್ತಿಗೆ ಕರ್ನಾಟಕದ ಆರ್‌ಎಸ್‌ಎಸ್ ಮುಖಂಡ ಜಯದೇವ್ ಸಹ ಯಡ್ಡಿಗೆ 'ರಾಮರಾಜ್ಯ ಪರಿಪಾಲನೆಯ' ಕೆಲ ಹಿತವಚನಗಳನ್ನು ಹೇಳಿದ್ದರು.

ಇದು ಯಡ್ಡಿಯ ಮನಸ್ಸಿಗೆ ನಾಟಿದಂತೆ ಕಾಣುತ್ತಿಲ್ಲ. ಅಷ್ಟೇ ಅಲ್ಲ ರಾಜ್ಯ ಬಿಜೆಪಿಯೊಳಗೆ ಶೋಭಾ ಕರಂದ್ಲಾಜೆ ಕಾರಣದಿಂದಲೇ ಒಡಕು, ಬಿರುಕುಗಳೂ ಶುರುವಾಗುವಂತೆ ಕಾಣುತ್ತಿವೆ.

ಬಜೆಟ್ ದಿನ ಯಡ್ಡಿ ಪೌರುಷ

ಹಣಕಾಸು ಸಚಿವರೂ ಆಗಿರುವ ಯಡಿಯೂರಪ್ಪ ಕಳೆದ ತಿಂಗಳು ಬಜೆಟ್ ಮಂಡಿಸಿದ ದಿನ ಸಾಕಷ್ಟು ವೀರಾವೇಶದ ಮಾತಾಡಿದ್ದರು. ಮೊದಲ ಬಜೆಟ್ಟಲ್ವಾ ಅದಕ್ಕೆ ಈ ಆವೇಶ, ಪೌರುಷ ಅಂತೆಲ್ಲಾ ಜನ ಭಾವಿಸಿದ್ದರು. ಆದರೆ ಅವತ್ತು ರಾತ್ರಿಯೇ ಯಡ್ಡಿಯ ಬಿಪಿ ಹೆಚ್ಚಾಗಿ ಜಯದೇವ ಆಸ್ಪತ್ರೆಗೆ ದಾಖಲಾಗಿದ್ದ ವಿಚಾರ ಬಹುಶಃ ಯಾರಿಗೂ ಗೊತ್ತಿಲ್ಲ.

ಅವತ್ತು ಯಡ್ಡಿಯನ್ನು ವಿವರವಾಗಿ ಪರಿಶೀಲಿಸಿದ ವೈದ್ಯರು "ಈ ವಯಸ್ಸಿನಲ್ಲಿ ನಿಮ್ಮ ಈ ಉತ್ಸಾಹ, ಆವೇಶ ತರವಲ್ಲ. ಈಗಾಗಲೇ ವಯಸ್ಸಾಗಿರುವುದರಿಂದ ಪೌರುಷ ಪ್ರದರ್ಶನವೂ ಸಾಧ್ಯವಿಲ್ಲ, ಸ್ವಲ್ಪ ನಿಮ್ಮ ಆರೋಗ್ಯದ ಬಗ್ಗೆ ಗಮನವಿರಲಿ" ಎಂದು ಹಿತವಚನ ಹೇಳಿ ಕಳಿಸಿದರಂತೆ. ಪಾಪ ಯಡ್ಡಿ, ತಮ್ಮ ಆರೋಗ್ಯ ಸುಧಾರಣೆಗೆ ಅಮೆರಿಕಾದಿಂದ ತರಿಸಿ ನುಂಗಿದ್ದ ಮಾತ್ರೆ 'ವಯಾ' ಅವರ ಬಿಪಿ 'ಗ್ರ'ಹಚಾರವನ್ನೇ ಏರುಪೇರು ಮಾಡಿತ್ತಂತೆ.

ಯಡ್ಡಿಯ 'ಆಶ್ರಯ' ಸ್ಕೀಂ

...ಧರಂಸಿಂಗ್ ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದ ... ಹಾಲಿ, ಮಾಜಿ ಹಾಗೂ ಭಾವಿ ಶಾಸಕರುಗಳಿಗೆ ...ೇಪುರಿ ಹಂಚಿದಂತೆ ಬಿಡಿಎ ಸೈಟುಗಳನ್ನು ...ದರಲ್ಲವೆ.

...ಇದರ ವಿಶೇಷ ಫಲಾನುಭಾವಿ ಅಂದರೆ ಎಂಎಲ್‌ಸಿ ...ಭಾ ಕರಂದ್ಲಾಜೆ. ಬೇರೆ ಯಾವ ಶಾಸಕರಿಗೂ ... ಕೋಟಿ ಬೆಲೆ ಬಾಳುವ ಕಾರ್ನರ್ ಸೈಟನ್ನೇ ...ಭಾ ಗಿಟ್ಟಿಸಿದ್ದರು. ಯಡಿಯೂರಪ್ಪನರ ವಿಶೇಷ ...ಜಯಿಂದ ದೊರೆತ ಸೈಟದು. ವಿರೋಧ ಪಕ್ಷದ ...ರ್ ಆಗಿದ್ದರೂ ಧರಂಸಿಂಗ್ ಜೊತೆ ಸದರವಾಗಿದ್ದ ... ತಾವೇ ಖುದ್ದು ಓಡಾಡಿ ತಮ್ಮ ನಿಷ್ಠಾವಂತ ...ರ್ಯಕರ್ತೆ ಶೋಭಾ ಕರಂದ್ಲಾಜೆಗೆ ಈ ಸೈಟು ...ಸಿದ್ದರು. ಬೆಂಗಳೂರಲ್ಲಿ ಇರಲು ಜಾಗವಿಲ್ಲ ...ು ಅರ್ಜಿ ಹಾಕಿ ದಿನಾಂಕ 25.1.05 ರಂದು ...ಬ 8.62 ಲಕ್ಷಕ್ಕೆ 50 X 80 ಅಡಿ ಕಾರ್ನರ್ ... ಪಡೆದಿದ್ದ ಶೋಭಾ ಅದೇ ಸ್ಪೀಡಿನಲ್ಲಿ ...ೂಕಾಲು ಕೋಟಿಗೆ ಆ ಸೈಟನ್ನು ಮಾರಿ ಕಾಸು ...ಕೊಂಡರು. ಈಗ ಶೋಭಾ ವಾಸವಿರುವುದು ...್ ರೋಡಿನ ಒಂದು ಬಂಗಲೆಯಲ್ಲಿ, ಅದರ ...ೇವಲ ಮೂರು ಕೋಟಿಯಂತೆ!



ತಮಿಳುನಾಡಿನಲ್ಲಿ ದೇವೇಗೌಡರ '[illegible]'

ಕನಕಪುರ ತಾಲ್ಲೂಕಿನ ತಮಿಳುನಾಡು ಗಡಿ ಪ್ರದೇಶಗಳಿಗೆ ತಾಗಿಕೊಂಡಿರುವ ತಳಿ ಹಾಗೂ ಹೊಸೂರುಗಳಲ್ಲಿ ಈಗ ಎತ್ತ ದೇವೇಗೌಡರದ್ದೇ ಮಾತು. [illegible] ನಡೆಯಲಿರುವ ವಿಧಾನಸಭಾ ಚುನಾವಣೆಗಳಿಗೆ ಗೌಡರ [illegible] 298 ಕ್ಷೇತ್ರಗಳಿರುವ ತಮಿಳುನಾಡು ವಿಧಾನಸಭೆಯಲ್ಲಿ ಜೆಡಿಎಸ್‌ಗೆ ಸ್ಪರ್ಧಿಸಲು ಸಿಕ್ಕಿರುವುದು ಕೇವಲ 2 ಕ್ಷೇತ್ರ ಮಾತ್ರ.

ಹೊಸೂರು ಹಾಗೂ ತಳಿ ಟೌನ್ ಬಿಟ್ಟರೆ ಉಳಿದೆಲ್ಲಾ ಮತದಾರರು ಈ ಬರಿಯಾದ ದಟ್ಟ ಕಾಡುಗಳ ಬೆಟ್ಟಗುಡ್ಡಗಳಲ್ಲಿನ ಗ್ರಾಮಗಳಲ್ಲಿದ್ದಾರೆ. ಕಳೆದ ವಾರವಿಡಿ ಅಂಚೆಟ್ಟಿ, ಉದುಬರಾಣಿ, ಬ್ಯಾಲಪಟ್ಟಿ... ಇತ್ಯಾದಿ ಐವತ್ತು-ನೂರು ಓಟುಗಳಿರುವ ಕಾಡಿನ ಕುಗ್ರಾಮಗಳಿಗೂ ಗೌಡರು ಹೋಗಿ ಓಟು ಕೇಳಿ ಬಂದಿದ್ದಾರೆ.

ಈ ಬಾರಿ ತಮಿಳುನಾಡಿನಲ್ಲಿ ಕನಿಷ್ಠ ಒಂದಾದರೂ ಸೀಟು ಗೆದ್ದರೆ ಜೆಡಿಎಸ್‌ಗೆ ನ್ಯಾಷನಲ್ ಪಾರ್ಟಿ ಸ್ಥಾನಮಾನ ಉಳಿಯಬಹುದೇನೋ ಎಂಬ ನಿರೀಕ್ಷೆ ಗೌಡರಿಗಿರುವಂತಿದೆ. ಫುಲ್‌ಟೈಂ ರಾಜಕಾರಣಿಯಾದವರಿಗೆ ಇಂತಾ ಲೆಕ್ಕಾಚಾರಗಳಿದ್ದರೆ ತಪ್ಪಲ್ಲ, ಆದರೆ ಈ ವಯಸ್ಸಿನಲ್ಲಿ ಇಂತಾ ಉರಿಬಿಸಿಲಿನಲ್ಲೂ ಗೌಡರು ಬರಬಹುದಾದ ಹತ್ತಿಪ್ಪತ್ತು ಓಟುಗಳಿಗಾಗಿ ಕಾಡುಮೇಡು ಅಲೆಯುತ್ತಿರುವುದು [illegible] ಆಗಿದೆ [illegible] ಇದು.

ಆದರೆ ಗೌಡರ ಜೊತೆಗೆ ಅಲ್ಲಿಗೆ ಹೋಗಿದ್ದ ಜಾತ್ಯತೀತ ದಳದ ರಾಜ್ಯಾಧ್ಯಕ್ಷ ಎಂ.ಪಿ. ಪ್ರಕಾಶ್ ಎರಡೇ ದಿನಕ್ಕೆ ಪರಾರಿಯಾಗಿ ಹೂವಿನ ಹಡಗಲಿಯ ನಾಟಕೋತ್ಸವದಲ್ಲಿ ಹಾಜರಾಗಿಬಿಟ್ಟರು.

ತಮ್ಮ ಆಯುಷ್ಯದಲ್ಲಿ [illegible] ಗೌಡರಿಗೆ [illegible] ಈ [illegible]

ದಳದವರು ಕೊಲ್ಲಲ್ ಪೋಲೀಸ್ ಕಾಯ್ತನೆ?

ನೆಲಮಂಗಲದ ಜೋಡಿ ಕೊಲೆ






ಕೃಷ್ಣಮೂರ್ತಿ

ಪೊಲೀಸರೇ ಲ್ಯಾಂಡ್ ಮಾಫಿಯಾಗಳಾದರೆ ಏನಾಗುತ್ತದೋ ನೆಲಮಂಗಲದಲ್ಲಿ ಅದೇ ಸಂಭವಿಸಿದೆ. ಚಿತ್ತನಗೆರೆಯ ಜನಪರ ವಕೀಲ ದೇವರಾಜ್ ಮತ್ತು ಗ್ರಾಮ ಪಂಚಾಯ್ತಿ ಸದಸ್ಯ ಕೃಷ್ಣಮೂರ್ತಿ ಇಷ್ಟರಲ್ಲೇ ಕೊಲೆಯಾಗುತ್ತಾರೆಂಬುದು ಇಡೀ ನೆಲಮಂಗಲಕ್ಕೇ ಗೊತ್ತಾಗಿತ್ತು. ಅದರಲ್ಲೂ ಬೆಂಗಳೂರು ಗ್ರಾಮಾಂತರ ಅಡಿಷನಲ್ ಎಸ್ಪಿ ಎಲ್.ಜಿ. ಕೃಷ್ಣಪ್ಪನಿಗಂತೂ ಚೆನ್ನಾಗಿ ಗೊತ್ತಿತ್ತು!

ಖಾಕಿ ಮರೆಯಲ್ಲಿನ ತನ್ನ ಲ್ಯಾಂಡ್ ಡೀಲುಗಳಿಗೆ ಬಡರೈತರ ಜಮೀನು ಕಬಳಿಕೆಗೆಂದು ಯಾವ ಪಾತಕಿ ಚಿತ್ತನಗೆರೆ ಶ್ರೀನಿವಾಸನನ್ನು ಅಡಿಷನಲ್ ಎಸ್ಪಿ ಕೃಷ್ಣಪ್ಪ ಪೋಷಿಸಿಕೊಂಡೇ ಬಂದರೋ ಅದೇ ಶ್ರೀನಿವಾಸನ ಪಡೆ ಈಗ ಡಬ್ಬಲ್ ಮರ್ಡರ್ ಮಾಡಿದೆ. ಇನ್ನೂ ದಾರುಣವೆಂದರೆ ಈಗ ಜೋಡಿ ಕೊಲೆ ನಡೆದದ್ದು ಇಲ್ಲಿಗೆ ಎಂಟು ತಿಂಗಳ ಹಿಂದೆ ಇವರಿಂದಲೇ ಹತನಾದ ಚಿತ್ತನಗೆರೆ ಬಸವಯ್ಯನ ಕೊಲೆಯಿಂದ ಬಚಾವಾಗುವುದಕ್ಕಾಗಿ!



ಅನಂತು



ಬೀರಯ್ಯ

ಎರಡಕ್ಕೂ ಅಡಿಷನಲ್ ಎಸ್ಪಿ ಕೃಷ್ಣಪ್ಪನದೇ ಅಧ್ಯಕ್ಷತೆ. ಇಂಥಾ ಕೃಷ್ಣಪ್ಪನನ್ನು ಬೆಂಗಳೂರು ಗ್ರಾಮಾಂತರಕ್ಕೆ ಅಡಿಷನಲ್ ಎಸ್ಪಿಯಾಗಿ ತಂದದ್ದು ಗಣಿಮಂತ್ರಿ ಮತ್ತು ಕೊರಟಗೆರೆ ಶಾಸಕ ಚೆನ್ನಿಗಪ್ಪ. ಧರ್ಮಸಿಂಗ್ ಮುಖ್ಯಮಂತ್ರಿಯಾಗಿದ್ದಾಗ ಕುಮಾರಣ್ಣನಿಂದ ಅಪ್ಪಾಜಿಗೆ ಹೇಳಿಸಿ ತನ್ನನ್ನು ಅಡಿಷನಲ್ ಎಸ್ಪಿ ಹುದ್ದೆಯಲ್ಲಿ ಪ್ರತಿಷ್ಠಾಪಿಸಿದ ಚೆನ್ನಿಗಪ್ಪನವರ ಋಣಕ್ಕಿಂತಲೂ ಕೃಷ್ಣಪ್ಪನಿಗೆ ಪಕ್ಷನಿಷ್ಠೆ, ಪತ್ನಿ ನಿಷ್ಠೆ, ಹುಟ್ಟೂರಿನ ನಿಷ್ಠೆ, ಜಾತಿ ನಿಷ್ಠೆಗಳ ಋಣಭಾರವೇ ದೊಡ್ಡದಿತ್ತು.

ಇದೇ ನೆಲಮಂಗಲದ ಲಕ್ಕಸಂದ್ರ ಅಡಿಷನಲ್ ಎಸ್ಪಿ ಕೃಷ್ಣಪ್ಪನ ಹುಟ್ಟೂರು. ಅವರ ಧರ್ಮಪತ್ನಿ ಭಾಗ್ಯಲಕ್ಷ್ಮಮ್ಮ ಇದೇ ಲಕ್ಕಸಂದ್ರದಿಂದ ಗ್ರಾಮ ಪಂಚಾಯ್ತಿ ಸದಸ್ಯೆಯಾಗಿ ಗೆದ್ದು ಸದ್ಯ ಅರೆಬೊಮ್ಮನಹಳ್ಳಿ ಗ್ರಾಮ ಪಂಚಾಯ್ತಿಗೆ ಅಧ್ಯಕ್ಷೆ. ಸಾಲದ್ದಕ್ಕೆ ಜಾತ್ಯತೀತ ಜನತಾದಳದ ಸಕ್ರಿಯ ಕಾರ್ಯಕರ್ತೆ. ಇನ್ನು ಅಡಿಷನಲ್ ಎಸ್ಪಿ ಕೃಷ್ಣಪ್ಪನವರ ಖಾಕಿ ನಿಷ್ಠೆ ಯಾವ ಮಟ್ಟಕ್ಕಿದೀತು?

ಪ್ರಾರಂಭದಲ್ಲಿ ಚಿತ್ತನಗೆರೆ ಬಸವಯ್ಯನನ್ನು ಕೊಂದು ಅದರಿಂದ ಬಚಾವಾಗಲು ಈಗ ಮತ್ತಿಬ್ಬರನ್ನು ಕೊಂದ ಪಾತಕಿ ಶ್ರೀನಿವಾಸ ಕೂಡ ಜಾತ್ಯತೀತ ಜನತಾದಳದ ಪಂಚಾಯ್ತಿ ಸದಸ್ಯ ಮತ್ತು ಅಡಿಷನಲ್ ಎಸ್ಪಿ ಕೃಷ್ಣಪ್ಪನವರ ನಂಬಿಕಸ್ಥ ಬಂಟ. ಅಲ್ಲಿಗೆ ಕೊಲೆಯ ಕಾರಣ ಮತ್ತು ಪೋಲೀಸ್ ವಾತಾವರಣದ ಬಗ್ಗೆ ಬಿಡಿಸಿ ಹೇಳಬೇಕಿಲ್ಲ.

ಬಹುಶಃ ಮಂತ್ರಿ ಚೆನ್ನಿಗಪ್ಪ ಮತ್ತು ಅಡಿಷನಲ್ ಎಸ್ಪಿ ಕೃಷ್ಣಪ್ಪ ಚಿತ್ತನಗೆರೆಯ ಪಾತಕಿ ಶ್ರೀನಿವಾಸನ ಬೆನ್ನಿಗೆ ನಿಲ್ಲದೇ ಹೋಗಿರುತ್ತಿದ್ದರೆ ಈ ಮೂರೂ ಕೊಲೆಗಳಾಗುತ್ತಿರಲಿಲ್ಲ. ಬೆಂಗಳೂರು ಉತ್ತರ ತಾಲ್ಲೂಕು ಮಾಕಳಿ ರಸ್ತೆಯಲ್ಲಿ ನೆಲಮಂಗಲಕ್ಕೆ ಮೂರು ಮೈಲಿ ಹಿಂದಕ್ಕಿರುವುದೇ ಚಿತ್ತನಗೆರೆ. ಸಾವಿರ ಜನಸಂಖ್ಯೆಯ ಆ ಊರಿನಲ್ಲಿ ಪ್ರಾರಂಭದಿಂದಲೂ ಜನಕಂಟಕನಂತಿದ್ದವನು ಹನುಮಂತಯ್ಯ. ಬಡವರ ಜಮೀನು ಕಬಳಿಸುವುದು, ದಲಿತರನ್ನು ಓಡಿಸುವುದು ಮಾಡಿಕೊಂಡಿದ್ದ ಈತನ ಹಾವಳಿಯ ವಿರುದ್ಧ ಬಡವರ ನೆರವಿಗೆ ನಿಂತ ಅದೇ ಊರಿನ ವಿಲೇಜ್ ಅಕೌಂಟೆಂಟ್ ದಿ.ಎಚ್. ಬೈಲಪ್ಪ. ಈ ಬೈಲಪ್ಪನ ಮಗನೇ ಈಗ ಕೊಲೆಯಾಗಿರುವ ವಕೀಲ ದೇವರಾಜ್. ಕೊಂದ ಶ್ರೀನಿವಾಸನ ತಂದೆಯೇ ಜನಕಂಟಕ ಹನುಮಂತಪ್ಪ!

ಕುರುಬರ ಬೈಲಪ್ಪ ಮತ್ತು ಒಕ್ಕಲಿಗರ ಹನುಮಂತಪ್ಪನ ಮಧ್ಯೆ ಶುರುವಾದ ದ್ವೇಷವು, ಅವರ ಮಕ್ಕಳ ಕಾಲಕ್ಕೂ ವಿಸ್ತರಿಸಿತು. ಬೆಳೆದಂತೆಲ್ಲ ಶ್ರೀನಿವಾಸನ ಪುಂಡಾಟಿಕೆ ಹೆಚ್ಚಾಯಿತು.

ರಾತ್ರಿಯಾದರೆ ಬೆಂಗಳೂರು-ನೆಲಮಂಗಲ ರಸ್ತೆಯಲ್ಲಿ ರಾಬರಿ, ಲಾರಿ ಲೋಡು ಎಗರಿಸುವುದು, ಕಂಡವರ ಜಮೀನಿಗೆ ನಕಲಿ ದಾಖಲೆ ಹುಟ್ಟಿಸಿ ಕಾಂಪೌಂಡ್ ಹಾಕುವುದು ಆತನ ನಿತ್ಯ ಕಾಯಕವಾಗಿತ್ತು. ಆಟೋ ಬೀರಯ್ಯ, ಅನಂತು, ಶಂಕ್ರ, ಶ್ರೀರಾಂಪುರದ ಹಳೇ ರೌಡಿ ಮಚ್ಚು ಮುನಿಯ ಮುಂತಾದ ಪಾತಕಿಗಳ ಹಿಂಡೇ ಶ್ರೀನಿವಾಸನ ಬೆನ್ನಿಗಿತ್ತು.

ಇಲ್ಲಿಗೆ ಎರಡು ವರ್ಷದ ಹಿಂದೆ ಚಿತ್ತನಗೆರೆಯ ಹಾಲು ಉತ್ಪಾದಕರ ಸಂಘಕ್ಕೆ ಚುನಾವಣೆ ನಡೆಯಿತು. ಅಲ್ಲಿಗೆ ತಮ್ಮೆಲ್ಲಾ ದುರಾಚಾರದಲ್ಲಿ ಸಾಥಿಯಾಗಿದ್ದ ರಾಂಪಾಳ್ಯದ ಮುನಿಭೈರಪ್ಪನನ್ನು ಕಾರ್ಯದರ್ಶಿಯನ್ನಾಗಿಸುವುದು ಜಾತ್ಯತೀತ ದಳದ ಸೀನನ ಹುನ್ನಾರವಾಗಿತ್ತು. ಆದರೆ ಲಾಯರ್ ದೇವರಾಜ್ ಮತ್ತು ಗ್ರಾಮಪಂಚಾಯ್ತಿ ಸದಸ್ಯ ಕೃಷ್ಣಮೂರ್ತಿ ಸೇರಿಕೊಂಡು ಚಿತ್ತನಗೆರೆ ಬಸವಯ್ಯ ಎಂಬ ವಿದ್ಯಾವಂತನನ್ನು ನಿಲ್ಲಿಸಿ ಗೆಲ್ಲಿಸಿಬಿಟ್ಟರು. ಇದೇ ಜಿದ್ದಾಜಿದ್ದಿಗೆ ಮೂಲವಾಯಿತು.



ಜಿದ್ದಿನ ಬೆಂಕಿಗೆ ಬಸ್ಮವಾದ ಮುಗ್ಧ ಹಸುಗಳು

ಇದಾಗಿ ಮೂರೇ ತಿಂಗಳಿಗೆ ಶ್ರೀನಿವಾಸ ಮುನಿಯಪ್ಪ ದೇವರ ಜಾತ್ರೆ ನಡೆಸಿದರೆ, ಅದನ್ನು ಲಾಯರ್ ದೇವರಾಜ್ ಮತ್ತು ಬೆಂಬಲಿಗರು ಬಹಿಷ್ಕರಿಸಿದ್ದು ಸೀನನ ಗಾಯದ ಮೇಲೆ ಬರೆ ಎಳೆದಂತಾಯ್ತು.

ಇದಾಗಿ ಹದಿನೈದು ದಿನಕ್ಕೆ ಬೋರ್‌ವೆಲ್ ಕೊರೆಯಲೆಂದು ಅಧಿಕಾರಿಗಳು ಬಂದರು. ಹಳ್ಳಿಯ ಜನಕ್ಕೆ ಕುಡಿಯುವ ನೀರಿಗೆಂದು ತೋಡಿದಿದ ಬೋರ್‌ವೆಲ್ ಅನ್ನು ಶ್ರೀನಿವಾಸ ತನ್ನ ಜಮೀನಿನಲ್ಲಿ ತೋಡಿಸಲು ಯತ್ನಿಸಿದ್ದನ್ನು ದೇವರಾಜ್ ತಂದೆ ಬೈಲಪ್ಪ ಪ್ರತಿಭಟಿಸಿದ್ದಾರೆ. ಅದು ಅಲ್ಲೇ ಇದ್ದ ಸೀನನ ಭಂಟ ಆಟೋ ಬೀರಯ್ಯನಿಗೆ ಹಿಡಿಸದೇ ಆತ ಎತ್ತಿದ್ದೇ ಬೈಲಪ್ಪನ ಕಪಾಳಕ್ಕೆ ಬಾರಿಸಿಬಿಟ್ಟ. ಈ ಬಗ್ಗೆ ಬೈಲಪ್ಪ ಪೋಲೀಸ್ ಕಂಪ್ಲೇಂಟ್ ಕೊಟ್ರೂ ಪ್ರಯೋಜನವಾಗಲಿಲ್ಲ.

ಸಾಕ್ಷಾತ್ ಅಡಿಷನಲ್ ಎಸ್ಪಿ ಕೃಷ್ಣಪ್ಪನವರೇ ಶ್ರೀನಿವಾಸನ ಬೆನ್ನಿಗಿದ್ದ ಮೇಲೆ ನೆಲಮಂಗಲದ ಎಸ್ಸೈ ಪರಮೇಶ್ ತಾನೇ ಏನು ಮಾಡಿಯಾರು?

ಹೀಗಿರುತ್ತಲೇ ಪಂಚಾಯ್ತಿ ಚುನಾವಣೆ ಬಂತು. ಜಾತ್ಯತೀತ ದಳದಿಂದ ಶ್ರೀನಿವಾಸ್, ಹನುಮಕ್ಕ ಗೆದ್ದರೆ ಕಾಂಗ್ರೆಸ್ಸಿನಿಂದ ಕೃಷ್ಣಮೂರ್ತಿ ಮತ್ತು ಪಾರಿಜಾತ ಗೆದ್ದು ಬಿಟ್ಟರು. ಏನೆಲ್ಲಾ ತಾಕತ್ತಿದ್ದೂ ಕಾಂಗ್ರೆಸ್ಸಿನವರನ್ನು ಸೋಲಿಸಲಾಗದೇ ಶ್ರೀನಿವಾಸ ಕೆಂಡಾಮಂಡಲನಾದ. ಅದೇ ಹೊತ್ತಿಗೆ ಅಡಿಷನಲ್ ಎಸ್ಪಿ ಕೃಷ್ಣಪ್ಪನವರ ಪರವಾಗಿ ಒಂದೆರಡು ಲ್ಯಾಂಡ್ ಡೀಲುಗಳನ್ನು ಮಾಡಿದ.




ಮಾಜಿ ಆಂಜನಮೂರ್ತಿ, ಹಾಲಿ ಚೆನ್ನಿಗಪ್ಪ

ಯಾವತ್ತು ತಾನೇ ಹಮ್ಮಿಕೊಂಡಿದ್ದ ಮಾರಿಹಬ್ಬಕ್ಕೆ ದೇವರಾಜು ಬೆಂಬಲಿಗರು ಸಹಕರಿಸಲಿಲ್ಲವೋ ಶ್ರೀನಿವಾಸ ಚಿತ್ತನಗೆರೆ ಬಸವಯ್ಯನನ್ನು ಮುಗಿಸಲು ನಿರ್ಧರಿಸಿಬಿಟ್ಟ.


ಬಸವಯ್ಯನನ್ನು ಮುಗಿಸಿಬಿಟ್ಟರೆ ಲಾಯರ್ ದೇವರಾಜು ಕತೆ ಮುಗಿದಂತೆಯೇ ಎಂಬುದು ಶ್ರೀನಿವಾಸನ ಲೆಕ್ಕಾಚಾರವಾಗಿತ್ತು. ಅದು 2005 ರ ಜೂನ್ 16 ನೇ ತಾರೀಖು. ನೆಲಮಂಗಲದ ಬಸವನಹಳ್ಳಿ ರಸ್ತೆಯ ತ... ಬಾಳೆಕಾಯಿ ಮಂಡಿಯಲ್ಲಿ ಒಬ್ಬ... ಕೂತಿದ್ದ ಬಸವಯ್ಯನ ಮೇಲೆ ಶ್ರೀನಿವಾಸ್, ಶಂಕ್ರ, ಆಟೋ ಬೀರಯ್ಯ ಮತ್ತು ಮಚ್ಚು ಮುನಿಯ ಅಟ್ಯಾಕ್ ಮಾಡಿ ಕೊಚ್ಚಿ ಹಾಕಿದ್ದಾರೆ. ಮಿಕ್ಕೆಲ್ಲರನ್ನೂ ಬಂಧಿಸಿದ ಎಸ್ಸೈ ಪರಮೇಶ್ ಶ್ರೀನಿವಾಸನನ್ನು ಮಾತ್ರ ಬಂಧಿಸಲಿಲ್ಲ. ಬಸವಯ್ಯನ ಹತ್ಯೆಗೆ ಪ್ರತ್ಯಕ್ಷ ಸಾಕ್ಷಿಗಳಾಗಿದ್ದವರು ಚಿತ್ತನಗೆರೆಯ ಲಾಯರ್ ದೇವರಾಜ್, ಪಂಚಾಯ್ತಿ ಸದಸ್ಯ ಕೃಷ್ಣಮೂರ್ತಿ ಮತ್ತು ಹಿಮಾಲಯ ಡ್ರಗ್ಸ್‌ನ ನೌಕರ ರಾಮಯ್ಯ.






ವಕೀಲ ದೇವರಾಜ್

ಹಂತಕ ಶ್ರೀನಿವಾಸನನ್ನು ಬಂಧಿಸುವಂತೆ ಅವರೇ ನಿಂತು ಒತ್ತಡ ತಂದರು. ಹಂತಕರು ತಪ್ಪಿಸಿಕೊಳ್ಳುವುದು ಸಾಧ್ಯವಾಗದಂತೆ ಸಾಕ್ಷಿ ಹೇಳಲು ಮುಂದಾದರು. ಇತ್ತ ತನ್ನ ಬಾಮೈದ ಮತ್ತು ಮಂತ್ರಿ ಚೆನ್ನಿಗಪ್ಪನ ಭಂಟ ಯಡಾಳು ದೇವೇಂದ್ರನ ರಕ್ಷಣೆಯಲ್ಲೇ ಶ್ರೀನಿವಾಸ್ ಓಡಾಡಿಕೊಂಡಿದ್ದ. ಹುಸ್ಕೂರು ಗ್ರಾಮ ಪಂಚಾಯ್ತಿ ಅಧ್ಯಕ್ಷೆಯ ಗಂಡ ಜಾತ್ಯತೀತ ದಳದ ವಡೇರಹಳ್ಳಿ ಜೈರಾಮ ಆತನನ್ನು ತನ್ನ ತೋಟಕ್ಕೆ ಕರೆದೊಯ್ದು ಅಡಗಿಸಿಟ್ಟ. ಅಡಿಷನಲ್ ಎಸ್ಪಿ ಕೃಷ್ಣಪ್ಪ ಮನಸ್ಸು ಮಾಡಿದ್ದರೆ ಶ್ರೀನಿವಾಸ ಯಾವತ್ತೋ ಜೈಲು ಪಾಲಾಗಿರುತ್ತಿದ್ದ. ಮುಂದಿನ ಐದರ ಹತ್ಯಾಕಾಂಡಕ್ಕೆ ಆಸ್ಪದವಿರುತ್ತಿರಲಿಲ್ಲ.



ಬಸವಯ್ಯ



ಶಂಕರ

ತಮ್ಮದೇ ಪಕ್ಷದ, ತನ್ನ ಲ್ಯಾಂಡ್ ಡೀಲುಗಳಿಗೆಲ್ಲ ರೌಡಿ ಪಡೆಯಂತಿರುವ ಶ್ರೀನಿವಾಸ ಜೈಲು ಪಾಲಾದರೆ ಖಾಕಿ ಕೃಷ್ಣಪ್ಪನ ಗತಿಯೇನು?

ಇದೇ ಮೇ ಎಂಟನೇ ತಾರೀಖಿಗೆ ಬಸವಯ್ಯನ ಕೊಲೆ ಕೇಸಿನ ಅಂತಿಮ ವಿಚಾರಣೆಯಿತ್ತು. ಆವತ್ತು ತನ್ನ ವಿರುದ್ಧ ಸಾಕ್ಷಿ ಹೇಳದಂತೆ ಶ್ರೀನಿವಾಸ್ ಲಾಯರ್ ದೇವರಾಜು ಮೇಲೆ ಒತ್ತಡ ಹೇರುತ್ತಲೇ ಇದ್ದ. ಅದೇ ಹೊತ್ತಿಗೆ ಶಂಕ್ರ ಒಬ್ಬನ ಹೊರತಾಗಿ ಬಸವಯ್ಯನ ಕೊಲೆ ಆರೋಪಿಗಳೆಲ್ಲರೂ ಜಾಮೀನು ಗಿಟ್ಟಿಸಿ ಹೊರಬಿದ್ದರು. ಬೆಂಗಳೂರು-ನೆಲಮಂಗಲ ರಸ್ತೆಯಲ್ಲಿ ಮತ್ತೆ ಡಕಾಯಿತಿಗಳಾದವು. ಯಾವತ್ತು ಬಸವಯ್ಯನ ಕೊಲೆ ಕೇಸಿಂದ ಬಚಾವಾಗುವುದು ಅಸಾಧ್ಯ ಎನ್ನಿಸಿತೋ ಸಾಕ್ಷಿಗಳನ್ನು ಮುಗಿಸಲು ಹಂತಕ ಪಡೆ ಸಜ್ಜಾಗಿದೆ. ಮೇ ಐದಕ್ಕೆ ದೊಡ್ಡಬಳ್ಳಾಪುರದ ರಾಮದೇವನಹಳ್ಳಿಯಲ್ಲಿ ಮಾರಿಹಬ್ಬದ ಊಟಕ್ಕೆಂದು ಒಂದೇ ಬೈಕಲ್ಲಿ ಹೋಗಿದ್ದ ಲಾಯರ್ ದೇವರಾಜು, ಪಂಚಾಯ್ತಿ ಸದಸ್ಯ ಕೃಷ್ಣಮೂರ್ತಿ ಮತ್ತು ಕೃಷ್ಣ ಸಂಜೆಯ ನಾಲ್ಕೂವರೆಯ ಹೊತ್ತಿಗೆ ವಾಪಸು ನೆಲಮಂಗಲದ ರಸ್ತೆ ಹಿಡಿದಿದ್ದಾರೆ.

ತಮ್ಮನ್ನು ಹಿಂಬಾಲಿಸಿಕೊಂಡೇ ಬಂದ ಹಂತಕ ಆಟೋ ಬೀರಯ್ಯನನ್ನು ಅವರು ಗಮನಿಸಲೇ ಇಲ್ಲ. ಇನ್ನೇನು ನೆಲಮಂಗಲದ ಗಡಿಯು ಗುಟ್ಟೆಪಾಳ್ಯ ಸಮೀಪಿಸುತ್ತಿದ್ದಂತೆ ಒಂದು ಟಾಟಾ ಸುಮೋ ಬೈಕನ್ನು ಓವರ್‌ಟೇಕ್ ಮಾಡಿಕೊಂಡು ಮುಂದೆ ಹೋಗಿದೆ. ಅದರಲ್ಲಿದ್ದವನು ಶ್ರೀನಿವಾಸ. ಅದೇ ಹೊತ್ತಿಗೆ ಹಿಂಬಾಲಿಸಿ ಬಂದ ಮತ್ತೊಂದು ಟಾಟಾ ಸುಮೋ ಬೈಕಿಗೆ ಗುದ್ದಿದೆ. ನೆಲಕ್ಕೆ ಬಿದ್ದ ಲಾಯರ್ ದೇವರಾಜು ಮತ್ತು ಕೃಷ್ಣಮೂರ್ತಿಯನ್ನು ಮಚ್ಚು ಮುನಿಯ, ಅನಂತು, ಬೀರಯ್ಯ ಮುಂತಾದವರಿದ್ದ ಆರು ಮಂದಿಯ ಗ್ಯಾಂಗ್ ಕತ್ತರಿಸಿ ಹಾಕಿದೆ. ಜೊತೆಗಿದ್ದ ಕೃಷ್ಣ ಓಡಿ ಪರಾರಿಯಾಗಿದ್ದಾನೆ.

ಕೊಲೆ ನಡೆದ ಹಿಂದಿನ ದಿನವೇ ನೆಲಮಂಗಲದ ಸಬ್ ಇನ್ಸ್‌ಪೆಕ್ಟರ್ ಪರಮೇಶ್ ಎತ್ತಂಗಡಿಯಾಗಿರುತ್ತಾರೆ. ಹಂತಕರಿಗೆ ಪೋಲೀಸರೇ ದಾರಿ ಸಲೀಸು ಮಾಡಿಕೊಡುತ್ತಾರೆ. ಏಕೆಂದರೆ ಅಡಿಷನಲ್ ಎಸ್ಪಿ ಕೃಷ್ಣಪ್ಪನವರ ಛೇಂಬರ್ ಎಂದರೆ ಅದು ಜೆಡಿಎಸ್ ಕಚೇರಿಯೂ ಹೌದು ರಿಯಲ್ ಎಸ್ಟೇಟ್ ಏಜೆನ್ಸಿಯೂ ಹೌದು ಒಂದು ಕೊಲೆಯಿಂದ ಬಚಾವಾಗುವುದಕ್ಕಾಗಿ ಮತ್ತೆರಡು ಕೊಲೆ ಮಾಡುವಷ್ಟು ಸ್ವಾತಂತ್ರ್ಯವನ್ನು ನೆಲಮಂಗಲದ ಹಂತಕರಿಗೆ ಪೋಲೀಸರೇ ಕಲ್ಪಿಸುತ್ತಾರೆಂದರೆ ಅಲ್ಲಿ ಯಾರಿಗೆ ತಾನೇ ರಕ್ಷಣೆ ಯಿದ್ದೀತು? ಕುಮಾರಸ್ವಾಮಿಯ ಮುಖ್ಯಮಂತ್ರಿಗಿರಿಯ ಬೆಂಕಿ ಬೀಳ....!

-ರಾ.ಸೋ.


ಅಡಿಷನಲ್ ಎಸ್ಪಿ ಕೃಷ್ಣಪ್ಪನ ಖಮಾಯಿ



ಕೃಷ್ಣಪ್ಪ ಅಡಿಷನಲ್ ಎಸ್ಪಿಯಾಗಿ ಕಾಲಿಟ್ಟ ಮೇಲೆ ಬೆಂಗಳೂರು ಸುತ್ತಮುತ್ತ ನಡೆದ ಲ್ಯಾಂಡ್ ಸಂಬಂಧಿ ಕೊಲೆಗಳ ಸಂಖ್ಯೆ ಮೂವತ್ತನ್ನು ದಾಟಿದೆ. ನೆಲಮಂಗಲದ ಡಿವೈಎಸ್‌ಪಿ ಜಗನ್ನಾಥ್ ರೈ ಮತ್ತು ಡಿವೈಎಸ್‌ಪಿ ಶಿವಶಂಕರಪ್ಪ ಇಬ್ಬರೂ ಕೃಷ್ಣಪ್ಪನ ಶಿಷ್ಯಂದಿರು... ತದ್ರೂಪಿಗಳೆ. ಈಗ ನಡೆದದ್ದೂ ಸೇರಿ ದಾಸನಪುರ ಹೋಬಳಿಯೊಂದರಲ್ಲೇ ನಾಲ್ಕು ಕೊಲೆಗಳಾದಂತಾಗಿದೆ.

ಈಗ ಜನ ರೊಚ್ಚಿಗೆದ್ದು ಹಂತಕ ಶ್ರೀನಿವಾಸನ ಮನೆಗೆ ಬೆಂಕಿ ಹಚ್ಚಿದರೆ ಬಲಿಯಾದದ್ದು ಮಾತ್ರ ಎರಡು ಮೂಕ ಹಸುಗಳು. ಕೊಲೆಗೆ ಮೊದಲೇ ಶ್ರೀನಿವಾಸನ ಮನೆ ಕಾವಲಿಗೆ ಪೋಲೀಸರಿದ್ದರು. ಅಡಿಷನಲ್ ಎಸ್ಪಿ ಕೃಷ್ಣಪ್ಪನ ಕಾಲುಗುಣವೋ ಏನೋ, ಇವತ್ತು ಇಡೀ ದೇವನಹಳ್ಳಿ ಪೋಲೀಸ್ ಠಾಣೆ ರಿಯಲ್ ಎಸ್ಟೇಟ್ ಅಡ್ಡೆಯಾಗಿದೆ. ಕಲಘಟ್ಟಪುರ, ತಾವರೆಕೆರೆ, ಚಿಕ್ಕಜಾಲ ಮುಂತಾದ ಬೆಂಗಳೂರಿಗೆ ಹೊಂದಿಕೊಂಡಂತಿರುವ ಏರಿಯಾಗಳ ಬಡರೈತರು ತಮ್ಮ ಜಮೀನಿಗೆ ರಕ್ಷಣೆ ಕೋರಿ ಅರ್ಜಿ ತಂದರೆ; ಸುಮ್ನೆ ಯಾಕಯ್ಯಾ ತರ್ಲೆ? ನಾನು ಪಾರ್ಟಿ ತೋರಿಸ್ತೀನಿ ಅವನಿಗೆ ಜಮೀನು ಮಾರಿಬಿಡು ಅನ್ನುತ್ತಾನೆ ಕೃಷ್ಣಪ್ಪ!

ನೆಲಮಂಗಲದ ಸರ್ವೆ ನಂಬರ್ 202 ರಲ್ಲಿ ಹನ್ನೆರಡು ಗುಂಟೆ ಸರ್ಕಾರಿ ಜಮೀನನ್ನು ಮಗಳು ಕೀರ್ತಿರಾಜ್ ಹೆಸರಲ್ಲಿ ಕಬಳಿಸಿದ್ದು, ಆಕೆ ನಿರುದ್ಯೋಗಿ ಎಂದು ಪೆಟ್ರೋಲ್ ಬಂಕ್ ಮಂಜೂರು ಮಾಡಿಸಿಕೊಂಡದ್ದು, ನೆಲಮಂಗಲದ ರಾಷ್ಟ್ರೀಯ ಹೆದ್ದಾರಿ ನಾಲ್ಕರ ಶುಭಾ ಡಾಬಾ ಪಕ್ಕದ ಪರ್ವತಯ್ಯ ಲೇಔಟನಲ್ಲಿ ಎಪ್ಪತ್ತು ಲಕ್ಷ ತೆತ್ತು ಎಕರೆ ಜಮೀನು ಖರೀದಿಸಿದ್ದು, ಅದೇ ನೆಲಮಂಗಲದ ಇಂದಿರಾನಗರದಲ್ಲಿ ನಾಲ್ಕು ಸೈಟು, ಬೆಂಗಳೂರಿನ ಬಸವೇಶ್ವರನಗರದಲ್ಲಿ ಒಂದು ಬಂಗಲೆ, ಮತ್ತೊಂದು ಕಾಂಪ್ಲೆಕ್ಸ್ ಇವಿಷ್ಟೂ ಅಡಿಷನಲ್ ಎಸ್ಪಿ ಕೃಷ್ಣಪ್ಪ ಸಾಹೇಬರ ಕಳೆದ ಎರಡು ವರ್ಷದ ಖಮಾಯಿಯೆಂದರೆ ಇನ್ನೂ ಬೆಳಕಿಗೆ ಬಾರದ್ದು ಇನ್ನೆಷ್ಟಿರಬೇಡ?



ಯಡಾಳು ದೇವಿ

ದ್ವೇಷವು ಎಲ್ಲ ಯುದ್ಧಕ್ಕೆ ಮೂಲ, ಅದಿಲ್ಲದೆ ಎಲ್ಲ ಎಂದಿಗೂ [illegible] -ಅನಾಮಿಕ

ಕ್ಷೇತ್ರ ಪುನರ್‌ವಿಂಗಡಣೆ ಎಂಬ ಶಾಕ್ ಟ್ರೀಟ್‌ಮೆಂಟ್

ಚಿತ್ರದುರ್ಗ

ಕ್ಷೇತ್ರ ಪುನರ್‌ವಿಂಗಡಣೆಯು ಭೂತ ಜಿಲ್ಲೆಯ ...ಕಾರಸ್ಥ ರಾಜಕಾರಣಿಗಳನ್ನು ಹಾಗೂ ಭವಿಷ್ಯದ ...ಕೀಯ ಕನಸುಗಳನ್ನು ಹೊತ್ತ ಯುವ ರಾಜಕೀಯ ...ಯಕರುಗಳನ್ನು ತೀವ್ರತರನಾದ ರಾಜಕೀಯ ತಳಮಳಕ್ಕೆ ...ದೆ. ಚಿತ್ರದುರ್ಗ ಜಿಲ್ಲೆಯ ಹಾಲಿ ಏಳು ವಿಧಾನಸಭಾ ...ಗಳ ಪೈಕಿ ಹಿರಿಯೂರು ಮತ್ತು ಭರಮಸಾಗರ ...ಸಲು ಕ್ಷೇತ್ರಗಳಾಗಿದ್ದು ಉಳಿದಂತೆ ಚಿತ್ರದುರ್ಗ, ...ಕೆರೆ, ಹೊಸದುರ್ಗ, ಹೊಳಲ್ಕೆರೆ, ಮೊಳಕಾಲ್ಮೂರು ...ಮಾನ್ಯ ಕ್ಷೇತ್ರಗಳಾಗಿವೆ. ಪ್ರಸ್ತುತ ಪುನರ್‌ವಿಂಗಡಣೆಯ ...ಸ್ತಾವನೆಯ ಪ್ರಕಾರ ಆರು ವಿಧಾನಸಭಾ ಕ್ಷೇತ್ರಗಳು ...ಾತ್ರ ಉಳಿಯಲಿದ್ದು ದಾವಣಗೆರೆ ಲೋಕಸಭಾ ...ವ್ಯಾಪ್ತಿಯ ಭರಮಸಾಗರ ಮೀಸಲು ವಿಧಾನಸಭಾ ...ತ್ರ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಲಿದೆ. ಜಿಲ್ಲೆಯಲ್ಲಿ ...ಳಿಯಲಿರುವ ಆರು ವಿಧಾನಸಭಾ ಕ್ಷೇತ್ರಗಳಲ್ಲಿ ...ತ್ರದುರ್ಗ, ಹೊಸದುರ್ಗ, ಹಿರಿಯೂರು ಸಾಮಾನ್ಯ ...ತ್ರಗಳಾಗಲಿವೆ. ಚಳ್ಳಕೆರೆ, ಮೊಳಕಾಲ್ಮೂರು ಪರಿಶಿಷ್ಟ ...ಗಡಕ್ಕೆ, ಹೊಳಲ್ಕೆರೆ ಪರಿಶಿಷ್ಟ ಜಾತಿಗೆ ಮೀಸಲಾಗಲಿವೆ.

ಹಿನ್ನೆಲೆಯಲ್ಲಿ ಬದಲಾಗಲಿರುವ ರಾಜಕೀಯ ಚಿತ್ರಣ ...ವರಿಗೆ ಬೇವನ್ನೂ ಕೆಲವರಿಗೆ ಬೆಲ್ಲವನ್ನೂ ತಂದು ...ಡಲಿದೆ. ಅಧಿಕಾರಸ್ಥರಿಗೆ, ಪಟ್ಟಭದ್ರರಿಗೆ ತಮ್ಮ ...ಜಕೀಯ ನೆಲೆ-ಹಿಡಿತಗಳನ್ನು ಉಳಿಸಿಕೊಳ್ಳುವುದು ...ಾಲಿನ ಕೆಲಸವಾಗಿದೆ.


ಭರಮಸಾಗರ

ಭರಮಸಾಗರ ಕ್ಷೇತ್ರವು ಹೆಸರಿಗೆ ಮೀಸಲು ...ತ್ರವಾಗಿದ್ದರೂ ಅಲ್ಲಿನ ರಾಜಕೀಯವನ್ನು ಅಕ್ಷರಶಃ ...ಯಂತ್ರಿಸಿದವರು ಭೀಮಸಮುದ್ರದ ಅಡಿಕೆ ಧಣಿಗಳು ...ಗೂ ಸಿರಿಗೆರೆ ಮಠ. ಈ ಕ್ಷೇತ್ರವನ್ನು ಪ್ರತಿನಿಧಿಸಿದ ...ಾಜಿ ಸಚಿವ ಶಿವಮೂರ್ತಿನಾಯ್ಕ, ಮಾಜಿ ಶಾಸಕ ...ಚಂದ್ರಪ್ಪ, ಹಾಲಿ ಶಾಸಕ ಎಚ್. ...ಜನೇಯ ತಂತಮ್ಮ ಸ್ವಹಿತಾಸಕ್ತಿಗಳ್ನ ...ದ್ಯತೆಯನ್ನಾಗಿಸಿಕೊಂಡರೆ ವಿನಃ ಜನತೆಯ ...ತಾಸಕ್ತಿಗಳನ್ನಲ್ಲ. ಎಲ್ಲರೂ ಒಂದಲ್ಲ ...ದು ರೀತಿಯಲ್ಲಿ ಲಿಂಗಾಯಿತರ ಓಲೈಕೆ ...ಜಕಾರಣ ಮಾಡಿದವರೇ. ಇಲ್ಲಿ ...ನಾವಣೆಗೆ ನಿಲ್ಲುವವರಿಗೆ ಫಂಡಿಂಗ್ ...ೋರ್ಸ್ ಭೀಮಸಮುದ್ರ ಅಡಿಕೆ ...ಣಿಗಳಾದ ಬಿ.ಟಿ. ಚನ್ನಬಸಪ್ಪ, ಜಿ.ಎಂ. ...ದ್ದೇಶ್, ಜಿ.ಎಸ್. ಮಂಜುನಾಥ್‌ರವರು ...ೇ ಆಗಿದ್ದರಿಂದ 'ಅಧಿಕಾರ ಕೇಂದ್ರ'ವೂ ...ವರೇ ಆಗಿದ್ದರು. ಇಲ್ಲಿ ಚುನಾಯಿತ ...ತಿನಿಧಿಗಳೆಂಬುವರು ಈ ಅಧಿಕಾರ ...ಂದ್ರದ ಆಜ್ಞಾನುಧಾರಕರಾಗಿ, ರಬ್ಬರ್ ಸ್ಟ್ಯಾಂಪುಗಳಾಗಿ ...ಲಾಯಿಸಲ್ಪಟ್ಟರು.

ಎರಡು ಬಾರಿ ಶಾಸಕನಾಗುತ್ತಿದ್ದಂತೆ ಕೊಂಚ ನಶೆ ...ರಿಸಿಕೊಂಡು ಹೂಂಕರಿಸಿದ ಮಾಜಿ ಶಾಸಕ ಜಿ. ...ಂದ್ರಪ್ಪನನ್ನು ಗಟಾರಕ್ಕೆ ತಳ್ಳಿದ್ದು ಇದೇ ಅಧಿಕಾರ ...ಂದ್ರ. ಈ ಅಧಿಕಾರ ಕೇಂದ್ರವನ್ನು ಓಲೈಸಿ ರಾಜಕೀಯ ...ಭ ಪಡೆದದ್ದು ಶಾಸಕ ಎಚ್. ಆಂಜನೇಯ. ...ಣಬಲವನ್ನೇ ನೆಚ್ಚಿಕೊಂಡು ಅದೃಷ್ಟ ಪರೀಕ್ಷೆಗಿಳಿದಿದ್ದ ...ಚ್.ಆನಂದಪ್ಪ ಎಂಬ ಕ್ರಷರ್ ಉದ್ಯಮಿಯು ಕೋಟಿ ...ಯನ್ನು ಕರಗಿಸಿಕೊಂಡು ಮನೆಗೆ ಹೋಗಬೇಕಾಯಿತು. ...ರಮಸಾಗರ ಕ್ಷೇತ್ರ ರದ್ದಾಗುವುದರೊಂದಿಗೆ ಇವರೆಲ್ಲಾ ...ತ್ರಸ್ತರಾಗಲಿದ್ದು ಪುನರ್‌ವಸತಿಗಾಗಿ ಪರದಾಡಬೇಕಿದೆ. ...ಗ ಇವರೆಲ್ಲರ ಕಣ್ಣು ಹೊಳಲ್ಕೆರೆ ಕ್ಷೇತ್ರದ ಮೇಲಿದೆ. ...ಸ್ಯದ ಪರಿಸ್ಥಿತಿಯಲ್ಲಿ ಹೊಳಲ್ಕೆರೆಯಲ್ಲಿ ವಿಧಾನಸಭಾ ...ನಾವಣೆಯನ್ನೆದುರಿಸುವಷ್ಟು ಪ್ರಬಲರಿಲ್ಲದಿರುವುದು ...ವರ ಪ್ರವೇಶಕ್ಕೆ ದಾರಿ ಮಾಡಲಿದೆ.

ಹೊಳಲ್ಕರೆ


ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಗೆ ಮೀಸಲಾಗಲಿರುವ ...ಕೈಕ ಕ್ಷೇತ್ರ ಇದಾಗಲಿರುವುದರಿಂದ ಸಹಜವಾಗಿಯೇ ...ರಿ-ಕಿರಿ ರಾಜಕಾರಣಿಗಳೆಲ್ಲಾ ತಮ್ಮ ನೆಲೆ ಕಂಡು ...ಳ್ಳಲು ಇತ್ತ ಧಾವಿಸಲಿದ್ದಾರೆ. ಸಾಮಾನ್ಯ ಕ್ಷೇತ್ರವಾಗಿದ್ದ ...ಲ್ಲಿ ಲಿಂಗಾಯಿತ v/s ಹಿಂದುಳಿದ ವರ್ಗಗಳು ಎಂಬ ...ಧ್ರುವೀಕರಣವೇ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿತ್ತು, ನಿರಂಕುಶ ಧೋರಣೆಯಿಂದಲೇ ಅಧಿಕಾರ ನಿರ್ವಹಿಸಿದ ಶಾಸಕ ಎ.ವಿ.ಉಮಾಪತಿ ಮತ್ತೆ ಮತ್ತೆ ಅಧಿಕಾರಕ್ಕೆ ಬರಲು ಹಿಂದುಳಿದ ವರ್ಗಗಳಲ್ಲಿ ಬಡಿದೆಬ್ಬಿಸಿದ ಲಿಂಗಾಯಿತ ವಿರೋಧಿ ಭಾವನೆಗಳೇ ಬಂಡವಾಳವಾಗಿದ್ದುವು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್‌ನಿಂದ



ಎಸ್. ಮಂಜುನಾಥ್

[illegible] ಜಿ.ಎಸ್. ಮಂಜುನಾಥ್‌ರ ಅಡಿಕೆ ಕೊಳ್ಳ ...ಗಳ ಲೆಕ್ಕದಲ್ಲಿ ಕ್ಷೇತ್ರದಾದ್ಯಂತ ಹರಿಸಿದರೂ ಜಯ [illegible] ಗೆಲುವನ್ನು ಕಂಡುಕೊಂಡಿಲ್ಲ, ಅತ್ತ ...ರಾಜಕೀಯ ಫಲ ನೀಡಿ, ಇತ್ತ ನೀರ [illegible]

ರಾಜಕೀಯವನ್ನು ದಕ್ಕಿಸಿಕೊಳ್ಳದೇ ರಾಜಕೀಯ ಅತಂತ್ರದಲ್ಲಿರುವ ಜಿ.ಎಸ್. ಮಂಜುನಾಥ್ ದುರಂತ ರಾಜಕಾರಣಿ. ಕ್ಷೇತ್ರ ಕೈ ತಪ್ಪುತ್ತಿರುವುದು ಮಂತ್ರಿಯಾಗುವಷ್ಟು ಸೀನಿಯಾರಿಟಿ ಇರುವ ಉಮಾಪತಿಗೂ ರಾಂಗ್ ಸಿಂಗ್ನಲ್ಲೇ. ಹಾಗಾಗಿ ಉಮಾಪತಿ ಸಾಮಾನ್ಯ ಕ್ಷೇತ್ರವಾಗಲಿರುವ ಹಿರಿಯೂರಿನತ್ತ ಮುಖ ಮಾಡಲಿದ್ದಾರೆ.



ಉಮಾಪತಿ

ಹಿರಿಯೂರು

ಕೆ.ಎಚ್. ರಂಗನಾಥ್ ಹಾಗೂ ಡಿ. ಮಂಜುನಾಥ್ ಎಂಬಿಬ್ಬರು ಹಿರಿಯ ರಾಜಕಾರಣಿಗಳೇ ನಿರಂತರವಾಗಿ ಪ್ರತಿನಿಧಿಸುತ್ತಿದ್ದ ಈ ಕ್ಷೇತ್ರ ಪ್ರತಿಬಾರಿಯೂ ರಾಜ್ಯದ ಗಮನ ಸೆಳೆಯುತ್ತಿತ್ತು, ಪರಿಶಿಷ್ಟ ಜಾತಿಯ ಮತದಾರರು ಹೆಚ್ಚಾಗಿದ್ದರೂ ಇಲ್ಲಿ ಗೊಲ್ಲರು ಮತ್ತು ಒಕ್ಕಲಿಗರೇ ಅಭ್ಯರ್ಥಿಗಳ ಸೋಲು-ಗೆಲುವುಗಳಲ್ಲಿ ನಿರ್ಣಾಯಾತ್ಮಕ ಪಾತ್ರ ವಹಿಸುತ್ತಿದ್ದರು. ಕೆ.ಎಚ್. ರಂಗನಾಥ್ ರಾಜಕೀಯ ನಿವೃತ್ತಿ ಘೋಷಿಸಿದ ನಂತರ ಕಳೆದ ಬಾರಿ ಡಿ. ಮಂಜುನಾಥ್‌ರ ಪ್ರತಿಸ್ಪರ್ಧಿಯಾಗಿ ಕಣಕ್ಕಿಳಿದದ್ದು ರಾಜ್ಯ ಪೌರ ಸೇವಾ ನೌಕರರ ಸಂಘದ ರಾಜ್ಯಾಧ್ಯಕ್ಷ ಜಿ.ಎಸ್. ಮಂಜುನಾಥ್. ಈತನ ಅಬ್ಬರ ಚುನಾವಣೆಯ ವರಸೆಯೇ ಮುಳುವಾಗಿ ಸೋಲನುಭವಿಸಬೇಕಾಯಿತು. ಜೊತೆಗೊಂದಷ್ಟು ಕೋಟಿಗಳೂ ಕರಗಿದವು. ಆದರೂ ಕ್ಷೇತ್ರದಲ್ಲಿ ಸಂಕರ್ಪ ವಿಟ್ಟುಕೊಂಡೇ ಸಕ್ರಿಯವಾಗಿದ್ದರು. ಈ ನಡುವೆ ಮಾಜಿ ಸಚಿವ ಕೆ.ಎಚ್. ರಂಗನಾಥರ ಪುತ್ರ ಭಾಸ್ಕರ್ ಫೀಲ್ಡಿಗಿಳಿದು ಮಂಜುನಾಥ್ ಹಾದಿ ಸುಗಮವಲ್ಲ ಎಂಬ ಸಿಗ್ನಲ್ ಕೊಟ್ಟರು. ಭಾಸ್ಕರ್ ಕೆಪಿಸಿಸಿ ಸದಸ್ಯ ಕೂಡಾ ಆಗಿದ್ದು ಮುಂದಿನ ಚುನಾವಣೆಯಲ್ಲಿ ಅಖಾಡಕ್ಕಿಳಿಯುವ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಇದರ ಪರಿಣಾಮ ಹಿರಿಯೂರಿನಲ್ಲಿ ಜಿ.ಎಸ್. ಮಂಜುನಾಥ್, ಭಾಸ್ಕರ್ ಬೆಂಗಲಿಗರೆಂಬ ಹೆಸರಲ್ಲಿ ಕಾಂಗ್ರೆಸ್ ಇಬ್ಭಾಗವಾಗಿ ಪರಸ್ಪರ ಆರೋಪ, ಕಾಲೆಳೆಯುವ ಪ್ರವೃತ್ತಿಗಳು ಮೇಲುಗೈ ಪಡೆದವು. ಮೊನ್ನೆ ನಡೆದ ಜಿಪಂ-ತಾಪಂ ಚುನಾವಣೆಗಳಲ್ಲಿದು ತಾರಕಕ್ಕೆ ಹೋಗಿತ್ತು, ಇದೀಗ ಹಿರಿಯೂರು ಸಾಮಾನ್ಯ ಕ್ಷೇತ್ರವಾಗುವುದರೊಂದಿಗೆ ಚುನಾವಣಾ ಅಖಾಡವು ಕ್ಷೇತ್ರದಲ್ಲಿ ಪ್ರಬಲವಾಗಿರುವ ಗೊಲ್ಲರು ಮತ್ತು ಒಕ್ಕಲಿಗರ ಜಿದ್ದಾಜಿದ್ದಿಗೆ ಮುಕ್ತವಾಗಿದೆ..



ಡಿ. ಮಂಜುನಾಥ್


ಮೇ.ನಾ. ಅಹೋಬಳಪತಿ

ಜಾತ್ಯತೀತ ಜನತಾದಳದ ಜಿಲ್ಲಾಧ್ಯಕ್ಷ ಡಿ.ಯಶೋಧರಾ, ಜಿಲ್ಲಾಕಾಂಗ್ರೆಸ ಅಧ್ಯಕ್ಷ ಆರ್. ಮಂಜುನಾಥ್ ಈಗಾಗಲೇ ಚುನಾವಣೆಯ ಉಮೇದಿಯಲ್ಲಿ ಸಂಭ್ರಮಿಸುತ್ತಿದ್ದಾರೆ. ಆದರೆ ಕಳೆದ ಚುನಾವಣೆಯಲ್ಲಿ ಪರಾಭವಗೊಂಡಿದ್ದ ಪೌರಸೇವಾ ನೌಕರರ ಸಂಘದ ಅಧ್ಯಕ್ಷ ಜಿ.ಎಸ್. ಮಂಜುನಾಥ್ 'ಸಾಮಾನ್ಯ ಕ್ಷೇತವಾದರೂ ಹಿರಿಯೂರಿನಲ್ಲೇ ಸ್ಪರ್ಧಿಸುತ್ತೇನೆ; ಕ್ಷೇತ್ರದಲ್ಲಿ ಒಕ್ಕಲಿಗರು, ಗೊಲ್ಲರಷ್ಟೇ ಸಂಖ್ಯೆಯಲ್ಲಿ ದಲಿತ ಮತದಾರರೂ ಇದ್ದಾರೆ. ಸಣ್ಣ ಪ್ರಮಾಣದಲ್ಲಿ ಮೇಲ್ಜಾತಿ ಮತಗಳ ಬೆಂಬಲ ಪಡೆದರೂ ಆರಾಮಾಗಿ ಗೆಲ್ಲುತ್ತೇನೆ'ಂಬ ಲೆಕ್ಕಾಚಾರ ಹರಿಯಬಿಟ್ಟಿದ್ದಾರೆ. ಈ ನಡುವೆ ಕ್ಷೇತ್ರ ಕಳೆದುಕೊಂಡು ಸಂತ್ರಸ್ತರಾಗಲಿರುವ ಶಾಸಕ ಎ.ವಿ. ಉಮಾಪತಿ ಕ್ಷೇತ್ರದಲ್ಲಿ ಗೊಲ್ಲರ ಹಾಟಬಲ್ಯವನ್ನೇ ಮುಂದು ಮಾಡಿ ಹಿರಿಯೂರಿನಿಂದ ಸ್ಪರ್ಧೆಗಿಳಿಯುವ ಚಿಂತನೆ ನಡೆಸಿದ್ದು, ಜಿ.ಎಸ್. ಮಂಜುನಾಥ್‌ರನ್ನು ಹೊಳಲ್ಕರೆಯಿಂದ ಸ್ಪರ್ಧಿಸುವಂತೆ ಸಲಹೆ ನೀಡಿದ್ದಾರೆನ್ನಲಾಗಿದೆ ಆದರೆ ಡಿಸಿಸಿ ಅಧ್ಯಕ್ಷ, ಆರ್. ಮಂಜುನಾಥರನ್ನು ಗೌಣವಾಗಿಸುವ ಈ ಲೆಕ್ಕಾಚಾರಗಳು ಅಷ್ಟು ಸುಲಭವಾಗಿ ...

ಫಲ ನೀಡಲಾರವು. ಮಾಜಿ ಸಂಸದ ಕೋದಂಡ ರಾಮಯ್ಯ ಕೂಡಾ ಕ್ಷೇತ್ರದಲ್ಲಿ ನಿರ್ಣಾಯಕರಾಗಿರುವ ಗೊಲ್ಲರು ಮತ್ತು ಇತರ ಹಿಂದುಳಿದ ಜಾತಿಗಳ ಓಟಿನ ತಳಹದಿಯನ್ನೇ ನಂಬಿಕೊಂಡು ಅಖಾಡಕ್ಕಿಳಿಯಲಿದ್ದಾರೆ. ಇಂತಹ ಕಾರಣಗಳಿಗಾಗಿಯೇ ಹಿರಿಯೂರು ಮುಂದಿನ ದಿನಗಳಲ್ಲಿ ವಿಶೇಷವಾಗಿ ಗಮನ ಸೆಳೆಯಲಿದೆ.

ಚಳ್ಳಕೆರೆ

ಉಮೇದುವಾರರ ಉದ್ದಾನುದ್ದ ಪಟ್ಟಿಯ ಕಾರಣದಿಂದಾಗಿಯೇ ಗಮನ ಸೆಳೆಯುತ್ತಿದ್ದ ಚಳ್ಳಕೆರೆ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಲಿದೆ. ಇದರಿಂದಾಗಿ ಸುಧಾಕರ್ ಎಂಬ ಬಿರುಗಾಳಿಗೆ ತತ್ತರಿಸಿ ಮನೆ ಸೇರಿಕೊಂಡಿದ್ದ ಮಾಜಿ ಸಚಿವ ತಿಪ್ಪೇಸ್ವಾಮಿ ಗರಿಗರಿ ಬಿಳಿಬಟ್ಟೆ ತೊಟ್ಟು ಸಂಭ್ರಮಿಸುತ್ತಿದ್ದಾರೆ. ತಿಪ್ಪೇಸ್ವಾಮಿಗಿದು ನಿಜಾರ್ಥದಲ್ಲಿ ಜಾಕ್‌ಪಾಟ್. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಲಿಕ್ಕರ್ ಕುಳ ಸುಧಾಕರ್ ಕೋಟಿಗಟ್ಟಲೆ ಸುರಿದು ಕ್ಷೇತ್ರವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿದ್ದರು. ಟಿ.ಕೆ. ಲಕ್ಷ್ಮೀಕಾಂತ್ ಎಂಬ ಮಾಜಿ ವೈಟ್ ಕಾಲರ್ ನೌಕರನೂ ಹೀಗೆ ಹಣ ಸುರಿದು ಬರಕತ್ತಾಗದೇ ಮನೆ ಸೇರಿಕೊಂಡ. ಈ ಲಕ್ಷ್ಮೀಕಾಂತ್ ಮೊನ್ನಿನ ಜಿಪಂ ಚುನಾವಣೆಯಲ್ಲಿ ಪರಶುರಾಂಪುರ ಕ್ಷೇತ್ರದಿಂದ ಸ್ಪರ್ಧೆಗಿಳಿದಾಗ, ಸುಧಾಕರ್ ಗ್ರಾಮ ಪಂಚಾಯ್ತಿ ಸದಸ್ಯರೊಬ್ಬರನ್ನು ಕಣಕ್ಕಿಳಿಸಿ ಈತನ ವಿರುದ್ಧ ಗೆಲ್ಲುವಂತೆ ನೋಡಿಕೊಂಡರು. ಹೇಗಾದರೂ ಕ್ಷೇತ್ರದಲ್ಲಿ ನೆಲೆ ಕಂಡುಕೊಳ್ಳಬೇಕೆಂಬ ಲಕ್ಷ್ಮೀಕಾಂತ್ ಪ್ರಯತ್ನ ಕೈಗೂಡಲಿಲ್ಲ. ಈಗ ಚಳ್ಳಕೆರೆ ಪರಿಶಿಷ್ಟ ಪಂಗಡಕ್ಕೆ ಮೀಸಲಾಗುವುದರೊಂದಿಗೆ ಲಕ್ಷ್ಮೀಕಾಂತ್ ಅನಿವಾರ್ಯವಾಗಿ ಹಿರಿಯೂರಿನತ್ತ ವಲಸೆ ಹೋಗಬೇಕು. ಇಲ್ಲವಾದಲ್ಲಿ ಜಿಲ್ಲಾ ಪಂಚಾಯ್ತಿ ರಾಜಕೀಯಕ್ಕೆ ಸೀಮಿತವಾಗಬೇಕು.




ತಿಪ್ಪೇಸ್ವಾಮಿ

ನಿಜವಾದ ನಷ್ಟ ಅನುಭವಿಸಬೇಕಿರುವುದು ಶಾಸಕ ಸುಧಾಕರ್. ಕ್ಷೇತ್ರದ ಮೇಲಿನ ಹಿಡಿತ ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದಲೂ ಮೊನ್ನಿನ ಜಿಪಂ-ತಾಪಂ ಚುನಾವಣೆಗಳನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡು ಸ್ವಂತ ಹಣ ಸುರಿದು ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡಿದ್ದರು. ಅದಕ್ಕೂ ಮೊದಲು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಜಿಲ್ಲಾ ಕಾಂಗ್ರೆ ಸಮಾವೇಶ ಸಂಘಟಿಸಿದ್ದರು. ಒಂದಷ್ಟು ಅಭಿವೃದ್ಧಿಪರ ಕೆಲಸಗಳಿಗೂ ಆದ್ಯತೆ ನೀಡಿದ್ದರು. ಈಗದೆಲ್ಲಾ ವ್ಯರ್ಥವಾದಂತಾಗಿದೆ. ಆದರೆ ಸುಧಾಕರ್ ಬೆಂಬಲಿಗರ ಪ್ರಕಾರ ಸುಧಾಕರ್ ಕ್ಷೇತ್ರದಲ್ಲಿರುವ ತಮ್ಮ ಬೆಂಬಲಿಗರ ಕಾರಣಕ್ಕೆ ಸಕ್ರಿಯವಾಗಿರುತ್ತಾರೆ. ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಬಲ್ಲಂತವರೊಬ್ಬರನ್ನು ಗೆಲ್ಲಿಸಿಕೊಳ್ಳುವುದೇನೂ ಕಷ್ಟವಾಗಲಾರದು ಎಂಬ ಲೆಕ್ಕಾಚಾರದಲ್ಲಿದ್ದಾರೆ. ಚಳ್ಳಕೆರೆಯಲ್ಲಿ ತಮ್ಮ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳುವುದು ಕಷ್ಟ ಎಂಬ ಆತಂಕದಿಂದ ಮೊಳಕಾಲ್ಮೂರು ಕ್ಷೇತ್ರದತ್ತ ಮುಖಮಾಡಿದ್ದ ಮಾಜಿ ಸಚಿವ ತಿಪ್ಪೇಸ್ವಾಮಿ ಈಗ ನಿರಾತಂಕವಾಗಿದ್ದಾರೆ.

ಮೊಳಕಾಲ್ಮೂರು

ಮೊಳಕಾಲ್ಮೂರು ಸಾಮಾನ್ಯ ಕ್ಷೇತ್ರವಾಗಿದ್ದರೂ ಅಲ್ಲಿ ನಿರಂತರವಾಗಿ ಪರಿಶಿಷ್ಟ ಪಂಗಡದವರೇ ಚುನಾಯಿತರಾಗುತ್ತಿದ್ದರು. ಹಾಗಾಗಿ ಮೊಳಕಾಲ್ಮೂರು ಅಘೋಷಿತವಾಗಿ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿತ್ತು. ಈಗದು ಅಧಿಕೃತವಾಗಿ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಲಿದೆ. ಇದರೊಂದಿಗೆ ಕ್ಷೇತ್ರದ ಮೇಲಿನ ಎಸ್.ವೈ. ಫ್ಯಾಮಿಲಿಯ ಫ್ಯೂಡಲ್ ಹಿಡಿತ ಅಬಾಧಿತವಾಗಿ [illegible]



ಗೋಪಾಲಕೃಷ್ಣ

ಮುಲ್ಲರ ಜನತಾ ಪಕ್ಷದ ಬಿ. ನಾಗಿರೆಡ್ಡಿಗೆ. ಈತ ಕಳೆದ ವಿಧಾನಸಭಾ ಚುನಾವಣೆಯಲ್ಲಿ ತೀವ್ರ ಪ್ರತಿಸ್ಪರ್ಧಿ ಹಿರಿ ಶಾಸಕ ಎಸ್.ವೈ. ಗೋಪಾಲ ಕೃಷ್ಣರಿಗೆ ಸಂಗಾಲಾಗಿ ಸಿದ್ದರು. ಮೊನ್ನೆ ನಡೆದ ಜಿ.ಪಂ-ತಾ.ಪಂ ಚುನಾವಣೆಗಳಲ್ಲೂ ಮೂರು ಜಿ.ಪಂ. ಗಳಲ್ಲಿ ಎರಡು ಜಿ.ಪಂಗಳನ್ನು ಕಾಂಗ್ರೆಸನ್ನೇ ಸಮಬಲದ ತಾ.ಪಂಗಳನ್ನು ಗೆಲ್ಲಿಸಿಕೊಂಡು ಭವಿಷ್ಯದ ದಿನಗಳು ತಮ್ಮ ಪಾಲಿನವೇ ಎಂಬ ಸಂದೇಶ ರವಾನಿಸಿದ್ದರು. ಆದರೀಗ ನಾಗಿರೆಡ್ಡಿಯ ಪ್ರಯತ್ನಗಳೆಲ್ಲಾ ಹೊಳೆಯಲ್ಲಿ ಹುಣಸೆಹಣ್ಣು ಹಿಂಡಿದಂತಾಗಿದೆ. ಎಸ್.ವೈ. ಗೋಪಾಲಕೃಷ್ಣ ಪಾಲಿಗೆ ಕ್ಷೇತ್ರ ಪುನರ್ ವಿಂಗಡಣೆಯೆಂಬುದು ವರದಾನವಾಗಿದೆ.


ಹೊಸದುರ್ಗ

ಹೊಸದುರ್ಗ ಹಿಂದಿನಂತೆಯೇ ಸಾಮಾನ್ಯ ಕ್ಷೇತ್ರವಾಗಿ ಮುಂದುವರೆಯಲಿರುವುದರಿಂದ ಕ್ಷೇತ್ರ ಪುನರ್‌ವಿಂಗಡಣೆಯ ಬಿಸಿ ತಟ್ಟಿಲ್ಲ, ಇಲ್ಲಿ ಶಾಸಕ ಗೋವಿಂದಪ್ಪನವರೇ ಕ್ಷೇತ್ರದಾದ್ಯಂತ ಇರುವ ಸಂಪರ್ಕ ಹಾಗೂ ಅಭಿವೃದ್ಧಿ ಪರ ಕೆಲಸಗಳಿಗೆ ನೀಡಿರುವ ಆದ್ಯತೆ ಅವರನ್ನು ಅಬಾಧಿತವಾಗಿ ಮುಂದುವರಿಸಲಿವೆ. ಇಲ್ಲಿ ಮಾಜಿ ಶಾಸಕ ಇಳ್ಕಲ್ ವಿಜಯಕುಮಾರ್, ಟಿ.ಎಚ್. ಬಸವರಾಜ್‌ರಂತ ಬೆನ್ನುಮೂಳೆ ಇಲ್ಲದ ನಾಯಕರ ವೈಮನಸ್ಯಗಳು ಬಗೆಹರಿಯುವುದೂ ಇಲ್ಲ, ಇವರು ಶಾಸಕ ಬಿ.ಜಿ. ಗೋವಿಂದಪ್ಪನವರಿಗೆ ಸವಾಲಾಗುವುದೂ ಇಲ್ಲ.

ಚಿತ್ರದುರ್ಗ

ಶಾಸಕ ತಿಪ್ಪಾರೆಡ್ಡಿಯ ಅಬ್ಬರದ ಪ್ರವೇಶದಿಂದಾಗಿ ಮಹತ್ವ ಪಡೆದುಕೊಂಡಿದ್ದ ಚಿತ್ರದುರ್ಗ ವಿಧಾನಸಭಾ ಕ್ಷೇತ್ರ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬೃಹನ್ಮಠದ ಆಡಳಿತಾಧಿಕಾರಿ ಎಸ್.ಕೆ. ಬಸವರಾಜನ್ ಅಖಾಡಕ್ಕಿಳಿಯುವುದರೊಂದಿಗೆ ಮತ್ತಷ್ಟು ಕಿಮ್ಮತ್ತು ಪಡೆದುಕೊಂಡಿತ್ತು. ಆ ಮೂಲಕ ಪ್ರತಿಷ್ಠಿತರಿಬ್ಬರ ಜಿದ್ದಾಜಿದ್ದಿಗೆ ವೇದಿಕೆಯಾಗಿತ್ತು. ಇದು ಇನ್ನು ಮುಂದೆಯೂ ಹೀಗೇ ಮುಂದುವರಿಯಲಿದೆ. ಭರಮಸಾಗರ ಕ್ಷೇತ್ರದ ಕಸಬಾ ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಲಿದೆಯೆಂಬ ಮುನ್ಸೂಚನೆಯಿಂದಲೇ ತಿಪ್ಪಾರೆಡ್ಡಿ ಗುಡ್ಡದರಂಗವ್ವನಹಳ್ಳಿ ಜಿ.ಪಂ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಸೋಮಶೇಖರ್‌ನನ್ನು ಗೆಲ್ಲಿಸಿಕೊಂಡು ಕಾಂಗ್ರೆಗೆ ಸೇರ್ಪಡೆ ಮಾಡಿಕೊಂಡರು. ಗುಡ್ಡದರಂಗವ್ವನಹಳ್ಳಿ ಹಾಲಿ ತಮ್ಮ ಕ್ಷೇತ್ರದ ವ್ಯಾಪ್ತಿಗೆ ಬರದಿದ್ದರೂ ಒಂದೆರಡು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಭಾಷಣ ಮಾಡಿ ಬಂದಿದ್ದಾರೆ.


ಕಳೆದ ಬಾರಿ ತಮ್ಮನ್ನು ಸೋಲಿನ ಅಂಚಿನಿಂದ ಪಾರು ಮಾಡಿದ ಐಮಂಗಲ ಹಿರಿಯೂರು ಕ್ಷೇತ್ರದ ವ್ಯಾಪ್ತಿಗೆ ಸೇರ್ಪಡೆಯಾಗಲಿರುವುದು ನಷ್ಟದ ಬಾಬತ್ತೇ. ಭರಮಸಾಗರ ಕ್ಷೇತ್ರದ ಕಸಬಾದಿಂದ ಈ ಹಿಂದೆ ಸೌಭಾಗ್ಯ ಬಸವರಾಜನ್ ಜಿ.ಪಂ. ಸದಸ್ಯೆಯಾಗಿದ್ದರಿಂದ ಅಲ್ಲಿರುವ ಸಂಪರ್ಕ ಪ್ರಭಾವ ಎಸ್.ಕೆ. ಬಸವರಾಜನ್‌ಗೂ ಅನುಕೂಲವಾಗಲಿದೆಯೆಂಬ ಮಾತುಗಳು ಕೇಳಿ ಬರುತ್ತಿವೆ. ಈ ನಡುವೆ ಮೈಸ್ಸು ದಂಧೆಯ ಹಿನ್ನೆಲೆಯಲ್ಲಿ ಭೀಮಸಮುದ್ರದ ಅಡಿಕೆ ಧಣಿಗಳು ಚಿತ್ರದುರ್ಗದ ನೇರ ರಾಜಕಾರಣದ ಅಖಾಡಕ್ಕಿಳಿಯಲಿದ್ದಾರೆಂಬ ಸುದ್ದಿ ರೆಕ್ಕೆಪುಕ್ಕ ಪಡೆದುಕೊಳ್ಳುತ್ತಿದೆ. ಹಾಗೇನಾದರೂ ಆದಲ್ಲಿ ಅದು ತಿಪ್ಪಾರೆಡ್ಡಿಗೆ ವರದಾನವಾಗಲಿದೆ. ಅದರಲ್ಲೂ ನಿಸ್ಸೀಮ ರಾಜಕೀಯ ತಂತ್ರಗಾರಿಕೆಗಳನ್ನು ಬಲ್ಲ ತಿಪ್ಪಾರೆಡ್ಡಿಯನ್ನು ಕದಲಿಸುವುದು ದುಬಾರಿ ಪ್ರಯತ್ನವೇ ಆಗಲಿದೆ.




ತಿಪ್ಪಾರೆಡ್ಡಿ

ಜಿಲ್ಲೆಯ ಮಟ್ಟಿಗೆ ಈಗಿನ ಪ್ರಸ್ತಾವಿತ ಪುನರ್ ವಿಂಗಡಣೆಯೇ ಅಂತಿಮವಾಗುವ ಸಾಧ್ಯತೆಗಳೇ ಹೆಚ್ಚಾಗಿವೆ. ಪರಿಶಿಷ್ಟ ಜಾತಿಗೆ ಕೇವಲ ಒಂದೇ ಕ್ಷೇತ್ರವನ್ನು ಮೀಸಲಾಗಿಸುವುದರೊಂದಿಗೆ ಬಹುಸಂಖ್ಯಾತ ದಲಿತರ ರಾಜಕೀಯ ಪ್ರಾತಿನಿಧ್ಯಕ್ಕೆ ನಷ್ಟವಾದಂತಾಗಿದೆ. ಕ್ಷೇತ್ರ ಪುನರ್‌ವಿಂಗಡಣೆಯಿಂದಾಗಿ ನಿಜವಾದ ಲಾಭವಾಗಿರುವುದು ಪರಿಶಿಷ್ಟ ಪಂಗಡಕ್ಕೆ. ಆದರೆ ಇದರ ಪ್ರಯೋಜನ ಪರಿಶಿಷ್ಟ ಪಂಗಡದ ಸಾಮಾನ್ಯರಿಗೆ ಸಿಗುತ್ತದೆಂದೇನೂ ಸಂಭ್ರಮಿಸಬೇಕಿಲ್ಲ. ಭರಮಸಾಗರ ಕ್ಷೇತ್ರ ರದ್ದಾಗುವುದರೊಂದಿಗೆ ಮೊದಲೇ ಅಭಿವೃದ್ಧಿಯಲ್ಲಿ ಹಿಂದುಳಿದಿದ್ದ ಈ ಭಾಗದ ಹಳ್ಳಿಗಳು ಮತ್ತಷ್ಟು ಅವಜ್ಞೆಗೊಳಗಾಗಲಿವೆ. ಈ ಕ್ಷೇತ್ರ ಪುನರ್‌ವಿಂಗಡಣೆಯ ತಂತ್ರಗಾರಿಕೆಗಳು ಅಧಿಕಾರಸ್ಥರ ಹಾಗೂ ಅಧಿಕಾರ ಶಾಹಿಗಳ ಭವಿಷ್ಯದ ಅಗ [illegible]

ಕರಾವಳಿ ಕರ್ನಾಟಕದ ಮೆಗಾ ಸೀರಿಯಲ್: ಭಜರಂಗಿಗಳ ಇನ್ನೊಂದು ಹಿಂಸಾ ಕೃತ್ಯ





ಕರ್ನಾಟಕದ ಎಲ್ಲ ಊರುಗಳಲ್ಲೂ ಹಿಂದೂಗಳಿದ್ದಾರೆ: ಗೋವುಗಳೂ ಇವೆ: ಗೋಮಾಂಸವನ್ನು ತಿನ್ನುವವರೂ ಇದ್ದಾರೆ. ಆದರೆ ರಾಜ್ಯದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಗೋಮಾಂಸದ ವಿಷಯದಲ್ಲಿ ದಿನಕ್ಕೊಂದು ಪ್ರಕರಣ ಸೃಷ್ಟಿಸಿ, ಬಹುಸಂಖ್ಯಾತ ಹಿಂದೂಗಳಲ್ಲಿ ಮುಸ್ಲಿಮರ ವಿರುದ್ಧ ದ್ವೇಷ ಕೆರಳಿಸಲಾಗುತ್ತಿದೆ.

ಕಳೆದ ತಿಂಗಳು ಉಡುಪಿ ಜಿಲ್ಲೆಯ ಕೋಟ-ಸಾಲಿಗ್ರಾಮ ಪರಿಸರದ ಮೂರು ದೇವಾಲಯಗಳ ಎದುರು ಯಾರೋ ಕೊಳೆತ ಮಾಂಸದ ಚೀಲಗಳನ್ನು ಎಸೆದಿದ್ದರು. ಅದು ಪತ್ತೆಯಾದ ಕೂಡಲೇ ಪೋಲೀಸರು ಚೀಲಗಳನ್ನು ಮಣ್ಣಿನಲ್ಲಿ ಹೂತು ಹಾಕಿದರು. ಆದರೆ ಸಂಘ ಪರಿವಾರದವರು ಸ್ಥಳಕ್ಕೆ ಧಾವಿಸಿ ಆ ಚೀಲಗಳನ್ನು ಅಗೆದು ತೆಗೆಸಿ ಪಶುವೈದ್ಯರಿಂದ ಅದು ಗೋಮಾಂಸವೆಂಬ ಹೇಳಿಕೆ ಪಡೆದು ಪ್ರತಿಭಟನಾ ಸಭೆಗಳನ್ನು ನಡೆಸಿದರು. ಯಥಾ ಪ್ರಕಾರ ಕರಾವಳಿಯ ಪತ್ರಿಕೆಗಳು ಇಷ್ಟನ್ನೇ ದೊಡ್ಡ ಸುದ್ದಿ ಮಾಡಿ "ಉದ್ವಿಗ್ನ ಸ್ಥಿತಿ" ಎಂದು ಮುಂತಾಗಿ ಚೀರಾಡಿದವು.

ಈ ಪತ್ರಿಕೆಗಳ ಉತ್ಸಾಹ ಮತ್ತು ಸಂಘ ಪರಿವಾರದವರ ತರಾತುರಿ ನೋಡಿದರೆ ಇವರು ಇದಕ್ಕೆ ಕಾದು ಕೂತಂತೆ ಭಾಸವಾಗುತ್ತಿತ್ತು, ಆದರೆ ದೈವವಶಾತ್ ಈ ಪ್ರಕರಣ ಅಲ್ಲಿಗೇ ತಣ್ಣಗಾಯಿತು. ಕಳೆದ ವಾರ ದಕ್ಷಿಣ ಕನ್ನಡ ಜಿಲ್ಲೆಯ ಪಾವಂಜೆ ಎಂಬಲ್ಲಿ ಇನ್ನೊಂದು ಭೀಕರ ಘಟನೆ ನಡೆದಿದೆ.

ಪಾವಂಜೆ, ಉಡುಪಿ-ಮಂಗಳೂರು ಹೆದ್ದಾರಿಯಲ್ಲಿ ಮೂಲ್ಕಿಗಿಂತ ಸ್ವಲ್ಪ ಮುಂದೆ ಸಿಗುವ ಊರು. ದಿ. 27.4.2006 ಗುರುವಾರ ನಸುಕಿನಲ್ಲಿ ಉಡುಪಿಯಿಂದ ಮಂಗಳೂರಿನತ್ತ ಧಾವಿಸುತ್ತಿದ್ದ ಒಂದು ಟಾಟಾ ಸುಮೋವನ್ನು ಭಜರಂಗದಳದವರು ಪಾವಂಜೆ ಸೇತುವೆ ಬಳಿ ರಸ್ತೆಯ ಅಡ್ಡಕ್ಕೆ ಒಂದು ಮೆಟಾಡೋರನ್ನು ನಿಲ್ಲಿಸಿ ತಡೆದರು. ಟಾಟಾ ಸುಮೋದ ಒಳಗೆ ಎರಡು ದನಗಳು ಮತ್ತು ಮೂರು ಕಡಸು (ಗಂಡುಕರು)ಗಳಿದ್ದವು. ಅವುಗಳನ್ನು ಕುಂದಾಪುರದ ಒಬ್ಬ ದಲ್ಲಾಳಿಯಿಂದ ಖರೀದಿಸಲಾಗಿತ್ತು.

ಭಜರಂಗದಳದವರು ಈ ಜಾನುವಾರುಗಳನ್ನು ವಾಹನದಿಂದ ಕೆಳಗೆ ಇಳಿಸಿ, ಡ್ರೈವರ್ ಬಶೀರ್ ಮತ್ತು ಅವರ ಜೊತೆಗಿದ್ದ ಟಾಟಾ ಸುಮೋದ ಮಾಲೀಕ ಆಸೀಫ್ ಮತ್ತು ಅನ್ವರ್ ಎಂಬ ತರುಣರ ಮೇಲೆ ರಾಡು ಮತ್ತು ತಲವಾರುಗಳಿಂದ ಹಲ್ಲೆ ನಡೆಸಿ, ಅವರ ಬಳಿ ಇದ್ದ ನಗದು ಮುಂತಾದ್ದನ್ನೆಲ್ಲ ದೋಚಿದರು.

ಬಶೀರ್ ಅವರ ತಲೆಗೆ ಗಂಭೀರ ಪ್ರಮಾಣದ ಗಾಯಗಳಾಗಿವೆ. ಅನ್ವರ್ ಮತ್ತು ಆಸೀಫ್‌ರಿಗೂ ಮೈಮೇಲೆಲ್ಲ ಬರೆಬಿದ್ದಿವೆ. ಆದರೆ ಹಲ್ಲೆ ನಡೆ ಯುತ್ತಿದ್ದಂತೆ ಇಬ್ಬರೂ ಸೇತುವೆ ಯಿಂದ ಕೆಳಗೆ ಇರುವ ಮರಳು ದಂಡೆಗೆ ಹಾರಿದ್ದರಿಂದ ಅಪ್ಪರಲ್ಲೇ ಬಚಾವಾಗಿದ್ದಾರೆ. ಇವರನ್ನು ಈ ಪ್ರಕಾರ ವಿಚಾರಿಸಿ ಕೊಂಡ ನಂತರ ಭಜರಂಗದಳ ದವರು ಟಾಟಾ ಸುಮೋಕ್ಕೆ ಸೀಮೆ ಎಣ್ಣೆ ಸುರಿದು ಬೆಂಕಿ ಕೊಟ್ಟರು.

ಈ ತಂಡದಲ್ಲಿ ಸುಮಾರು 25 ಜನ ತರುಣರಿದ್ದು ಅವರೆಲ್ಲರೂ ಆಸುಪಾಸಿನವರೇ ಆಗಿದ್ದರು. ಈ ಹಲ್ಲೆ ನಡೆದದ್ದು ಮುಂಜಾನೆ ನಾಲ್ಕು ಗಂಟೆಯ ಸುಮಾರಿಗೆ. ಆ ಹೊತ್ತಲ್ಲದ ಹೊತ್ತಿನಲ್ಲೂ ಅಲ್ಲಿ ಒಬ್ಬ ಫೋಟೋ ಗ್ರಾಫರ್ ರೆಡಿಯಾಗಿದ್ದರು. ಅವರು ತೆಗೆದ ಉರಿಯು ತ್ತಿರುವ ಟಾಟಾ ಸುಮೋದ ಫೋಟೋ ಮರು ದಿನದ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಆದಿ ಉಡುಪಿಯ ಬತ್ತಲೆ ಪ್ರಕರಣದಂತೆ ಪಾವಂಜೆಯ ಈ ಹಲ್ಲೆಯೂ ಪೂರ್ವಯೋಜಿತವಾದದ್ದು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಬಹುಶಃ ಭಜರಂಗದಳದವರಿಗೆ ಟಾಟಾ ಸುಮೋವನ್ನು ಅದರ ಒಳಗೆ ಇದ್ದವರ ಸಮೇತ ಸುಡುವ ಪ್ಲಾನ್ ಇತ್ತು, 'ಗುಜರಾತಿನಲ್ಲಿ ಮಾಡಿದಂತೆ ಮಾಡಿಬಿಡೋಣ' ಎಂದು ಅವರು ತುಳುವಿನಲ್ಲಿ ಮಾತಾಡಿಕೊಳ್ಳುತ್ತಿದ್ದರಂತೆ.


ಜಾನುವಾರುಗಳನ್ನು ಸಾಗಿಸುವವರನ್ನು ರಸ್ತೆಯಲ್ಲಿ ತಡೆದು ನಿಲ್ಲಿಸಿ-ಇದು ಕೂಡ ಕ್ರಿಮಿನಲ್ ಅಪರಾಧ-ಹೊಡೆದು ಬಡಿದು ಅವರ ಬಳಿ ಇರುವುದನ್ನೆಲ್ಲ ದೋಚುವುದು ಕರಾವಳಿಯಲ್ಲಿ ಒಂದು ಮಾಮೂಲು ಸಂಗತಿ. ಕಳೆದ ವರ್ಷ ಆದಿ ಉಡುಪಿಯ ಮೈದಾನದಲ್ಲಿ ಹಿಂದೂ ವೀರರ ತಂಡವೊಂದು ಇಬ್ಬರು ಮುಸ್ಲಿಮರನ್ನು ಸಂಪೂರ್ಣ ಬೆತ್ತಲು ಮಾಡಿ ಅಟ್ಟಿಸಿಕೊಂಡು ಹೋಗಿ ಹೊಡೆಯುವುದನ್ನು ನೂರಾರು ಜನರು ನೋಡಿದರು.. ಮುಸ್ಸಂಜೆಗೆ ಶುರುವಾದ ಈ ಶೋ ಮೂರು ಗಂಟೆಗಳಷ್ಟು ಕಾಲ ನಡೆಯಿತು.

ಆದರೆ ಮುಂಜಾನೆಯ ಹೊತ್ತಿಗೆ, ಗುಂಪು ಕಟ್ಟಿಕೊಂಡು ಬಂದು ಹಲ್ಲೆ ಮಾಡಿ ವಾಹನಕ್ಕೆ ಬೆಂಕಿ ಕೊಟ್ಟದ್ದು ಪಾವಂಜೆ ಘಟನೆಯ ವೈಶಿಷ್ಟ್ಯ. ಇದರಲ್ಲಿ ಭಾಗಿಗಳಾದ ಭಜರಂಗದಳದವರ ಮೇಲೆ ಮೂಲ್ಕಿ ಠಾಣೆಯ ಪೋಲೀಸರು ಅಕ್ರಮ ಕೂಟ, ಗಲಭೆಗೆ ಪ್ರಚೋದನೆ, ಬಲಾತ್ಕಾರ, ಮಾರಕಾಸ್ತ್ರಗಳಿಂದ ಹಲ್ಲೆ, ಕೊಲೆಯ ಪ್ರಯತ್ನ ಮುಂತಾದ ಅಪರಾಧಗಳಿಗೆ ಅನ್ವಯವಾಗುವ I.P.C. ಸೆಕ್ಷನ್ 143, 147, 148, 323, 224, 341 ಮತ್ತು 437 (149 ರ ಸೆಕ್ಷನ್ ಜೊತೆಗೆ ಓದಿ ಕೊಳ್ಳತಕ್ಕದ್ದು)ಗಳ ಅಡಿಯಲ್ಲಿ ಕೇಸು ದಾಖಲು ಮಾಡಿ ಆರು ಜನರನ್ನು ಬಂಧಿಸಿದ್ದಾರೆ.

ಕೇಸು ಬಲವಾಗಿದೆ; ಆದರೆ ಕೋರ್ಟಿನಲ್ಲಿ ನಿಲ್ಲುವುದಿಲ್ಲ, ಇದೂ ಕೂಡ ಮಾಮೂಲು. ಹಲ್ಲೆಗೆ ಬಳಸಲಾದ ಒಂದು ಮಾರುತಿ ಕಾರು ಮತ್ತು ಮೆಟಾಡೋರ್‌ಗಳನ್ನು ಕೂಡ ಮೂಲ್ಕಿ ಪೋಲೀಸರು


ದಾವಣಗೆರೆ: ನಗರ ಸಭೆಯಲ್ಲ- ನರಕ ಸಭೆ

ದಾವಣಗೆರೆ ನಗರಸಭೆಯ ಆಯುಕ್ತ ಬಿ.ಹೆಚ್. ನಾರಾಯಣಪ್ಪ ಮತ್ತು ಕಂದಾಯಾಧಿಕಾರಿ ಎ.ಡಿ. ಮಂಜಪ್ಪ ಎಂಬ ಅಡ್ನಾಡಿ ಅಧಿಕಾರಿಗಳು ಇಲ್ಲಿನ ಗುಮಾಸ್ತರೊಂದಿಗೆ ಲಂಚದ ಒಡಂಬಡಿಕೆಯನ್ನು ಮಾಡಿಕೊಂಡು ತಮ್ಮ ನವರಂಧ್ರಗಳಿಂದಲೂ ಅಮೇಧ್ಯ ಮುಕ್ಕುತ್ತಿರುವುದನ್ನು ನೋಡಿಯೊ ಏನೊ? ಗಾಂಧಿ ಪ್ರತಿಮೆಯು ತನ್ನ ಕನ್ನಡಕವನ್ನೇ ಕಳಚಿಕೊಂಡಿದೆ. ಇದಾಗಿ ವರ್ಷಗಳೇ ಕಳೆದರೂ ಆ ಕನ್ನಡಕವನ್ನು ತೊಡಿಸುವ ಗೋಜಿಗೇ ಇವರು ಹೋಗಿಲ್ಲ. ಪುರಸೊತ್ತಿಲ್ಲದಂತೆ ಮೇಯುತ್ತಿರುವ ಇವರು ತಮ್ಮ ಮೈ ಮೇಲಿನ ಬಟ್ಟೆಗಳನ್ನೇ ಮರೆತಿರುವಾಗ ಇನ್ನು ಗಾಂಧಿ ಪ್ರತಿಮೆಯ ಕನ್ನಡಕವನ್ನು ಯಾವ ಲೆಕ್ಕಕ್ಕೆ ತೆಗೆದು ಕೊಂಡಾರು?



ಬಸವರಾಜ

ನಾರಾಯಣಪ್ಪ ಹಾಗೂ ಮಂಜಪ್ಪ ಇಬ್ಬರೂ ಕೂಡ ತಮ್ಮ ಸ್ವ-ತಂತ್ರಗಳಿಂದ ಕಮಾಯಿ ಮಾಡುವುದಲ್ಲದೆ, ಒಂದು ಫೈಲಿಗೆ ಇಂತಿಷ್ಟೆಂದು ಗುಮಾಸ್ತರುಗಳ ಜೊತೆ ಒಪ್ಪಂದ ಮಾಡಿಕೊಂಡು ಕಮಾಯಿಯ ಮೂಲಾಧಾರವನ್ನು ಕ್ರಮಬದ್ಧವಾಗಿ ಕ್ರಿಯೇಟ್ ಮಾಡಿ ಕೊಂಡಿದ್ದಾರೆ. ಈ ಒಪ್ಪಂದಕ್ಕೆ ಅಧಿಕಾರಿ ಗಳಾಗಲೀ, ಗುಮಾಸ್ತರಾಗಲೀ ಒಂದಿಷ್ಟೂ ಚ್ಯುತಿ ಬರದಂತೆ ನಡೆದುಕೊಳ್ಳುತ್ತಾರೆ. ಅದರಲ್ಲೂ 8-10 ವರ್ಷಗಳಿಂದ ದಾವಣಗೆರೆ ನಗರ ಸಭೆಯನ್ನೇ ಗುತ್ತಿಗೆ ಹಿಡಿದವರಂತೆ ಭದ್ರವಾಗಿ ಇಲ್ಲಿಯೇ ತಳ ಊರಿರುವ ಗುಮಾಸ್ತರಂತೂ ಆಯುಕ್ತ ಹಾಗೂ ಕಂದಾಯ ಅಧಿಕಾರಿಗೆ ಅವರ ಪಾಲಿನ ಕಮಾಯಿ ಹಣವನ್ನು ವಿಧೇಯತೆಯಿಂದ ಅರ್ಪಿಸುತ್ತಾರೆ. ವಾಸ್ತವವಾಗಿ ಈ ಕಮಾಯಿ 'ಒರತೆ'ಗಳನ್ನು ಸೃಷ್ಟಿಸುವ ಆಧಾರ ಸ್ತಂಭಗಳು ಮಾತ್ರ ಗುಮಾಸ್ತರೇ ಆಗಿದ್ದಾರೆ.



ಶಿವನಳ್ಳಿ ರಮೇಶ

ಲೇನಾ-ದೇನಾಗಳ ನಿಗದಿ


ಕಮಾಯಿಯ ಪ್ರಧಾನ ಮೂಲ ವಾದ ಖಾತೆ ಬದಲಾವಣೆಗೆ 2500 ರಿಂದ 3000 ರೂ. ಕ್ರಿಟಿಕಲ್ ಆಗಿದ್ದರೆ 5ರಿಂದ 10 ಸಾವಿರ, ಖಾತಾ ದಾಖಲಾತಿಗಳ ಪ್ರತಿಗಳಿಗೆ 100, ಜನನ-ಮರಣ ಪತ್ರ ದಾಖಲೆಗಳಿಗೆ 100, ಹೀಗೆ ಎಲ್ಲ ಕೆಲಸಗಳಿಗೂ ಅವುಗಳ ಪಜನ್ಸಿನ ಆಧಾರದ ಮೇಲೆ 'ಲೇನಾ' ನಿಗದಿಪಡಿಸಿಕೊಂಡಿದ್ದಾರೆ ಪ್ರತಿ ಫೈಲಿಗೆ ಕಂದಾಯಾ ಧಿಕಾರಿಗೆ 150, ಕಮಿಷನರ್‌ಗೆ 100, ರೆವಿನ್ಯೂ ಇನ್ಸ್‌ಪೆಕ್ಟರ್‌ಗೆ 100, ಹೆಡ್ ಗುಮಾಸ್ತನಿಗೆ 100 (ಫೈಲುಗಳ ಭಾರ ಜಾಸ್ತಿಯಿದ್ದರೆ ವ್ಯತ್ಯಾಸವಾಗುತ್ತವೆ) ದೇನಾ ಮುಗಿದ ಮೇಲೆ ಉಳಿದದ್ದನ್ನು ಗುಮಾಸ್ತರು ಹಂಚಿಕೊಳ್ಳುತ್ತಾರೆ. ಆಯುಕ್ತ ಮತ್ತು ಕಂದಾಯಾಧಿಕಾರಿಗಳಿಬ್ಬರು ದಿನವೊಂದಕ್ಕೆ 5ರಿಂದ 10 ಸಾವಿರದವರೆಗೆ, ಗುಮಾಸ್ತರುಗಳು 1ರಿಂದ 5 ಸಾವಿರದವರೆಗೆ ಮುಕ್ಕುತ್ತಿದ್ದಾರೆ.

ಫೈಲು ಬರದಿದ್ದರೆ ತೊಣಚಿ ಹೊಕ್ಕಂತೆ

ಅಮೇಧ್ಯವನ್ನು ಅಮೃತವೆಂಬಂತೆ ಮಾರುದ್ದ ನಾಲಗೆ ಚಾಚಿ ಹೀರುವುದನ್ನು ಕರಗತ ಮಾಡಿಕೊಂಡಿರುವ ಕಂದಾಯಾ ಧಿಕಾರಿ ಮಂಜಪ್ಪ ತಾನು ಮಲ್ಲಿಕಾರ್ಜುನ ಖರ್ಗೆಯ ಬಂಧುವೆಂದು ಹೇಳಿಕೊಳ್ಳುತ್ತಾನೆ. ಯಾವುದಾದರೊಂದು ದಿನ ಖಾತೆ ಬದಲಾವಣೆಗಾಗಿ ಫೈಲುಗಳು ಬರಲಿಲ್ಲವೆಂದರೆ ಇವನಿಗೆ ತೊಣಚಿ ಹೊಕ್ಕಂತಾಗಿಬಿಡುತ್ತದೆ. ಗುಮಾಸ್ತರನ್ನು ಹುರಿದು ಮುಕ್ಕುವಂತೆ ಸತಾಯಿಸುತ್ತಾನೆ. ಬಿ.ಪಿ. ಕೂಡ ರೈಸಾಗಿ ಮಹಿಳಾ ಗುಮಾಸ್ತೆಯರೆಂಬುದನ್ನೂ ನೋಡದೆ ಅವಾಚ್ಯ ಶಬ್ದಗಳಿಂದ ಬಯ್ಯಲು ಶುರುವಿಟ್ಟುಕೊಳ್ಳುತ್ತಾನೆ. ಬಯ್ಗುಳ ತಾಳಲಾರದೆ ಒಮ್ಮೆ ಗುಮಾಸ್ತರೆಲ್ಲ ಒಂದಾಗಿ ಇವನನ್ನು ಹೊರಹಾಕಲು ಆಯುಕ್ತ ನಾರಾಯಣಪ್ಪನಿಗೆ ಆಗ್ರಹಿಸಿದ್ದೂ ಇದೆ.


ಹೆಂಡ ಕುಡಿಯೋ ದೇವರಿಗೆ ಖಂಡ ತಿನ್ನೊ ಪೂಜಾರಿ ಎಂಬಂತೆ ಆಯುಕ್ತ ನಾರಾಯಣಪ್ಪ ಸಾಚಾ ಮನುಷ್ಯನಲ್ಲ, ಅನೇಕ ನಕಲಿ ಬಿಲ್ಲುಗಳಿಗೆ ಓಕೆ ಕೊಟ್ಟಿದ್ದಾನೆ. ನಗರ ಸಭೆಯ ಎಲ್ಲ ಅವ್ಯವಹಾರಗಳಿಗೂ ಸಾರಥ್ಯ ವಹಿಸುತ್ತಲೇ ತನ್ನ ಪಾಲಿನ ಅಮೇಧ್ಯವನ್ನು ಸಂಗ್ರಹಿಸಿಕೊಡಲು ಗುರುಮೂರ್ತಿ ಎಂಬ ಗುಮಾಸ್ತನನ್ನು ನೇಮಿಸಿಕೊಂಡಿದ್ದಾನೆ. ನಗರಸಭೆಯ ಅವ್ಯವಹಾರಗಳ ಬಗ್ಗೆ ಯಾರಾದರೂ ಈತನ ಗಮನಕ್ಕೆ ತಂದರೆ 'ನನ್ನ ಗಮನಕ್ಕೆ ಬಂದಿಲ್ಲ, ನನಗೇನೂ ಗೊತ್ತಿಲ್ಲ' ಎಂಬಂತಹ ಪಾರಿಕೆಯ ಉತ್ತರಗಳನ್ನು ನೀಡುತ್ತಾನೆ. 'ಇವನನ್ನು ಮಂಪರು ಪರೀಕ್ಷೆಗೊಳಪಡಿಸಿದರೆ ಮಾತ್ರ, ಬಾಯಿ ಬಿಡುತ್ತಾನೆ' ಎಂದು ಜನರು ಮಾತನಾಡಿಕೊಳ್ಳುವುದು ಸಹಜವಾಗಿದೆಯೆನಿಸುತ್ತದೆ. ನಗರ ಸಭೆಯಲ್ಲಿನ ಅಧಿಕಾರಿ ಹಾಗೂ ಗುಮಾಸ್ತರ ಒಳಜಗಳಗಳು ಕಮಾಯಿ ಹಂಚಿಕೊಳ್ಳುವುದಕ್ಕೆ ಸಂಬಂಧಿಸಿದವೇ ಆದ್ದರಿಂದ ಕಣ್ಸನ್ನೆಯಿಂದಲೇ ಅವುಗಳನ್ನು ತಣ್ಣಗೆ ಮಾಡಿಬಿಡುತ್ತಾನೆ.

ಗುಮಾಸ್ತರುಗಳ ಖದರೇ ಬೇರೆ....



ನಾರಾಯಣಪ್ಪ

ನಗರಸಭೆಯ ಗುಮಾಸ್ತರಾದ ಕೃಷ್ಣಮೂರ್ತಿ, ಶಾಮನೂರು ಬಸವ ರಾಜು, ಬಸವರಾಜ, ಗುರು ಮೂರ್ತಿ, ಶಂಕರೇಗೌಡ, ಕುಮಾರ, ಚಿಕ್ಕಣ್ಣ ಇವರು 8- 10 ವರ್ಷಗಳಿಂದ ಇಲ್ಲಿಯೇ ಠಿಕಾಣಿ ಹೂಡಿದ್ದಾರೆ. ನಗರಸಭೆಯ ಅಧಿಕಾರಿಗಳ ಹಾಗೂ ಕೌನ್ಸಿಲರು ಗಳ ನಾಡಿ ಬಡಿತವನ್ನು ಡಾಕ್ಟರು ಗಳಿಗಿಂತ ಸ್ಪಷ್ಟವಾಗಿ ಹೇಳಬಲ್ಲವರಾ ಗಿದ್ದು ಅಮೇಧ್ಯದ ಮೂಲಗಳನ್ನು ಹೆಕ್ಕಿ ತೆಗೆಯುವುದರಲ್ಲಿ ನಿಪುಣತೆಯನ್ನು ಸಾಧಿಸಿದ್ದಾರೆ. ವಿಚಿತ್ರವೆಂದರೆ ಇಲ್ಲಿನ ಬಹುತೇಕ ಗುಮಾಸ್ತರು ಖಾಸಗಿ ಕೆಲಸಗಾರರನ್ನಿಟ್ಟುಕೊಂಡು ತಾವು ಮಾಡಬೇಕಾದ ನಗರಸಭೆಯ ಕೆಲಸವನ್ನು ಮಾಡಿಸುತ್ತಾ ಅವರಿಗೆ ತಿಂಗಳಿಗೆ ಇಂತಿಷ್ಟೆಂದು ಸಂಬಳವನ್ನು ಫಿಕ್ಸ್ ಮಾಡಿಕೊಡುತ್ತಿದ್ದಾರೆ. ಕರ್ತವ್ಯದ ಸಮಯದಲ್ಲಿ ತಮ್ಮ ಹೊರಗಿನ ವ್ಯವಹಾರಗಳನ್ನು ಮುಗಿಸಿ ಕೊಂಡು ಸಂಜೆಯಾಗುತ್ತಿದ್ದಂತೆ ನಗರಸಭೆಗೆ ಬಂದು ತಮ್ಮ ಪಾಲಿನ ಕಮಿಷನ್ ರೊಕ್ಕ ಎಣಿಸಿಕೊಂಡು 'ಕರ್ತವ್ಯ ಬದ್ಧತೆ'ಯನ್ನು ಸಾರುತ್ತಾರೆ. ಈ ಬಿಟ್ಟಿ ಹಣದ ಗತ್ತಿನಿಂದಲೇ ದಾವಣಗೆರೆಯಲ್ಲಿ ಅತ್ಯಂತ ಹೆಚ್ಚಿನ ಶುಲ್ಕ (?) ವಿಧಿಸುವ ತರಳಬಾಳು ಸ್ಕೂಲಿಗೆ ಇವರ ಮಕ್ಕಳನ್ನು ಸೇರಿಸಿದ್ದಾರೆ.



ದ್ಯಾಬೇರಿ

ನಗರಸಭೆಯ ಗುಮಾಸ್ತರೆಲ್ಲರ ಬಗ್ಗೆ ಬರೆದರೆ ಒಬ್ಬೊಬ್ಬನದೂ ಒಂದು ಎಪಿಸೋಡಾಗಿ ಪತ್ರಿಕೆಯ ಹಲವು ಸಂಚಿಕೆಗಳೇ ಸಾಕಾಗುವುದಿಲ್ಲವಾದ್ದರಿಂದ ಸ್ಯಾಂಪಲ್‌ಗಾಗಿ ಕೆಲವರ ಬಗ್ಗೆ ಮಾತ್ರ ಹೇಳಬಹುದು.

ಗುಮಾಸ್ತ ಕೃಷ್ಣಮೂರ್ತಿಗೆ ಬರೆಯಲು ಬರುವುದಿಲ್ಲ, ನಾಲ್ಕು ಮಂದಿ ಖಾಸಗಿಯವರನ್ನು ಕೆಲಸಕ್ಕಿಟ್ಟುಕೊಂಡಿದ್ದಾನೆ. ಇವನನ್ನು 'ಹೆಬ್ಬೆಟ್ಟು' ಎಂದು ಕರೆಯುತ್ತಾರೆ. ನಗರಸಭೆಗೆ ಬೆಳಿಗ್ಗೆ ಬಂದು ಹಾಜರಿ ಪುಸ್ತಕಕ್ಕೆ ಸಹಿ ಹಾಕಿ ಕಂದಾಯಾಧಿಕಾರಿ ಮಂಜಪ್ಪನ ಜೇಬಿಗೆ ನೂರರ ನೋಟುಗಳನ್ನು ತುರುಕಿ ಹೊರಟನೆಂದರೆ ಪ್ರತ್ಯಕ್ಷವಾಗುವುದು ತಾಲ್ಲೂಕು ಕಛೇರಿಯಲ್ಲಿಯೇ. ಲ್ಯಾಂಡ್ ಡೀಲಿಂಗ್ ವ್ಯವಹಾರವೇ ಇವನ ಪ್ರಧಾನ ಕಾಯಕ ವಾಗಿರುವುದರಿಂದ ಬ್ರೋಕರ್ ಕೃಷ್ಣಮೂರ್ತಿ ಎಂದೂ ಇವನನ್ನು ಗುರ್ತಿಸುತ್ತಾರೆ. ಇವನು ದಾವಣಗೆರೆ ಕೆ.ಎಸ್.ಆರ್.ಟಿ.ಸಿ. ನಿಲ್ದಾಣದ ಹಿಂದುಗಡೆ 40 ಲಕ್ಷಕ್ಕೂ ಹೆಚ್ಚು ಬೆಲೆ ಬಾಳುವ ಎರಡು ಭವ್ಯ ಮನೆಗಳನ್ನು ಕಟ್ಟಿಸಿದ್ದಾನೆ. ಆನಗೋಡು-ಹೆಬ್ಬಾಳ ನಡುವಿರುವ ಹಂಪನೂರಿನಲ್ಲಿ ಅಡಿಕೆ ತೋಟವನ್ನು ಮಾಡಿದ್ದಾನೆ. ಅದು ಈಗಾಗಲೇ ಫಲಕ್ಕೆ ಬಂದಿದೆ.

ಗುಮಾಸ್ತ ಶಾಮನೂರು ಬಸವರಾಜ ಗುಮಾಸ್ತರು ಗಳಲ್ಲಿಯೇ ಶ್ರೀಮಂತ. ಲಕ್ಷಗಳ ಬೆಲೆಬಾಳುವ ಮನೆಯನ್ನು ನಗರದ ಸಿದ್ಧವೀರಪ್ಪ ಬಡಾವಣೆಯಲ್ಲಿ ಕಟ್ಟಿಸಿದ್ದಾನೆಂದು ಹೇಳಲಾಗುತ್ತಿದೆ. ಇವನು ಲ್ಯಾಂಡ್ ಡೀಲಿಂಗಿನ ಜೊತೆಗೆ ನಕಲಿ ದಾಖಲೆಗಳನ್ನು ಸೃಷ್ಟಿಸುವ ಕುಖ್ಯಾತಿಯನ್ನು ಪಡೆದಿದ್ದಾನೆ.

ಗುಮಾಸ್ತ ಗುರುಮೂರ್ತಿ ಪ್ರತಿದಿನ ಎಲ್ಲ ಗುಮಾಸ್ತರಿಂದ ನಿಗದಿಪಡಿಸಿಕೊಂಡಿರುವ ಕಮಾಯಿ ಹಣವನ್ನು ಸಂಗ್ರಹಿಸಿ ಆಯುಕ್ತ ನಾರಾಯಣಪ್ಪನಿಗೊಪ್ಪಿಸುವುದೇ ತನ್ನ ಕಾಯಕವೆಂದುಕೊಂಡಿದ್ದಾನೆ.

8 -10 ವರ್ಷಗಳ ದೀರ್ಘಕಾಲ ಇಲ್ಲಿಯೇ ಇದ್ದು ಗಂಟಲು ಮಟ್ಟ ತಿಂದು ಅರಗಿಸಿಕೊಳ್ಳುತ್ತಿರುವ ಗುಮಾಸ್ತರನ್ನು ಇಲ್ಲಿಂದ ತುರ್ತಾಗಿ ಬೇರೆಡೆಗೆ ಎತ್ತಂಗಡಿ ಮಾಡದಿದ್ದರೆ ಕೆಲವೇ ವರ್ಷಗಳಲ್ಲಿ ಕೋಟಿಗೆ ತಲುಪುವ ಇವರ ಆಸ್ತಿಯ ಪಾರುಪತ್ಯವನ್ನು ವಹಿಸಿಕೊಳ್ಳಬೇಕಾದ ಕರ್ಮ ಜಿಲ್ಲಾಧಿಕಾರಿಗೆ ಬರಬಹುದು.

ತೆಗೆದುಕೊಂಡಿದ್ದಾರೆ. ಬೆಂಕಿಗೆ ತುತ್ತಾಗಿರುವ ... ಸುಮೋದ ಡ್ರೈವರ್ ಬಶೀರ್ ಮತ್ತು ...ದನಗಳನ್ನು ಸಾಗಿಸುತ್ತಿದ್ದ ಅಸೀಫ್ ಹಾಗೂ ಅನ್ವರ್‌ರ ...ಲೂ. ಕರ್ನಾಟಕ ಗೋಹತ್ಯಾ ನಿಷೇಧ ಕಾನೂನಿನ ...ು ಸಾಗಾಣಿಕೆ, ಪ್ರಾಣಿ ಹಿಂಸೆ ಮುಂತಾದ ಕಲ ...ಳ ಅನ್ವಯ ಕೇಸು ದಾಖಲಾಗಿದೆ. ಟಾಟಾ ಸುಮೋ ...ನ್ನ ಎರಡು ದನ ಹಾಗೂ ಮೂರು ಕರುಗಳನ್ನು ...ಲ್ಲಿ ಪೋಲೀಸು ಠಾಣೆಯ ಹಿಂದೆ ಕಟ್ಟಿ ಹಾಕ...ದೆ. ಅಸೀಫ್ ಮತ್ತು ಅನ್ವರ್-ಇಬ್ಬರ ಮೇಲೂ ... ಠಾಣೆಯಲ್ಲಿ ಹಿಂದೆಯೂ ಈ ಬಗೆಯ ...ಗಳನ್ನು ಹಾಕಲಾಗಿದ್ದು ಒಂದೆರಡು ಈಗಲೂ ...ಯುತ್ತಿವೆ.

...ನವರ ಮೇಲೆ ಆರೋಪಿಸಲಾಗಿರುವ 'ಅಪರಾಧ'ದ ... ಕಾನೂನು ಏನು ಹೇಳುತ್ತದೆ? ಕರ್ನಾಟಕದಲ್ಲಿ ...ರಕ್ಕಾಗಿ ದನ-ಎತ್ತುಗಳನ್ನು ಕೊಲ್ಲುವುದಕ್ಕೆ ...ರ್ಣ ನಿಷೇಧವೇನೂ ಇಲ್ಲ. 1964ರ ಕರ್ನಾಟಕ ...ಹತ್ಯಾ ನಿಷೇಧ ಕಾನೂನು (1966 ಮತ್ತು 1975ರ ...ಪಡಿಗಳೊಂದಿಗೆ) ಪ್ರಕಾರ ಕೆಲವು ಶರತ್ತುಗಳಿಗೆ ...ಟ್ಟು ಆಹಾರಕ್ಕಾಗಿ ದನ, ಎತ್ತುಗಳನ್ನು ಕಸಾಯಿ ...ದಬಹುದು. ಅವುಗಳಲ್ಲಿ ಮುಖ್ಯವಾದವು ಹೀಗಿವೆ.

1. ಆಹಾರಕ್ಕಾಗಿ ಕೊಲ್ಲಲಾಗುವ ದನ ಯಾ ಎತ್ತು ...ರಡು ವರ್ಷ ಪ್ರಾಯ ಮೀರಿದವಾಗಿರಬೇಕು; ...ಾದರೆ ಹಾಲು ಕರೆಯುವುದು ಮತ್ತು ಗರ್ಭಧಾರಣೆ ...ರಬೇಕು.


2. ಕಸಾಯಿಯಾಗುವ ಜಾನುವಾರುಗಳು ಆರೋಗ್ಯ...ರಬೇಕು.


3. ಕಸಾಯಿ ಮಾಡುವ ಸ್ಥಳ ಸ್ವಚ್ಛವಾಗಿರಬೇಕು.

4. ಜಾನುವಾರುಗಳನ್ನು ಸಾಗಿಸುವುದಕ್ಕೆಂದೇ ಇರುವ ...ಹನಗಳಲ್ಲಿ ಅವನ್ನು ಸಾಗಿಸಬೇಕು; ಲಾರಿ, ಟೆಂಪೋ ...ಂತಾದ ಸಿಕ್ಕಸಿಕ್ಕ ವಾಹನಗಳಲ್ಲಿ ಸಾಗಿಸುವಂತಿಲ್ಲ.

5. ಸಾಗಾಣಿಕೆಯ ವೇಳೆಯಲ್ಲಿ ಜಾನುವಾರುಗಳಿಗೆ ...ೆ ಆಗಕೂಡದು.

ಈ ಶರತ್ತುಗಳಿಗೆ ಅನುಗುಣವಾಗಿ ಮತ್ತು ಗ್ರಾಮ ಪಂಚಾಯಿತಿ, ನಗರಸಭೆ ಮುಂತಾದ ಸ್ಥಳೀಯ ಆಡಳಿತದ ಅನುಮತಿ ಪಡೆದು ಗೋ ಸಾಗಾಣಿಕೆ ಮತ್ತು ಮಾಂಸದ ವ್ಯವಹಾರವನ್ನು ಮಾಡಬಹುದಾಗಿದೆ. ಈ ಕಾನೂನು ಮೇಲುನೋಟಕ್ಕೆ ಒಂದು ಸದುದ್ದೇಶದ ಸರಳ ಕಾನೂನು ಎಂಬಂತೆ ಕಂಡರೂ ಅನುಷ್ಠಾನದಲ್ಲಿ ಮಾತ್ರ 'ಕಾನೂನು





ಕತ್ತೆ' ಎಂಬ ನಾಣ್ಣುಡಿಗೆ ತಕ್ಕಂತೆಯೇ ಇದೆ.

ಮಾಂಸಕ್ಕಾಗಿ ಕಸಾಯಿ ಮಾಡುವ ಜಾನುವಾರುಗಳಿಗೆ 12 ವರ್ಷ ಪ್ರಾಯವಾಗಿದೆ ಮತ್ತು ಅವು ಆರೋಗ್ಯವಾಗಿವೆ ಎಂದು ಪಶುವೈದ್ಯರು ಮಾತ್ರ ದೃಢೀಕರಿಸಬಲ್ಲರು. ಇವನ್ನು ಮಾರಾಟ ಮಾಡುವವರು, ಹಳ್ಳಿಹಳ್ಳಿಗಳಲ್ಲಿ ಈ ಪಶುವೈದ್ಯರು ಎಲ್ಲಿದ್ದಾರೆ ಎಂದು ಹುಡುಕಿಕೊಂಡು ಹೋಗುವುದು ಶಕ್ಯವೆ? ಅದೂ ಅಲ್ಲದೆ ಹಾಲಿಗಾಗಿ ದನಗಳನ್ನು ಸಾಕುವವರು ಸಾಮಾನ್ಯವಾಗಿ ಅವು ಹೆಣ್ಣು ಕರು ಹಾಕಿದರೆ ಮಾತ್ರ ಆ ಕರುಗಳನ್ನು ಸಾಕುತ್ತಾರೆ. ಆದರೆ ದನಗಳು ಹೆಚ್ಚಾಗಿ ಈಯುವುದು ಗಂಡು ಕರುಗಳನ್ನೇ. ಗಂಡು ಕರುಗಳನ್ನು ಯಾರೂ ಖಾಯಸು ಮಾಡುವುದಿಲ್ಲ, ಅವಕ್ಕೆ ಮೂರು ನಾಲ್ಕು ತಿಂಗಳಾಗುವಾಗಲೇ ಮಾರಿ ಬಿಡುತ್ತಾರೆ. ಆದರೆ ಕರ್ನಾಟಕದ ಕಾನೂನು ಈ ಅಂಶವನ್ನು ಗಮನಿಸುವುದೇ ಇಲ್ಲ, ಅಧೂ ಅಲ್ಲದೆ ಈ ಕಾನೂನಿನ ಅನುಷ್ಠಾನದಲ್ಲಿ ಸಾಗಾಣಿಕೆಯ ವಾಹನಗಳಿಗೆ ಸಂಬಂಧಿಸಿದ ಹಾಗೆ ಅನೇಕ ಸಮಸ್ಯೆಗಳಿವೆ. ಜಾನುವಾರುಗಳೇ ಸ್ವತಃ ಕೋರ್ಟು ಮುಂದೆ ಸಾಕ್ಷಿ ಹೇಳುವಂತಾದರೆ ಮಾತ್ರ ಇವು ಪರಿಹಾರವಾಗಬಹುದು! ಆದರೆ ಅದು ಹೇಗೂ ಇರಲಿ, ಕಾನೂನು ಎಂದ ಮೇಲೆ ಪ್ರಜೆಗಳು ಅದನ್ನು ಪಾಲಿಸಬೇಕು, ಪ್ರಜೆಗಳು ಪಾಲಿಸದೆ ಇದ್ದರೆ ಸರ್ಕಾರ ತನ್ನ ದಂಡ ಶಕ್ತಿಯನ್ನು ಬಳಸಿ ಅದನ್ನು ಜಾರಿಗೊಳಿಸಬೇಕು

ಕರಾವಳಿಯ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಈಗ ಗೋಹತ್ಯಾ ನಿಷೇದವನ್ನು ಜಾರಿಗೊಳಿಸುತ್ತಿರುವುದು ಸರ್ಕಾರವಲ್ಲ; ಭಜರಂಗದಳ ಮುಂತಾದ ಹಿಂದೂತ್ವದ ಸಂಘಟನೆಗಳು ರಾಡು, ತಲವಾರು, ಸೀಮೆಎಣ್ಣೆ ಮೊದಲಾದ ಹತ್ಯಾರಗಳಿಂದ, ಗೋಸಾಗಾಣಿಕೆ ದಾರರ ಮೇಲೆ ಹಲ್ಲೆ ನಡೆಸಿ, ಗೋಹತ್ಯ ನಿಷೇಧವನ್ನು ಒಂದು ಕಾನೂನು ಭಂಗದ ಚಳವಳಿಯನ್ನಾಗಿ ಮಾರ್ಪಡಿಸಿವೆ. ಈ ಚಳವಳಿಗೆ ಬೆಂಬಲ ನೀಡುತ್ತಿರುವ ಉಡುಪಿಯ ಮಠಾಧೀಶರುಗಳಿಗೆ ದನಗಳ ಮೇಲೆ ಇರುವಷ್ಟು ಕಾಳಜಿ ಜನಗಳ ಬಗ್ಗೆ ಇಲ್ಲ, ಇವರಿಗೆ ಗೋಮಾಂಸ ಮಾರಾಟವನ್ನೇ ಒಂದು ಉದ್ಯೋಗ ಮಾಡಿಕೊಂಡಿರುವವರ ಕಷ್ಟವೂ ಗೊತ್ತಿಲ್ಲ; ಜಾನುವಾರುಗಳನ್ನು ಹಾಲಿಗಾಗಿ ಅಥವಾ ಬೇಸಾಯದ ಕೆಲಸಗಳಿಗೆಂದು ಸಾಕಿಕೊಂಡವರ ಕಷ್ಟಗಳೂ ಗೊತ್ತಿಲ್ಲ.

ದನಗಳು ಹಾಲು ಕರೆಯುವುದನ್ನು ನಿಲ್ಲಿಸಿದ ಮೇಲೆ ಅಥವಾ ಎತ್ತುಗಳು ಮುದಿಯಾದ ಮೇಲೆ, ಅವುಗಳನ್ನು ಮಾರದೆ ಬಡರೈತರಿಗೆ ಬೇರೆ ದಾರಿಯೇ ಇಲ್ಲ, ರಾಜ್ಯದ ಇತರ ಕಡೆಗಳಲ್ಲಿ ಇರುವಂತೆ ಕರಾವಳಿಯಲ್ಲೂ ಇಂತಹ ಜಾನುವಾರುಗಳನ್ನು ಕ್ರಯಕ್ಕೆ ತೆಗೆದುಕೊಂಡು ಮತ್ತೆ ಮಾರುವ ದಲ್ಲಾಳಿ ವೃತ್ತಿಯನ್ನೇ ಒಂದು ಉಪ ಉದ್ಯೋಗವನ್ನಾಗಿ ಮಾಡಿಕೊಂಡವರಿದ್ದಾರೆ. ಇವರನ್ನು ಇಲ್ಲಿ "ಪೈರಿನವರು" ಎಂದು ಕರೆಯುತ್ತಾರೆ. ಇದು ಅನಾದಿಯಿಂದಲೂ ನಡೆದುಕೊಂಡು ಬಂದಿರುವ ಕಸುಬು ಎನ್ನುವುದಕ್ಕೆ ಈ ಶಬ್ದವೇ ಸಾಕ್ಷಿ.

ಅದೂ ಅಲ್ಲದೆ ಈ ಕಸುಬು ಮಾಡುವ ಎಲ್ಲರೂ ಕೆಳಜಾತಿಗಳ ಹಿಂದೂಗಳು. ಹಾಗಾಗಿ ಮಾಂಸಕ್ಕೆಂದು ದನ, ಎತ್ತುಗಳನ್ನು ಮಾರುವುದು, ಕೊಳ್ಳುವುದು, ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸುವುದು—ಇವು ಈ ಸಮಾಜ ಕಂಡು ಕೇಳಿ ಅರಿಯದ ಪಾಪಕೃತ್ಯಗಳು ಎಂಬಂತೆ ಈ ಮಠಾಧೀಶರುಗಳು ವಾದಿಸುವುದು ಶುದ್ಧ ಮೂರ್ಖತನ. ಈ ದಂಧೆ ಮುಸ್ಲಿಮರು ಮಾತ್ರ ಮಾಡುತ್ತಿರುವಂತಹದ್ದೂ ಅಲ್ಲ.

ಗೋಹತ್ಯೆಗೆ ಸಂಬಂಧಿಸಿದ ಹಾಗೆ ಕರಾವಳಿಯಲ್ಲಿ ಅತ್ಯಂತ ಹಿಂಸ್ರವೂ, ಅಸಂಗತವೂ ಆಗಿರುವ ಪರಿಸ್ಥಿತಿಯೊಂದು ನಿರ್ಮಾಣವಾಗಿದೆ. ಪಾಪಂಜೆಯಲ್ಲಿ ಹಲ್ಲೆಗೊಳಗಾದ ಬಶೀರ್, ಅಸೀಫ್ ಮತ್ತು ಅನ್ವರ್‌ರಿಗೆ ಗೋಮಾಂಸದ ವ್ಯಾಪಾರ ಒಂದು ಉದ್ಯೋಗ. ಹೈಸ್ಕೂಲ್ ಶಿಕ್ಷಣ ಕೂಡ ಸರಿಯಾಗಿ ಮುಗಿಸದ ಅವರಿಗೆ ಬೇರೆ ಯಾವ ಉದ್ಯೋಗ ಸಿಗುವುದೂ ಇಲ್ಲ, ಆದರೆ ಭಜರಂಗದಳದವರಿಗೆ ಗೋಹತ್ಯೆ ಹಿಂದೂ ಧರ್ಮಕ್ಕೇ ಮಾಡಿದ ಅಪಚಾರ. ಸರ್ಕಾರದ ಪ್ರಕಾರ ಅದು ತನ್ನ ಕಾನೂನಿಗೆ ಅನುಗುಣವಾಗಿದ್ದರೆ ಅಪರಾಧವಲ್ಲ.

ಹಿಂದೆ ಕರ್ನಾಟಕದಲ್ಲಿ ಮದ್ಯಪಾನ ನಿಷೇಧ ಜಾರಿಗೆ ಬಂದಾಗಲೂ ಇಂತಹ ಒಂದು ಅಸಂಗತ ಸ್ಥಿತಿ ನಿರ್ಮಾಣವಾಗಿತ್ತು. ಈ ರಾಜ್ಯದಲ್ಲಿ ಹೆಂಡ ಸಾರಾಯಿ ತಯಾರಿಸುವುದೇ ಪರಂಪರಾಗತ ಕಸುಬಾಗಿರುವ ಜನಗಳಿದ್ದಾರೆ. ಮದ್ಯಪಾನ ನಿಷೇಧದಿಂದಾಗಿ ಇವರೆಲ್ಲ ಒಮ್ಮಿಂದೊಮ್ಮೆಗೇ ಕ್ರಿಮಿನಲ್‌ಗಳಾಗಿ ಬಿಟ್ಟರು! ಈಗ ಈ ಬಶೀರ್, ಅಸೀಫ್ ಮತ್ತು ಅನ್ವರ್‌ನಂತಹ ಅಮಾಯಕರೂ ಹೀಗೆಯೇ "ಆರೋಪಿ"ಗಳಾಗಿದ್ದಾರೆ. ಹಿಂದೂತ್ವದ ಹುಸಿ ಧಾರ್ಮಿಕತೆ ಇವರ ಮೇಲೆ ಅಮಾನುಷ ಹಲ್ಲೆಗಳಿಗೂ ಕಾರಣವಾಗುತ್ತಿದೆ. ಇದು ಪ್ರಜೆಗಳ ಪೌರಹಕ್ಕುಗಳ ಮೇಲೆ ನಡೆಯುತ್ತಿರುವ ಹಲ್ಲೆ ಎಂಬ ಅರಿವು ನಮ್ಮ ಸುಶಿಕ್ಷಿತರಿಗೂ ಇದ್ದಂತಿಲ್ಲ.

–ಜಿ. ರಾಜಶೇಖರ್, ಕೆ.ಫಣಿರಾಜ್

ಅಧ್ವಾನಗೊಂಡಿರುವ ನಗರಸಭೆ

...ವರ್ಷಕ್ಕೊಬ್ಬರಂತೆ ದಾವಣಗೆರೆ ನಗರಸಭೆಯ ...ಕ್ಷಗಿರಿಯನ್ನು ಹಂಚಿಕೊಳ್ಳಲಾಗುತ್ತಿದೆ. ಮಾಜಿ ಅಧ್ಯಕ್ಷ ... ಬಸವರಾಜ ತನ್ನನ್ನು ಅಧ್ಯಕ್ಷಗಾದಿಗೇರಿಸಿದ ಧಣಿ ...ನೂರು ಶಿವಶಂಕರಪ್ಪ ಮತ್ತು ಈತನ ಮಗ ...ಕಾರ್ಜುನನಿಗೆ, ಮಾಜಿ ಸಚಿವ ವೈ. ನಾಗಪ್ಪ ಹಾಗೂ ...ನಟ ಅಂಬರೀಶ್‌ಗೆ ನಗರಸಭೆಯ ವತಿಯಿಂದ 25 ... ಲಕ್ಷ ಖರ್ಚು ಮಾಡಿ ಬೆಳ್ಳಿ ಕಿರೀಟಗಳನ್ನು ತೊಡಿಸಿ ...ನಿಸಿದ್ದಲ್ಲದೆ, ಕಳಪೆ ಕಾಮಗಾರಿ, ಸುಳ್ಳು ಕಾಮಗಾರಿ ...ೂ ನಕಲಿ ಬಿಲ್ಲುಗಳನ್ನು ಪಾಸು ಮಾಡಿಕೊಂಡಿರುವ ...ಚಾರದ ಕಂತೆಗಳೇ ಇವೆ.

...ಹಾಲಿ ನಗರ ಸಭಾಧ್ಯಕ್ಷ ಶಿವನಳ್ಳಿ ರಮೇಶ 'ಪರವಾಗಿಲ್ಲ' ...ಾಗುತ್ತಿದ್ದರೂ ದಿನನಿತ್ಯ ನಡೆಯುತ್ತಿರುವ ...ವಹಾರಗಳನ್ನು ಸಹಿಸಿಕೊಂಡಿರುವುದೇಕೆ? ಈತ ನಗರ ...ಯನ್ನು ಅಧ್ವಾನವೆಬ್ಬಿಸಿರುವ, ಎಬ್ಬಿಸುತ್ತಿರುವ ...ಚಾರಿಗಳನ್ನು ಹೊರಗೆಳೆದು ನಿಯತ್ತನ್ನು ...ಪಿಸಬೇಕಾಗಿದೆ. ಇಲ್ಲದಿದ್ದರೆ ಆರೇಳು ತಿಂಗಳಲ್ಲಿ ...ಕ್ಷಗಿರಿಯ ಆಯುಷ್ಯ ಮುಗಿದು ಹೋಗಿ ಭ್ರಷ್ಟಾಚಾರದ ...ಗೆಯು ಈತನ ಮೈಗೂ ಅಂಟಿಕೊಳ್ಳುವುದರಲ್ಲಿ ...ಯವಿಲ್ಲ.

ಜಿಲ್ಲಾಧಿಕಾರಿ ದ್ಯಾಬೇರಿ ಏನು ಮಾಡುತ್ತಿದ್ದಾನೆ?

...ಈ ಹಿಂದೆ ನಗರಸಭೆಯ ಎಇಇ ಲಿಂಗನಗೌಡ ...ಪ್ಪಾರ ನಕಲಿ ಬಿಲ್ಲುಗಳನ್ನು ಪಾಸು ಮಾಡುತ್ತಿರುವುದನ್ನು ...ನಿಸಿ ಇವನಿಂದ ಇಡೀ ಚೆಕ್ಕು ಪುಸ್ತಕವನ್ನೇ ...ಕೊಂಡಿದ್ದ ದ್ಯಾಬೇರಿ ಈಗೇನು ಮಾಡುತ್ತಿದ್ದಾನೆ? ...ಚಾರದಿಂದ ತುಂಬಿ ತುಳುಕುತ್ತಿರುವ ನಗರಸಭೆಯನ್ನು ...ಬಿಸ್ತಸಲ್ಲಿಸುವುದು ಈತನ ಜವಾಬ್ದಾರಿಯಲ್ಲವೆ? ಕಳಪೆ, ...ಳ್ಳು ಕಾಮಗಾರಿ ಹಾಗೂ ನಕಲಿ ಬಿಲ್ಲುಗಳ ...ವಹಾರಗಳು ದಾಖಲೆ ಸಮೇತ ಬಹಿರಂಗ ...ವರಿಗೂ ಈ ಕೆಲಸವನ್ನು ಮಾಡಬಾರದೆಂದಿದ್ದರೆ ...ದಿನ ದಿನಗಳಲ್ಲಿ ಅದೂ ಆಗುತ್ತದೆ.

...ಜಿಲ್ಲೆಯ ಲೋಕಾಯುಕ್ತ ದಳದವರಿಗೆ ಕಣ್ಣುಗಳು ...ರೆ ಬಂದು, ಕಿವಿಗಳೂ ಕೂಡ ...ಕೊಂಡಿರುವುದರಿಂದ ಲೋಕಾಯುಕ್ತ ವೆಂಕಟಾಚಲ ...ು ಪುರಸೊತ್ತು ಮಾಡಿಕೊಂಡು ದಾವಣಗೆರೆ ...ಲ್ಲೆಯ ಅಧಿಕಾರಿಗಳ ತಲೆಗೆ ಮೊಟಕಿ ಮಾಡಿ ...ನ್ನು ಹತೋಟಿಗೆ ತರುವರೆ? ಕಾದು ನೋಡೋಣ.

–ಚಂದ್ರಶೇಖರ ತೋರಣಘಟ್ಟ

ದಲಿತ ಹುಡುಗಿಯ ಸಾವಿನ ಹಿಂದೆ ಜಾರಕಿಹೊಳಿ ಶಿಷ್ಯ ಲಂಪಟ ವೆಂಕ!

ಹದಿನಾರು ವರ್ಷದ ದಲಿತ ಯುವತಿ ಭಾರತಿ ಮಾದರ ಕೊಳಕನೊಬ್ಬನನ್ನು ಪ್ರೇಮಿಸಿ, ವಂಚನೆಗೊಳಗಾಗಿ ಸಾವಿಗೆ ಶರಣಾಗಿದ್ದಾಳೆ. ಅವಳ ಸಾವಿಗೆ ಕಾರಣಕರ್ತನಾದವನು ರಾಮದುರ್ಗ ತಾಲ್ಲೂಕು ಎ.ಬಿ.ಪಿ.ಜೆ.ಡಿ.ಯ ಅಧ್ಯಕ್ಷ! ಎ.ಬಿ.ಪಿ.ಜೆ.ಡಿ.ಯ ಪ್ರಮುಖ ನಾಯಕರಲ್ಲೊಬ್ಬರಾದ ಸತೀಶ್ ಜಾರಕಿಹೊಳಿಯ ಬಲಗೈ ಭಂಟ!! ಇಷ್ಟು ಸಾಕಲ್ಲವೆ ಪೋಲೀಸಪ್ಪಗಳಿಗೆ ಈ ಕೇಸನ್ನು ಕೊಂದು ಹಾಕಲು... ಇಲ್ಲೊಬ್ಬ ಪೋಲೀಸಮ್ಮನೂ ಅದನ್ನೇ ಮಾಡುತ್ತಿದ್ದಾಳೆ. ಚಿಕ್ಕೋಡಿಯ ಸಂಸದ ರಮೇಶ್ ಜಿಗಜಿಣಗಿ ಮೇಲ್ಜಾತಿಗಳ ವಠಾರದಲ್ಲಿ ಸೌಖ್ಯವಾಗಿರುವಾಗ ದಲಿತರ ಪಾಡು ಕೇಳುವವರಾರಿಲ್ಲ? ಕೇಳಬೇಕಾದ ದಲಿತ ಸಂಘಟನೆಗಳು ಅದ್ಯಾವ ಸರ್ಕಾರಿ ಕಚೇರಿ ಮುಂದೆ ಧರಣಿ ನಾಟಕ ನಡೆಸುತ್ತ ಕುಳಿತಿವೆಯೋ ಯಾರು ಬಲ್ಲರು?



ವೆಂಕನಗೌಡ

ಪ್ರೇಮದ ಹೆಸರಲ್ಲಿ ವಂಚನೆ!

ಈ ವರದಿಯ ವಿಲನ್ ವೆಂಕನಗೌಡ ಪಾಟೀಲ್ ರಾಮದುರ್ಗ ತಾಲ್ಲೂಕಿನ ಎಬಿಪಿಜೆಡಿ ಅಧ್ಯಕ್ಷ ಎನ್ನುವುದನ್ನು ಬಿಟ್ಟರೆ ಉಳಿದಂತೆ ಇವನೊಬ್ಬ ಬಿಡಾಡಿ ದನ. ರಾಮದುರ್ಗ ತಾಲೂಕಿನ ನರಸಾಪುರ ಗ್ರಾಮದ ಈ ಕಾಮಪಿಶಾಚಿಯ ಕಚ್ಚೆ ಹರುಕತನಕ್ಕೆ ಆತನ ಪತ್ನಿ ರೋಧಿಸುತ್ತ ಬದುಕು ಸವೆಸುವಂತಾಗಿದೆ.

ಇಂತಹ ಕಾಮುಕನ 'ಪ್ರೇಮಪಾಶ'ದಲ್ಲಿ ಬಿದ್ದ 16ರ ಹರೆಯದ ಹೈಸ್ಕೂಲ್ ಹುಡುಗಿ ಭಾರತಿ ಮಾದರ ತನ್ನ ಜೀವವನ್ನೇ ಕಳೆದುಕೊಳ್ಳಬೇಕಾಗಿತು.

35 ವಯಸ್ಸಿನ ಮುಠ್ಠಾಳ ವೆಂಕ ಅಮಾಯಕ ದಲಿತ ಹುಡುಗಿ ಭಾರತಿಯ ಮನೆಯಲ್ಲೇ ರಾತ್ರಿ ಕಳೆಯತೊಡಗಿದ. ಅಷ್ಟೊತ್ತಿಗೆ ವೆಂಕ ತನಗೆ ಬಾಳು ಕೊಡುತ್ತಾನೆ ಎಂದೇ ನಂಬಿತ್ತು ಈ ಪುಟ್ಟ ಭಾರತಿ. ಸುದ್ದಿ ಊರ ತುಂಬಾ ಹಬ್ಬಿ ವೆಂಕನ ಪತ್ನಿ ಮಂಜುಳಾಗೂ ತಲುಪಿ ಮನೆಯಲ್ಲಿ ಕದನವೇರ್ಪಟ್ಟಿದೆ. 16.1.2006 ರಂದು ಮಂಜುಳಾಗೆ ಭಾರತಿ ಬರೆದ ಪತ್ರ ಸಿಕ್ಕಿದೆ. ಮದುವೆಯಾದಾಗಿನಿಂದ ಕಣ್ಣೀರಲ್ಲೇ ಕಾಲ ಹಾಕಿರುವ ಮಂಜುಳಾಗೆ ಆವತ್ತು ತಲೆ ಸಿಡಿದಂತಾಗಿದೆ. ತನ್ನ ಗಂಡನಂತೂ ಬುದ್ಧಿಗೇಡಿ ಬಿಡ್ತಾನೆ, ಪಾಪ ಆ ಹುಡುಗಿಗಾದರೂ ಬುದ್ಧಿ ಬೇಡವೇ? ಎಂದು ಯೋಚಿಸಿದ ಮಂಜುಳಾ ಅಂದೇ ನೇರವಾಗಿ ಬಸವೇಶ್ವರ ಶಾಲೆಗೆ ತೆರಳಿ ಭಾರತಿಯನ್ನು ಕ್ಲಾಸ್ ರೂಮ್‌ನಿಂದ ಹೊರಕರೆದು ಒಂದಿಷ್ಟು ಬಯ್ದಿದ್ದಾಳೆ; ಒಂದಿಷ್ಟು ಬುದ್ಧಿಯನ್ನೂ ಹೇಳಿದ್ದಾಳೆ. ಆ ಹೊತ್ತಿನಲ್ಲಿ ಮಂಜುಳಾಗೆ ಏನನ್ನಿಸಿತೊ? ತನ್ನ ಕೊರಳಲ್ಲಿನ ಮಾಂಗಲ್ಯ ಸರ ತೆಗೆದು ಭಾರತಿಯ ಕೊರಳಿಗೆ ಹಾಕಿದವಳೇ ಸೀದಾ ಮನೆ ಕಡೆ ಬಂದಿದ್ದಾಳೆ.



ಎಲ್ಲರೆದುರು ಅವಮಾನಿತಳಾದ ಭಾರತಿಗೆ ದಿಕ್ಕು ತೋಚದಂತಾಗಿ, ವೆಂಕನಿಗೆ ಫೋನ್ ಮಾಡಿದ್ದಾಳೆ. ಆಮೇಲೆ ಭೇಟಿ ಆಗುವುದಾಗಿ ಹೇಳಿದ ವೆಂಕ, ನಂತರ ಫೋನ್ ಸ್ವಿಚ್ ಆಫ್ ಮಾಡಿಬಿಟ್ಟಿದ್ದಾನೆ. ರಾತ್ರಿವರೆಗೂ ವೆಂಕನಿಗೆ ಕಾಯ್ದು ತೊಳಲಾಡಿದ ಭಾರತಿ ವೆಂಕನ ಸ್ನೇಹಿತರಿಗೆ ಹೇಳಿಕಳಿಸಿದ್ದಾಳೆ. ಅವನು ಬಂದ ಮೇಲೆ ಒಂದು ಫೈನಲ್ ನಿರ್ಣಯ ಆಗಿಹೋಗಲಿ ಎಂದು ಕಾಯುತ್ತಾ ಕುಳಿತಿದ್ದಾಳೆ. ಬರುವುದಾಗಿ ಬುರುಡೆ ಬಿಟ್ಟ ವೆಂಕ ಬರದೇ ಹೋದಾಗ



ಸೋನ್ಯಾ ಸಾರಂಗ ಜಾರಕಿಹೊಳಿ ಜಿಗಜಿಣಗಿ

ವಿಷ ಸೇವಿಸುವ ದಡ್ಡತನ ತೋರಿಬಿಟ್ಟಳು ಭಾರತಿ. ಜನ ಸೇರಿ ಸರ್ಕಾರಿ ಆಸ್ಪತ್ರೆಗೆ ಸೇರಿಸಿದ್ದಾರೆ. ಆ ಹೊತ್ತಿಗೆ ಭಾರತಿ ಉಳಿದರೆ ಮುಂದೆ ಕಷ್ಟ ಎಂದರಿತ ವೆಂಕ ಆಸ್ಪತ್ರೆಯವರ ಮೇಲೆ ಒತ್ತಡ ತಂದು ಸರಿಯಾದ ಚಿಕಿತ್ಸೆ ಸಿಗದಂತೆ ಮಾಡಿದ್ದಾನೆ.

ಭಾರತಿ ವಿಷ ಸೇವಿಸುವ ಮೊದಲು ಅವಳ ಮನೆ [illegible]

ವೆಂಕನೇ ಬಂದು ವಿಷ ಪ್ರಾಶನ ಮಾಡಿಸಿದನೆ? ಎಂಬ ಸಂಶಯವೂ ಇದೆ.

ಒಟ್ಟಿನಲ್ಲಿ ವೆಂಕನಗೌಡ ಎಂಬ ಹರಾಮಿಯ ತೆವಲಿಗೆ ದಲಿತ ಹುಡುಗಿಯೊಬ್ಬಳ ಬಲಿಯಾಗಿದೆ. ಸಾಯುವ ಮುನ್ನ ಭಾರತಿಯ ಹೇಳಿಕೆಯನ್ನು ಪಡೆದಿಲ್ಲ. ಭಾರತಿ ಮನೆಯವರ ದೂರನ್ನು ಸ್ವೀಕರಿಸಿದ ಸಬ್‌ಇನ್ಸ್‌ಪೆಕ್ಟರ್ ಭೋಜಣ್ಣವರ, ದೂರು ಕೊಡಲು ಬಂದವರಿಗೇ ಧಮಕಿ ಹಾಕಿದ್ದಾನೆ. ಚಿಕ್ಕೋಡಿಯ ಎಸ್.ಪಿ. ಸೋನ್ಯಾ ನಾರಂಗ ಎಂಬ ಹೆಣ್ಣು ಮಗಳಿಂದಲೂ ಭಾರತಿ ಕುಟುಂಬಕ್ಕೆ ನ್ಯಾಯ ಸಿಗದಂತಾಗಿದೆ.

ಡಿವೈಎಸ್‌ಪಿ ನಿಂಬಾಳ್ಕರ್, ಸರ್ಕಲ್ ಇನ್ಸ್‌ಪೆಕ್ಟರ್ ಬೆಳವಡಿಗಳು ಹೇಳಿದಂತೆ ಬರೆದುಕೊಟ್ಟರೆ ನಿಮ್ಮ ಕುಟುಂಬಕ್ಕೆ 3 ಲಕ್ಷ ರೂಪಾಯಿ ಕೊಡಿಸುತ್ತೇವೆ ಎಂದು ಎಸ್.ಪಿ. ಸೋನ್ಯಾ 'ದಲ್ಲಾಳಿ' ಕೆಲಸ ಮಾಡಿದ್ದಾಳೆ.

ಇವತ್ತಿಗೂ ಆರೋಪಿ ರಾಜಾರೋಷವಾಗಿ ತಿರುಗುತ್ತಿದ್ದಾನೆ. ಭಾರತಿ ಕುಟುಂಬಕ್ಕೆ ನಯಾಪೈಸೆ ಪರಿಹಾರವೂ ಇಲ್ಲ, ದಲಿತ ಎಡಗೈ ಪಂಗಡದ ನಾಯಕರಾದ ಮಹಾವೀರ ಐಹೊಳೆ, ಪ್ರಥಮ ಗುಡುಜೆಯಂತಹವರಿಗೆ ಭಾರತಿ ಕುಟುಂಬದ ನೋವು ಅರ್ಥವಾಗುವುದಿಲ್ಲ.

ದಲಿತ ಎಡಗೈ ಗುಂಪಿಗೆ ಸೇರಿದ ಚಿಕ್ಕೋಡಿ ಸಂಸದ ರಮೇಶ್ ಜಿಗಜಿಣಗಿ ಎಲ್ಲ ಗೊತ್ತಾದ ಮೇಲೂ ಸುಮ್ಮನೆ ಕುಳಿತಿರುವುದು ನಾಚಿಕೆಗೇಡು.

ಮೊದಲು ಕೆಎಸ್‌ಆರ್‌ಟಿಸಿಯಲ್ಲಿ ಕಂಡಕ್ಟರ್ ಆಗಿದ್ದ ವೆಂಕನಗೌಡ ಅಲ್ಲೂ ಲಫಡಾಗಳನ್ನು ಮಾಡಿ ಹೊರಬಂದಿದ್ದ. ವೆಂಕ ಮತ್ತವನ ಸಹೋದರ ಬಾಳನಗೌಡ ಇಬ್ಬರೂ ಅಧಿಕಾರಿಗಳಿಂದ ಪರ್ಸಂಟೇಜ್ ತಿನ್ನುತ್ತಾ, ಬಡವರ ಭೂಮಿ ನುಂಗುತ್ತಾ ಕೊಬ್ಬಿ ಹೋಗಿದ್ದಾರೆ.

[illegible] ಹಲ್ಕಾ ಕೆಲಸ ಮಾಡುತ್ತಿರುವ ಇಂತಹವರಿಗೆ ಆಶ್ರಯ ನೀಡುವುದರಿಂದ ಸತೀಶನ ಮರ್ಯಾದೆ ಮೂರಾಬಟ್ಟೆ [illegible]

ಸಂಸದ ಜಿಗಜಿಣಗಿ, ಎಬಿಪಿಜೆಡಿ ನಾಯಕ ಸತೀಶ್ ಭಾರತಿ ಕುಟುಂಬಕ್ಕೆ ನ್ಯಾಯ ಕೊಡಿಸುವರೆ?

–[illegible]

ನಾವು ಏನನ್ನೇ ಮಾಡಬೇಕಾಗಿರಲಿ, ದೀರ್ಘ ಕಾಲ ಅದಕ್ಕೆ ಅಂಟಿಕೊಂಡರೆ ಯಶಸ್ಸು ಸಿಗುವುದರಲ್ಲಿ ಸಂದೇಹವಿಲ್ಲ- ಹೆಲನ್ ಕೆಲರ್



ಕುವೆಂಪುಗೆ ಸಿಗದ ಕಥೆ

ಕತೆ

-ಸರ್ಜಾಶಂಕರ ಹರಳೀಮಠ

([illegible])

ನಾನು ಪಿ.ಯು.ಸಿ.ಗೆ ಬರುವಾಗ ಸಣ್ಣಕ್ಕ ಡಿಗ್ರಿಗೆ ಹೋಗುತ್ತಿದ್ದಳು. ಸಣ್ಣಕ್ಕನ ವಯಸ್ಸಿನ ಜರೀನಾ, ನನ್ನ ಓರಗೆಯ ಸಫಿಯಾರನ್ನು ಹತ್ತನೇ ತರಗತಿಗೆ ಶಾಲೆ ಬಿಡಿಸಿ ಜರೀನಾಳಿಗೆ ಗಂಡು ನೋಡಲು ತೊಡಗಿದ್ದರು. ಆಗ ಅವರು ನಮ್ಮೂರಿಗೆ ಬಂದು ವಾಪಸ್ಸು ಮಂಗಳೂರಿಗೆ ಹೋಗುವಾಗ ನಮಗೆ ಅವರ ವಿಳಾಸ ನೀಡಿ ಊರಿಗೆ ಬರಲೇಬೇಕು ಎಂದು ಒತ್ತಾಯ ಮಾಡಿ ಹೋಗುವರು. ಸಣ್ಣಕ್ಕ ಜರೀನಾಳ ವಿಳಾಸ ವನ್ನೂ ಫೋನ್ ನಂಬರನ್ನೂ ಬರೆದು ಕೊಳ್ಳುವಳು. ನಾನು ಡಿಗ್ರಿಗೆ ಬರುವಾಗ ನಜೀರ್ ಸಾಬರ ಕುಟುಂಬ ಮಂಗಳೂರಿನಿಂದ ಸಾಗರಕ್ಕೆ ಬಂದು ನೆಲೆ ನಿಂತಿತು. ಬಣ್ಣದ ಅಡಿಕೆ ಮುಗಿದ ನಂತರ ಸಾರು ಅಕ್ಕಿ ವ್ಯಾಪಾರ ಮಾಡಲು ನಿರ್ಧರಿಸಿದ್ದರು. ಅಷ್ಟರಲ್ಲಿ ಜರೀನಾಳಿಗೆ ಶಿವಮೊಗ್ಗದ ಗುಜರಿ ವ್ಯಾಪಾರಿ ರಫೀಕ್‌ನೊಂದಿಗೆ ಮದುವೆ ಯಾಗಿತ್ತು. ಮಗಳ ಮನೆಗೂ ಹತ್ತಿರವಾಗು ತ್ತದೆಂಬ ಎಣಿಕೆಯು ಸಾಬರು ಸಾಗರದಲ್ಲಿ ಮನೆ ಮಾಡುವ ಹಿಂದಿತ್ತೆಂದು ಕಾಣುತ್ತದೆ. ಮಂಗಳೂರಿನಿಂದ ಸಾಗರಕ್ಕೆ ಮನೆ ಬದಲಾಯಿಸುವ ಕೆಲಸಗಳಲ್ಲಿ ಬೀಬಮ್ಮ ಆ ವರ್ಷ ಅಡಿಕೆ ವ್ಯಾಪಾರಕ್ಕೆ ಬಂದ ಸಾಬರೊಂದಿಗೆ ಬರಲಿಲ್ಲ.

ನಾವು ಕಾಲೇಜಿಗೆ ಹೋಗುತ್ತಿದ್ದರೂ ಪ್ರತಿ ದಿನ ಸಂಜೆ ಮತ್ತು ರಜೆಯ ದಿನ ಚಾಲಿ ಅಡಿಕೆ ಸುಲಿಯುತ್ತಿದ್ದೆವು. ಆ ವರ್ಷ ಸಾಬರ ಮನೆಯಲ್ಲಿ ಅಡಿಕೆ ಚಾಲಿ ಸುಲಿದ ಬಾಬ್ತು ನನಗೆ ಇನ್ನೂರು ರೂಪಾಯಿ ಬಂದಿದ್ದರೆ ಸಣ್ಣಕ್ಕ ಮತ್ತು ಸಂಧ್ಯಾಳಿಗೆ ನಾನ್ನೂರಕ್ಕಿಂತ ಜಾಸ್ತಿ ಬಂದಿತ್ತು. ಸಂಧ್ಯಾ ಮತ್ತು ನನ್ನ ಸ್ಕೂಲು ಕಾಲೇಜಿನ ಪ್ರವಾಸಕ್ಕೆ ಆಗ ಅಪ್ಪಯ್ಯನ ಬಳಿ ದುಡ್ಡು ಹೊಂದಿಸಲಾಗಿರಲಿಲ್ಲ. ಸಾಬರು ಚಾಲಿ ಅಡಿಕೆ ಸುಲಿತದ ದುಡ್ಡು ಕೊಟ್ಟು ಊರಿಗೆ ಹೋದ ನಂತರ ನಮ್ಮಿಬ್ಬರಿಗೂ ಎಲ್ಲಾದರೂ ಪಿಕ್‌ನಿಕ್ ಹೋಗಿ ಬರಬೇಕು ಅನ್ನಿಸಿತು. ನನ್ನ ಕಾಲೇಜು ಗೆಳೆಯರು ಜೋಗ್‌ಫಾಲ್ಸ್‌ಗೆ ಹೋಗಿ ಬಂದಿದ್ದರಿಂದ ನಾನು ಅಲ್ಲಿಗೆ ಹೋಗಿ ಬರಲೇಬೇಕೆಂದುಕೊಂಡಿದ್ದೆ. ಜೋಗ್‌ಫಾಲ್ಸ್‌ಗೆ ಹೋಗೋಣ ಅಂದಾಗ ಸಂಧ್ಯಾ ಖುಷಿಯಾದಳು. ಜೋಗ್‌ಗಾದರೆ ನಾನು ಬರುತ್ತೀನಿ ಎಂದು ಸಣ್ಣಕ್ಕನೂ ಹೊರಟಳು. ಶಂಕರ್ ಕಂಪನಿ ಬಸ್ಸಿನಲ್ಲಿ ತೀರ್ಥಹಳ್ಳಿಗೆ ಹೋಗಿ ಅಲ್ಲಿಂದ ಗುರುಶಕ್ತಿ ಬಸ್ಸಿನಲ್ಲಿ ಸಾಗರಕ್ಕೆ ಹೋದೆವು. ಸಾಗರದಲ್ಲಿ ಅರ್ಧಗಂಟೆ ಕಾದ ಬಳಿಕ ಜೋಗದ ಬಸ್ಸು ಸಿಕ್ಕಿತು. ನೂರಾರು ಕಡೆ ಬಸ್ಸು ನಿಂತು ಹೊರಟು ಜೋಗ ತಲುಪುವಾಗ ಆಗಲೇ ಮಧ್ಯಾಹ್ನ ಮೀರಿತ್ತು.

ಜೋಗ ಜಲಪಾತದಿಂದ ಧುಮುಕುವ ನೀರಿನಿಂದ ಸೃಷ್ಟಿಯಾದ ನೊರೆಯಲ್ಲಿ ಜಲಪಾತವೇ ಕಣ್ಮರೆಯಾಗಿ ಗಾಳಿ ಬೀಸದಾಗಲೊಮ್ಮೊಮ್ಮೆ ಕಾಣುವುದು. ಸ್ವಲ್ಪ ಹೊತ್ತು ನೋಡುತ್ತಿದ್ದಂತೆ ಜಲಪಾತದ ಥಂಡಿ ಗಾಳಿಯಿಂದ ಚಳಿಯಾಗಿ ಅಲ್ಲಿಯೇ ಇದ್ದ ಕ್ಯಾಂಟೀನ್‌ಗೆ ಹೋಗಿ ಕಾಫಿಗೆ ಆರ್ಡರ್ ಮಾಡಿ ಕುಳಿತೆವು. 'ಥೂ ಜಲಪಾತ ಕಾಣ್ತಾನೇ ಇಲ್ಲ' ಎಂದು ಸಂಧ್ಯಾ ಗೊಣಗುತ್ತ ಕಾಫಿ ಕುಡಿಯತೊಡಗಿದಳು. ಸಂಧ್ಯಾಳ ಮಾತು ಕೇಳಿದ ಕ್ಯಾಂಟೀನಿನ ಭಟ್ಟರು 'ನೀವು ಮೆಟ್ಟಿಲಿಳಿದು ಜೋಗದ ಗುಂಡಿಯ ತನಕವೂ ಹೋಗಬಹುದು. ಅಲ್ಲಿ ಇನ್ನೂ ಚೆನ್ನಾಗಿ ಕಾಣ್ತದೆ' ಎಂದರು. ಕಾಫಿ ಕುಡಿದ ನಾವು ವಾಚು ನೋಡಿ 'ಅರ್ಧ ಗಂಟೇಲಿ ವಾಪಸ್ಸು ಬರಬೇಕು, ಇಲ್ಲದಿದ್ರೆ ತೀರ್ಥಹಳ್ಳಿಯಿಂದ ಊರಿಗೆ ಬಸ್ಸು ಸಿಗೊಲ್ಲ' ಎಂದು ಪರಸ್ಪರ ಹೇಳಿಕೊಂಡು ಮೆಟ್ಟಲಿಳಿಯ ತೊಡಗಿದೆವು. ಮೆಟ್ಟಲಿಳಿಯುವಾಗ ಇಲ್ಲಿಯೇ ಹತ್ತಿರ ಸಿಕ್ಕಿತು ಎಂದು ಪ್ರತಿ ತಿರುವಿನಲ್ಲಿ ಅನಿಸುತ್ತಿದ್ದ ಜಲಪಾತದ ಗುಂಡಿ ತಲುಪಬೇಕಾದರೆ ಬಹಳ ಹೊತ್ತಾಯಿತು. ಹೇಗೂ ಬಂದಿದ್ದೀವಿ ನೋಡಿಕೊಂಡೇ ಹೋಗೋಣವೆಂದು ಸಮಯವನ್ನು ಮರೆತು ಜಲಪಾತದ ನೊರೆಯಲ್ಲಿ ಮಿಂದು ಬಿಟ್ಟೆವು. ವಾಪಸ್ಸು ತಿರುಗಿ ಬರುವಾಗ ನಾಲ್ಕಾರು ಮೆಟ್ಟಲು ಹತ್ತುವಾಗಲೇ ಕಾಲು ಗಂಟು ನೋವು ಶುರುವಾಗಿ ಅಲ್ಲಲ್ಲಿ ಕುಳಿತು ಮೇಲೆ ಬರುವಾಗ ಸಂಜೆ 5 ಗಂಟೆಯಾಗಿತ್ತು. ನಮ್ಮನ್ನು ಜೋಗದ ಗುಂಡಿಗೆ ಕಳಿಸಿದ ಕ್ಯಾಂಟೀನಿನವನ ಬಳಿಯೇ ಹೋಗಿ ಬಿಸಿ ಬಿಸಿ ಇಡ್ಲಿ ತಿಂದು ಸಾಗರಕ್ಕೆ ಬಸ್ಸಿನಲ್ಲಿ ಹೊರಟೆವು.

ಸಾಗರಕ್ಕೆ ಬಸ್ಸು ಹೋಗುವುದು ಅರ್ಧಗಂಟೆಗಿಂತ ಜಾಸ್ತಿಯಾಗುತ್ತದೆ. ಅಲ್ಲಿಂದ ತೀರ್ಥಹಳ್ಳಿಗೆ ಬಸ್ಸು ಸಿಕ್ಕಿದರೂ ತೀರ್ಥಹಳ್ಳಿಯಿಂದ ಊರಿಗೆ ಬಸ್ಸಿರುವುದಿಲ್ಲ. ಏನು ಮಾಡುವುದೆಂಬ ಚಿಂತೆ ನಮ್ಮನ್ನು ಕಾಡಿತು. ಹೀಗೆ ಚಿಂತಿಸುತ್ತಿರಬೇಕಾದರೆ ಸಂಧ್ಯಾಳಿಗೆ ಈಗ ಸಾಗರಕ್ಕೆ ಬಂದಿರುವ ನಜೀರ್ ಸಾಬರ ಕುಟುಂಬ ನೆನಪಾಯಿತು.

ಜೋಗದಲ್ಲಿ ತಿಂದ ಇಡ್ಲಿ ಯಾವಾಗಲೋ ಕರಗಿ ಸಾಗರದಲ್ಲಿ ಬಸ್ಸಿಳಿಯುವಾಗ ಹೊಟ್ಟೆ ಹಸಿವಿನಿಂದ ಥರಗುಟ್ಟುತ್ತಿತ್ತು. ಗಂಟೆ ಆಗಲೇ ಏಳಾಗಿದ್ದರಿಂದ ಬಸ್‌ಸ್ಟ್ಯಾಂಡ್ ಹೋಟೆಲ್‌ನಲ್ಲಿ ಊಟ ಮಾಡಿಯೇ ಸಾಬರ ಮನೆಯತ್ತ ಹೊರಟೆವು. ಅಡ್ರಸ್ ಗೊತ್ತಿರದಿದ್ದರೂ ಸಾಗರದ ಟಿಪ್ಪು ನಗರ ಎಂದು ನೆನಪಿತ್ತು. ಸಾಬರ ಮನೆ ಹುಡುಕುವುದು ಕಷ್ಟವೇನೂ ಆಗಲಿಲ್ಲ. ದಾರಿಯಲ್ಲಿ ಒಂದೆರೆಡು ಮನೆಗಳಲ್ಲಿ ವಿಚಾರಿಸಿದಾಗ ಅವರು ಸರಿಯಾಗಿ ದಾರಿ ತೋರಿದರು.

ಫರ್ಜಾನ, ಸಫಿಯಾ, ಪುಟ್ಟ ಹುಡುಗಿ ಜೀನತ್ ಅಂಗಳದಲ್ಲಿಯೇ ಇದ್ದವರು ಗೇಟಿನ ಶಬ್ದ ಕೇಳಿ ಎದ್ದು ನಿಂತವರು ನಮ್ಮನ್ನು ನೋಡಿ ಖುಷಿಯಿಂದ ದಿಗ್ಭ್ರಾಂತರಾಗಿ 'ನೀವು ನಮ್ಮ ಮನೆಗೆ ಬರುವಿರೆಂದು ಎಣಿಸಿಯೇ ಇರಲಿಲ್ಲ' ಎಂದೆನ್ನುತ್ತ ಫರ್ಜಾನ ಸಂಧ್ಯಾಳನ್ನು ಸಫಿಯಾ ಸಣ್ಣಕ್ಕನನ್ನು ಕೈ ಹಿಡಿದೇ ಒಳ ಕರೆದುಕೊಂಡು ಹೋದರು. 'ಉಮ್ಮಾ... ನೋಡು ಯಾರು ಬಂದಿದ್ದಾರೆ' ಎಂದು ಸಫಿಯಾ ಕರೆಯುವ ಮುಂಚೆಯೇ ಗೇಟಿನ ಶಬ್ದ ಕೇಳಿದವರಂತೆ ಬಂದ ಬೀಬಮ್ಮ ಸಣ್ಣಕ್ಕ, ಸಂಧ್ಯಾರ ಮುಖವನ್ನು ತಮ್ಮ ಎರಡೂ ಹಸ್ತಗಳಿಂದ ನೇವರಿಸಿ ಲಟಿಕೆ ಮುರಿದವರು 'ಶಂಕು... ಎಷ್ಟು ಎತ್ತರ ಆಗಿಬಿಟ್ಟಿದ್ದೀಯ ಮಾರಾಯ' ಎಂದರು. ಬೀಬಮ್ಮನನ್ನು ಹಿಂಬಾಲಿಸಿ ಸಣ್ಣ ಮೋಣು ಏಳುತ್ತ ಬೀಳುತ್ತ ಬಂದ.

ಸಫಿಯಾ ನಮಗೆ ಮನೆಯನ್ನು ತೋರಿಸಿದಳು. ಮನೆಯ ಮುಂದೆ ವಿಶಾಲ ಅಂಗಳ, ಹೊಸ್ತಿಲು ದಾಟುತ್ತಿದ್ದಂತೆ ದೊಡ್ಡ ಹಾಲು, ಅದಕ್ಕೆ ಹೊಂದಿಕೊಂಡಂತೆ ಎರಡು ರೂಮು. ನಮ್ಮ ಮನೆಯಂತದ್ದೇ ಮನೆಯಲ್ಲಿ ಅಡಿಕೆ ಮೂಟೆ, ಹುರಿಗಡಲೆ, ಒಣಕು ಮೀನು ಚೀಲಗಳ ನಡುವಿನ ಒಂದಿಷ್ಟು ಜಾಗದಲ್ಲಿರುತ್ತಿದ್ದ ಸಾಬರ ಸಂಸಾರಕ್ಕೆ ಇಲ್ಲಿ ಇಂತದ್ದೊಂದು ಮನೆ ಇದೆ ಎಂಬ ಕಲ್ಪನೆಯೇ ನನಗಿರಲಿಲ್ಲ.

ನೆಲವಂತೂ ಥಳಥಳ ಹೊಳೆಯುತ್ತಿದ್ದು ಅದರ ಮೇಲೆಯೇ ಆರಾಮವಾಗಿ ಮಲಗುವಷ್ಟು ಸ್ವಚ್ಛವಾಗಿತ್ತು. ಅಡಿಗೆಯ ಮನೆಯಲ್ಲಿ ಕಡಪಕಲ್ಲಿನ ಸ್ಟ್ಯಾಂಡಿನ ಮೇಲೆ ನೀಟಾಗಿ ಗ್ಯಾಸ್ ಒಲೆ , ಕುಕ್ಕರ್‌ಗಳನ್ನು ಜೋಡಿಸಲಾಗಿತ್ತು. ಪ್ರತಿಯೊಂದು ರೂಮಿನಲ್ಲೂ ಫ್ಯಾನುಗಳು ಇದ್ದವು. ಶೋಕೇಸಿನಲ್ಲಿ ಥರಥರದ ಗೊಂಬೆಗಳು ನಗುಮುಖ ಹೊತ್ತಿದ್ದವು. ಮೆಕ್ಕಾದಲ್ಲಿ ಲಕ್ಷಾಂತರ ಜನ ಸೇರಿ ಪ್ರಾರ್ಥನೆ ಮಾಡುತ್ತಿರುವ ಚಿತ್ರ ಬಾಗಿಲ ಮೇಲಿತ್ತು. ಸಾಬರ ಮನೆ ಎಂದರೆ ಒಣಕು ಮೀನಿನ ವಾಸನೆ ಇರಬೇಕೆಂಬ ನನ್ನ ಕಲ್ಪನೆಗೆ ಭಂಗ ಬಂದಿತ್ತು.

ಸಾಬರು ಮತ್ತು ಮೋಣು ವ್ಯಾಪಾರಕ್ಕೆ ಹೋದವರು ಮನೆಗೆ ಬರುವಾಗ ನಾವು ಜೋಗಕ್ಕೆ ಬಂದ ವಿಚಾರವಲ್ಲದೆ ಊರಿನಲ್ಲಿ ಮದುವೆಯಾದವರ ಮಕ್ಕಳಾದವರ, ಸಂಗತಿಯನ್ನೆಲ್ಲಾ ಸಂಧ್ಯಾ ಫರ್ಜಾನ, ಸಫಿಯಾರಿಗೆ ಹೇಳಿಯಾಗಿತ್ತು.

'ತೂತು ಒಲೆ ಕೆಡಿಸಿತು, ಮಾತು ಮನೆ ಕೆಡಿಸಿತು' ಎಂದು ತಮ್ಮಷ್ಟಕ್ಕೆ ಅಂದುಕೊಂಡು ನಗಾಡಿದ ಬೀಬಮ್ಮ ಅಡುಗೆ ಮಾಡ ಹೊರಟದ್ದನ್ನು ಕಂಡು ಸಂಧ್ಯಾ 'ಬೀಬಮ್ಮ ನಮಗೆ ಊಟ ಬೇಡ, ನಮದಾಗಲೇ ಸಾಗರದಲ್ಲಿ ಆಗಿದೆ' ಎಂದಳು. ನಗುತ್ತಿದ್ದ ಬೀಬಮ್ಮನ ಮುಖ ಒಮ್ಮೆಗೆ ಸಣ್ಣದಾದ್ದನ್ನು ಗಮನಿಸಿದ ನಾನು 'ಭಟ್ಟರ ಹುಡುಗರು ಸಾಬರ ಮನೆಯಲ್ಲಿ ಊಟ ಮಾಡುವುದಿಲ್ಲವೆಂದು' ಅವರು ಅಂದುಕೊಂಡರೇನೋ ಎಂದು ಅನುಮಾನವಾಗಿ 'ಬೆಳಿಗ್ಗೆ ಮಾತ್ರ ಒಳ್ಳೇ ತಿಂಡಿನೇ ಮಾಡ್ಬೇಕು' ಎಂದೆ. ಬೀಬಮ್ಮನ ಮತ್ತೆ ಮುಖ ಅರಳಿತು. ಮೋಣು ಅಂಗಡಿಗೆ ಹೋಗಿ ಒಂದು ಡಜನ್ ಬಾಳೇಹಣ್ಣು ತಂದ. ಬೀಬಮ್ಮ ಬಿಸಿ ಮಾಡಿಕೊಟ್ಟ ಹಾಲಿನೊಂದಿಗೆ ಬಾಳೆ ಹಣ್ಣು ತಿಂದಾಗ ಇನ್ನೊಂದು ಬಾರಿ ಊಟ ಮಾಡಿದಂತಾಯಿತು. ನಾವು ಹಾಲು ಕುಡಿಯುತ್ತಿರುವಾಗಲೇ ರೂಮಿಗೆ ಹೋದ ಫರ್ಜಾನ, ಸಫಿಯಾ ಹಾಸಿಗೆ ಹಾಸಿ ಬಂದಿದ್ದರು. ಜಲಪಾತದ ನೀರಿನಲ್ಲಿ ನೆನೆದು ಸಂಧ್ಯಾಳಿಗೆ ಶೀತವೂ ಆಗಿತ್ತು. ಸಂಧ್ಯಾ ಪದೇ ಪದೇ ಮೂಗು ಒರೆಸಿಕೊಳ್ಳುವುದನ್ನು ನೋಡಿದ ಬೀಬಮ್ಮ ಒಳಗೆ ಹೋಗಿ ವಿಕ್ಸ್ ತಂದು ಸಂಧ್ಯಾಳ ಹಣೆಗೆ, ಮೂಗಿಗೆ, ಕತ್ತಿಗೆ ನಯವಾಗಿ ತಿಕ್ಕಿದರು. ಜೋಗದ ಗುಂಡಿ ಇಳಿದು ಹತ್ತಿ ಸುಸ್ತಾಗಿ ನಮಗೆ ನಿದ್ರೆ ಎಳೆಯುತ್ತಿತ್ತು. ಫರ್ಜಾನ, ಸಫಿಯಾಳನ್ನು ಹಿಂಬಾಲಿಸಿ ಮಲಗುವ ಕೋಣೆಗೆ ಹೋದೆವು . ಅವರು ನಮಗೆ ಹಾಸಿಗೆ ಬಳಿ ಬಿಟ್ಟು ಗುಡ್‌ನೈಟ್ ಹೇಳಿ ಅವರ ರೂಮಿಗೆ ಹೋದರು.

ಇಂತಹ ಹಾಸಿಗೆಗಳೂ ಇರುತ್ತವೆಯೇ ಎನ್ನುವಂತಿದ್ದ ದಪ್ಪನೆಯ ಹಾಸಿಗೆಗಳು, ಆ ಹಾಸಿಗೆ ಮೇಲೆ ಹೂವಿನ ಚಿತ್ತಾರದ ಬೆಡ್‌ಶೀಟನ್ನು ಹೊದಿಸಲಾಗಿತ್ತು. ಹೊದೆಯಲು ದಪ್ಪ ದಪ್ಪನೆ ಹಸಿರು ನೀಲಿ ಬಣ್ಣದ ರಗ್ಗುಗಳನ್ನು ಕೆಳಗೆ ಜೋಡಿಸಿಡಲಾಗಿತ್ತು. ಮಲಗುತ್ತಿದ್ದಂತೆ ನನ್ನ ಮೈ ರೋಮಾಂಚನದಿಂದ ಹೊರಳಾಡಿತು. ಅಷ್ಟು ಮೃದು ಹಾಸಿಗೆಯನ್ನು ಅದೇ ಮೊದಲ ಬಾರಿಗೆ ನನ್ನ ಮೈ ಸೋಕಿತ್ತು. ಹಾಗೆ ಬಗ್ಗಿ ರಗ್ಗನ್ನು ಹೊದ್ದುಕೊಂಡೆ, ರಗ್ಗು ಸುಗಂಧ ದ್ರವ್ಯದ ಪರಿಮಳವನ್ನು ಬೀರುತ್ತಿತ್ತು. ಅಬ್ಬಾ... ಆ ಅನುಭೂತಿಯನ್ನು ನಾನು ಮರೆಯಲಾರೆ. ಈ ರಾತ್ರಿ ನಿದ್ರೆ ಬರುವುದೇ ಬೇಡ. ಹೀಗೆ ಹಾಸಿಗೆಯಲ್ಲಿ ಹೊರಳಾಡುತ್ತಾ ಹೊರಳಾಡುತ್ತಾ ಈ ಸುಖದಲ್ಲಿಯೇ ಬೆಳಕು ಕಾಣಬೇಕು ಅನ್ನಿಸಿತು. ಹೀಗೆ ಹೊರಳಾಡುತ್ತಾ ನಾವು ದಿನನಿತ್ಯ ಮನೆಯಲ್ಲಿ ಮಲಗುವ ಹಾಸಿಗೆಗಳು ನೆನಪಾದವು.

ರಾತ್ರಿ ಹೇಗೂ ನಮ್ಮ ಮನೆಯಲ್ಲಿ ಊಟವಿರುತ್ತಿರಲಿಲ್ಲ. ಅಪ್ಪಯ್ಯ ಗ್ರಾಮ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿ ಬಂದರು ಎಂದರೆ ನಾವು ಮಲಗುವ ಸಮಯವಾಯ್ತೆಂದು ಗೊತ್ತಾಗಿಬಿಡುತ್ತಿತ್ತು. ಅಪ್ಪಯ್ಯ ಬಂದವರೇ ಮಡಿ ಪಂಚೆ ಬದಲಾಯಿಸಿ ಮೂಲೆಯಲ್ಲಿ ಪೇರಿಸಿಟ್ಟಿದ್ದ ಗೋಣಿ ಚೀಲಗಳನ್ನು ಇದ್ದ ಒಂದೇ ರೂಮಿನ ತುಂಬಾ ಒಂದರ ಪಕ್ಕ ಒಂದು ಜೋಡಿಸುತ್ತಿದ್ದರು. ಅದರ ಮೇಲೆ ನಾನಾ ಗಾತ್ರದ ಕಂಬಳಿ ತುಂಡುಗಳನ್ನು ಹಾಸುತ್ತಿದ್ದರು. ಇದರ ಮೇಲೆ ಅಮ್ಮನ ಒಂದೆರೆಡು ಮಾಸಿದ ಸೀರೆ ಹಾಕುತ್ತಿದ್ದರು. ಯಾವ

ಜಾಗದಲ್ಲಿ ಕಂಬಳಿ ಹಾಸಿದ್ದಾರೋ ಅ...
ಮಲಗಲು ನಾನು, ಸಂಧ್ಯಾ, ಸಣ್ಣಕ್ಕ, ಎ...
ತಕರಾರು ತೆಗೆಯುತ್ತಿದ್ದೆವು. ಅಲ್ಲಿ ಮಲಗಿದ...
ಕಂಬಳಿಯ ಮುಳ್ಳುಗಳು ಅಮ್ಮನ ಸೀರೆಯ...
ದಾಟಿ ಬಂದು ನಮ್ಮ ಬೆನ್ನನ್ನು ಚುಚ್ಚುತ್ತಿದ್ದ...
ನಾನು ಮತ್ತು ಸಂಧ್ಯಾ ಅಪ್ಪಯ್ಯನ ಅ...
ಈಚೆ ಮಲಗುತ್ತಿದ್ದೆವು. ನಾನು ನನ್ನ ಬೆ...
ಚಳಿಯಾಗುತ್ತದೆಂದು ಹೊದಿಕೆಯನ್ನು ...
ಕಡೆ ಎಳೆದರೆ ಪಕ್ಕ ಬಿದ್ದ ಸಂಧ್ಯಾ ಆ ...
ಎಳೆಯುತ್ತಿದ್ದಳು. ನಿದ್ರೆ ಬರುವವರೆಗ...
ಅಥವಾ ಅಪ್ಪಯ್ಯನಿಗೆ ಕಿರಿಕಿರಿಯಾಗಿ ಗದರು...
ವರೆಗೂ ನಮ್ಮ ಜಗಳ ಮುಂದುವ...
ಯುತ್ತಿತ್ತು. ನಾವು ಹೈಸ್ಕೂಲಿಗೆ ಹೋ...
ನಂತರ ಬೇರೆ ಹಾಸಿಗೆಯಲ್ಲಿ ಮಲಗಲ...
ಶುರು ಮಾಡಿದರೂ ಅದೇ ಗೋಣಿತಾ...
ಕಂಬಳಿಗಳೇ ನಮ್ಮ ಹಾಸಿಗೆಗಳಾಗಿದ್ದ...
ಮನೆಗೆ ಯಾರಾದರೂ ನೆಂಟರು ಬಂದ...
ನಾವು ಹಾಸುವ ಗೋಣಿ ಚೀಲಗಳಿಗ...
ಹೊದಿಕೆಗಳಿಗೂ ಸಂಚಕಾರ ಬರುತ್ತಿತ್ತು...
ಯಾವ ನೆಂಟರೂ ಬಾರದಿರಲಿ ಎಂಬ ನಮ...
ಪ್ರಾರ್ಥನೆ ಕೇಳಿಯೋ ಏನೋ ಯಾರು...
ನಮ್ಮ ಮನೆ ಕಡೆ ಸುಳಿಯುತ್ತಿರಲಿಲ್ಲ.

ಸಾಗರದ ಸಾಬರ ಮನೆಯಲ್ಲಿ ಮಲಗಿ...
ಆ ರಾತ್ರಿ ನಾನಂತೂ ಸುಖದ ಸ್ವರ್ಗದ...
ತೇಲುತ್ತಿದ್ದೆ. ರಾತ್ರಿ ಎಚ್ಚರವಾದಾಗಲೆಲ್ಲಾ ಆ ದೇವಲೋಕ...
ಹಾಸಿಗೆಯಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಹೊರಳಾಡಿ, ...
ಹೀಗೆ ನಿರಂತರವಾಗಿರಲಿ, ಬೆಳಗಾಗುವುದೇ ಬೇ...
ಎಂದು ನನ್ನ ಮನಸ್ಸು ಪ್ರಾರ್ಥಿಸುತ್ತಿತ್ತು. ...
ಪ್ರಾರ್ಥನೆಯನ್ನು ಮೀರಿ ಬೆಳಗಾಗಿಯೇ ಬಿಟ್ಟಿತು.

ನಾನು ಏಳುವುದರೊಳಗೆ ಸಂಧ್ಯಾ, ಸಣ್ಣಕ್ಕ ಫರ್ಜಾ...
ಸಫಿಯಾರೊಂದಿಗೆ ಕುಳಿತು ಹರಟೆ ಹೊಡೆಯುತ್ತಿದ್ದ...
'ಶಂಕುಗೆ ಬಾಳ ನಿದ್ರೆ ಬಂತೇನೋ' ಎಂದು ...
ಕಪ್ಪು ಹಿಡಿದು ಬಂದ ಬೀಬಮ್ಮ ನಗಾಡಿದರು. ...
ಕುಡಿದ ನಾನು ಸ್ನಾನ ಮಾಡಲು ಬಚ್ಚಲು ಮ...
ಹೋದೆ. ಬಚ್ಚಲು ಮನೆ ಅದೆಷ್ಟು ಶುಭ್ರವಾಗಿತ್ತು...
ಹಂಡೆ ತುಂಬಾ ಬಿಸಿನೀರಿತ್ತು. ಮೇಲುಗಡೆಯ ...
ಸ್ಟ್ಯಾಂಡಿನಲ್ಲಿ ಮೈಸೂರು ಸ್ಯಾಂಡಲ್ ಸೋಪಿತ್ತು...
ನಾನಂತೂ ಎರಡೆರಡು ಸಾರಿ ಸೋಪಚ್ಚಿಕೊಂಡು ಸ್ನಾ...
ಮಾಡಿದೆ. ಇನ್ನೊಂದು ಚಂಬು ಇನ್ನೊಂದು ಚಂ...
ಎನ್ನುತ್ತಾ ಆ ದೊಡ್ಡ ಹಂಡೆಯ ಅರ್ಧದಷ್ಟು...
ಬಿಸಿನೀರನ್ನು ಖಾಲಿ ಮಾಡಿದೆ. ಇನ್ನೂ ಹೊಯ್ದುಕೊ...
ತ್ತಿದ್ದೆನೇನೋ. ಅಷ್ಟರಲ್ಲಿ ಸಂಧ್ಯಾ ದಬದಬನೆ ಬಾಗಿ...
ಬಡಿದು 'ಲೇಟಾಗ್ತಿದೆ ಬೇಗ ಬಾರೋ' ಎಂದು ಕೂ...
ಹತ್ತಿದಳು. ಲಗುಬಗನೆ ಇನ್ನೊಂದೆರಡು ಚಂ...
ಬಿಸಿನೀರನ್ನು ತಲೆಯ ಮೇಲೆ ಸುರುವಿಕೊಂ...
ಅರ್ಧಂಬರ್ಧ ಒರೆಸಿಕೊಂಡು ರೂಮಿಗೆ ಬಂದೆ. ...
ಮೈಯಿಡೀ ಗಂಧದ ಪರಿಮಳದಲ್ಲಿ ತೊಯ್ದಾಡುತ್ತಿತ್ತು...
ಆ ಕ್ಷಣ ಕನ್ನಡಿಯಲ್ಲಿ ನೋಡಿಕೊಂಡು ನನಗೆ ನಾ...
ಮೋಹಗೊಂಡೆ.

ನಾನು ಸ್ನಾನದಿಂದ ಬರುವುದನ್ನೇ ಎಲ್ಲರ...
ಕಾಯುತ್ತಾ ಡೈನಿಂಗ್ ಟೇಬಲ್ ಸುತ್ತಾ ಕುಳಿತ್ತಿದ್ದ...
ನನ್ನನ್ನು ನೋಡಿದ ಬೀಬಮ್ಮ ತಟ್ಟೆಗೆ ತಿಂಡಿಯ...
ಬಡಿಸತೊಡಗಿದರು. ಏನು ತಿಂಡಿ ಎಂದು ನಾ...
ಹಿಂಜರಿಕೆಯಿಂದಲೇ ಕೈ ಹಾಕಿದೆ. ಉದ್ದನೆಯ ಕಡು...
ಚಟ್ನಿ ಒಂದು ತಟ್ಟೆಯಲ್ಲಿದ್ದರೆ ಇನ್ನೊಂದು ತಟ್ಟೆಯ...
ಪಲಾವ್ ಇತ್ತು. 'ಇದೆಂತ ಇಷ್ಟುದ್ದ ಕಡುಬು ಮಾರಾಯ...
ಎಂದು ಕೇಳುತ್ತ ಕಡುಬನ್ನು ಬಾಯಿಗಿಟ್ಟೆ. ಇದು 'ಉ...
ಅಂತ ಶಂಕು, ಕೇರಳದ ಮಲೆಯಾಳಿಗಳು ಜಾ...
ಮಾಡುತ್ತಾರೆ. ನಮ್ಮ ಬ್ಯಾರಿ ಮನೆಗಳಲ್ಲೂ ಇ...
ಜಾಸ್ತಿ' ಎಂದು ಬೀಬಮ್ಮ ಇನ್ನೊಂದು ಕಡು...
ಹಾಕಿದರು. ಉತ್ತಪ್ಪಗೆ ಬಾಳೆಹಣ್ಣು ಬೆರೆಸಿದ್ದರಿ...
ಸಿಹಿಸಿಹಿಯಾಗಿತ್ತು. ತಿಂಡಿ ಮುಗಿಯುತ್ತಿದ್ದಂತೆ ಬೀಬ...
ದೊಡ್ಡ ದೊಡ್ಡ ಲೋಟಗಳಲ್ಲಿ ನಮಗಾಗಿ ಕಾಫಿ ಮಾ...
ತಂದರು. ಟೀ ಕುಡಿಯುವ ಸಾಬರ ಮನೆಯವ...
ನಮಗಾಗಿ ಎಲ್ಲರೂ ಕಾಫಿಯನ್ನೇ ಕುಡಿದರು.

ಅಂದು ಮೋಣು, ಫರ್ಜಾನ, ಸಫಿಯ...
ನಮ್ಮೊಂದಿಗೆ ಸಾಗರ ಪೇಟೆಗೆ ಬಂದು ಅಲ್ಲಿಂದ ನಮ್ಮ...
ಕೆಳದಿ ಇಕ್ಕೇರಿ ದೇವಸ್ಥಾನಗಳಿಗೆ ಕರೆದುಕೊಂಡು ಹೋ...
ಪುನಃ ಸಾಗರದ ಬಸ್‌ಸ್ಟ್ಯಾಂಡಿನಲ್ಲಿ ತೀರ್ಥಹಳ್ಳಿ ಬ...
ಹತ್ತಿಸಿ ಕಳಿಸಿಕೊಟ್ಟರು. 'ಸಾಬರ ಮನೆ, ಅವರ ಸಂಸಾ...
ಎಷ್ಟು ಚೆನ್ನಾಗಿದೆ' ಎಂದು ಸಾಬರ ಮನೆಯ ಹ್ಯಾಂಗೊ...
ವರ್‌ನಲ್ಲಿಯೇ ಇದ್ದ ನಾನು ಬಸ್ಸಿನಲ್ಲಿ ಹೇಳಿದಾ...
ಸಣ್ಣಕ್ಕ 'ಹೌದು, ಆದರೆ ಇತ್ತೀಚಿಗೆ ಸಾಬರಿಗ...
ಮೋಣುಗೂ ಮಾತಾಗ್ತಾ ಇರ್ತದಂತೆ ಅಂತ ಸಫಿಯ...
ಬೇಜಾರಿಂದ ನನ್ನತ್ರ ಹೇಳಿದ್ಲು' ಎಂದಳು. 'ಬಿ...
ಬಿಡು ಅದು ಎಲ್ಲಾ ಮನೇಲಿ ಇರೋದು' ಎಂ...
ನಾನು ಮತ್ತೆ ನೆನಪುಗಳಿಗೆ ಮರಳಿದೆ.

ಪ್ರಯತ್ನ-ಸಾಹಸವಿಲ್ಲದ ಜೀವನ ನಿರರ್ಥಕ -ಅ.ನ.ಕೃ.

ಕರ್ಮೀನ್ ಸಾಬರಿಗೆ, ಲುಂಗಿ ಸಾಬರಿಗೆ ಕೂಡ ...ಗಳೂರಿನಲ್ಲೋ, ಸಾಗರದಲ್ಲೋ ಇಂತಹದ್ದೊಂದು ...ನೆಯುತ್ತಾ? ಅವರ ಮನೆಯಲ್ಲೂ ಇಂತಹವರೇ ...ಬಮ್ಮ, ಜರೀನ, ಫರ್ಜಾನ, ಸಫಿಯಾ, ಮೋಣು ...ನ್ಗಿ ಇದ್ದಾರಾ?

ಆ ವರ್ಷವೇ ನಾನು ಕಾಲೇಜು ಮುಗಿಸಿ ಕೆಲಸ ...ಮಕಿ ಬೆಂಗಳೂರಿಗೆ ಹೊರಟೆ. ಮತ್ತೆ ನನಗೆ ಸಾಬರ ...ಟುಂಬ ಸಿಕ್ಕಿದ್ದು ಮೂರು ವರ್ಷದ ಮೇಲೆ ರಜೆ ...ದುಕೊಂಡು ಊರಿಗೆ ಬಂದಿದ್ದಾಗ. ಆಗ ನಾವು ...ರ್ಗರದ ಯೋಜನೆಯಡಿಯಲ್ಲಿ ಮನೆ ಕಟ್ಟಿದ್ದೆವು. ...ಸ್ಟ್ಯಾಂಡಿನಿಂದ ನಮ್ಮ ಹಳೆಯ ಮನೆಗೆ ...ೋಗುವಾಗ ಹೊಸಮನೆ ಆಸಿಯೇ ಹೋಗಬೇಕು. ...ದು ನಾನು ಮನೆಯ ಜಗುಲಿಯಲ್ಲಿದ್ದಾಗ ನಮ್ಮ ...ಲಿಯಾಚೆ ಸಾಬರು, ಬೀಬಮ್ಮ, ಜೀನತ್ ನಾಲ್ಕೈದು ...ರ್ಷದ ಚಿಕ್ಕ ಮೋಣು ಎಲ್ಲಾ ಸಾಲಾಗಿ ಮನೆಗೆ ...ೋಗುವುದನ್ನು ಕಂಡು ಬೇಲಿಯ ಹತ್ತಿರ ಓಡಿದೆ. ...ಬಮ್ಮ ಎಂದಿನಂತೆ ಮಗುವೊಂದನ್ನು ಅವುಚಿ ...ಡಿದುಕೊಂಡಿದ್ದರು. ಬೀಬಮ್ಮ, ಸಾಬರ ಮುಖದಲ್ಲಿ ...ಮುಪ್ಪಿನ ಗೆರೆಗಳು ಎದ್ದು ಕಾಣುತ್ತಿದ್ದವು. 'ಶಂಕು ...ಗ ಬೆಂಗಳೂರಿನಲ್ಲಿ ದೊಡ್ಡ ಸಾಹೇಬ ಅಂತೆ' ...ಹೇಬರು ನನ್ನನ್ನು ನೋಡಿ ನಕ್ಕರು. 'ಆಮೇಲೆ ...ವ್ಯಾರು ಸಾಗರಕ್ಕೆ ಬರಲೇ ಇಲ್ಲ' ಬೀಬಮ್ಮ ಮುನಿಸಿ ...ಂಡರು. 'ಬನ್ನಿ ಕಾಫಿ ಕುಡಿದು ಹೋಗಬಹುದು' ...ದೆ. 'ಹರುಮನೆಗೆ ಅಡಿಕೆ ತರ್ಲಿಕ್ಕೆ ಹೋಗ್ಬೇಕು, ...ನ್ನೊಮ್ಮೆ ಬರ್ತೀವಿ' ಅಂತ ಸಾಬರು ಹೊರಟರು.

ಸಾಬರಾಗಲೀ, ಬೀಬಮ್ಮನಾಗಲೀ ನಮ್ಮ ಮನೆಗೆ ...ಂದದ್ದೇ ಇಲ್ಲ. ಜರೀನಾ, ಫರ್ಜಾನ, ಸಫಿಯಾ, ...ೋಣು ಚಿಕ್ಕಂದಿನಲ್ಲಿ ಆಟ ಆಡಲು ಬಂದಿದ್ದರೇ ...ಃ ಅವರನ್ನು ಒಮ್ಮೆಯೂ ಕರೆದು ಒಂದು ಲೋಟ ...ಫಿ ಕುಡಿಯಿರಿ ಎಂದು ಹೇಳಲು ನನಗಿರಲಿ, ...ಮ್ಮ ಮನೆಯವರಿಗೂ ಒಮ್ಮೆಯೂ ಹೊಳೆಯಲಿಲ್ಲ. ...ವತ್ತೇ ನಾನು ಅವರನ್ನು ಕಾಫಿಗೆ ಕರೆದದ್ದು . ಆಗ ...ಲ್ಲಿತ್ತು ನಮ್ಮ ಮನೆಯಲ್ಲಿ ಕಾಫಿ? ಹಾಲು? ಆದರೂ ಉಪಚಾರಕ್ಕೂ ಒಂದು ಮಾತು ಹೇಳಿದ ನೆನಪು ನನಗಿಲ್ಲ. ಬಡವರಾದರೇನು ನಾವು ಬ್ರಾಹ್ಮಣರಲ್ಲವೇ? ಕಾಫಿ ಇದ್ದರೂ ಕೊಟ್ಟುಬಿಟ್ಟರೆ ಜಾತಿಗೆಲ್ಲಿ ಬೆಲೆ?

ಇನ್ನೂ ಒಂದು ದಿನ ರಜೆಯಿದ್ದ ಕಾರಣ ಅಂದು ಸಂಜೆ ಸಾಹೇಬರ ಮನೆಗೆ ಹೋದೆ. ಅದೇ ಅಡಿಕೆ ಮೂಟೆಗಳ ರಾಶಿ ನಡುವೆ ಸಾಹೇಬರು ಕನ್ನಡಕ ಏರಿಸಿ ಏನೋ ಲೆಕ್ಕ ಹಾಕುತ್ತಿದ್ದರು. ಗೋಡೆಯ ಪಕ್ಕ ನಿಲ್ಲಿಸಿದ್ದ ಅರ್ಧ ತುಂಬಿದ ಅಡಿಕೆ ಚೀಲದ ಮೇಲೆ ಕುಳಿತಿದ್ದ ಕಿಟ್ಟಪ್ಪಗೌಡರು ಸಾಹೇಬರು ಮಾಡುತ್ತಿದ್ದ ಲೆಕ್ಕವನ್ನು ಕತ್ತು ನೀಕಿಸಿ ನೋಡುತ್ತಿದ್ದರು. ಇವರೊಂದಿಗೆ ಒಣ ಮೀನಿನ ಪರಿಮಳವೂ ಹೊಸಿಲಲ್ಲಿಯೇ ನನಗೆದುರಾಯಿತು. ನನ್ನ ನೋಡಿ ಖುಷಿಗೊಂಡ ಸಾಬರು 'ಗೌಡರೆ ಲೆಕ್ಕ ನಾಳೆ ಮಾಡೋಣ, ಇದನ್ನು ತಗಂಡು ನಡೀರಿ' ಎಂದು ಹಸಿರು ನೋಟನ್ನು ಕಿಟ್ಟಪ್ಪಗೌಡರಿಗೆ ನೀಡಿದರು. ಕಿಟ್ಟಪ್ಪಗೌಡರಿಗೆ ನನ್ನ ಪರಿಚಯವಾಗಲಿಲ್ಲ ಅನ್ನಿಸುತ್ತದೆ. ಪಿಳಿಪಿಳಿ ನನ್ನ ನೋಡುತ್ತಾ ಹೊರಟು ಹೋದರು. 'ಶಂಕು ಕೂತ್ಕಾ' ಎಂದು ಸಾಬರು ಅಲ್ಲಿದ್ದ ಒಂದೇ ಮುರುಕು ಖುರ್ಚಿಯನ್ನು ನೀಡಿದರು. 'ಸಾಬರೆ ಹುರಿಗಡಲೆ ಖಾಲಿಯಾಯಿತಾ' ಎಂದು ಅಲ್ಲಿ ಶಾಲಾ ಮಕ್ಕಳಂತೆ ಶಿಸ್ತಾಗಿ ಕುಕ್ಕರಿಸಿದ್ದ ಅರ್ಧಂಬರ್ಧ ತುಂಬಿದ ಚೀಲಗಳಿಗೆ ಕೈ ಹಾಕುತ್ತಾ ಕೇಳಿದೆ.

'ಒಳ್ಳೆ ಕಥೆ ಮಾರಾಯ ನೀನಿನ್ನೂ ಹುರಿಗಡಲೆ ತಿನ್ನೋದು ಬಿಟ್ಟಿಲ್ಲವಾ' ಎಂದು ಕೇಳುತ್ತಲೇ ತಮ್ಮ ಪಕ್ಕದಲ್ಲಿಯೇ ಇದ್ದ ಹುರಿಗಡಲೆಯ ಮೂಟೆಗೆ ಕೈ ಹಾಕಿ ಒಂದು ಮುಷ್ಟಿ ಹುರಿಗಡಲೆಯನ್ನು ನನ್ನ ಬೊಗಸೆಗೆ ಹಾಕಿದರು.

ಅಡಿಗೆ ಮನೆಯಲ್ಲಿ ಅಳುತ್ತಿದ್ದ ಮಗುವನ್ನು ಸಮಾಧಾನಿಸುತ್ತಿದ್ದ ಬೀಬಮ್ಮ ನನ್ನ ಸ್ವರ ಕೇಳಿ 'ಓ ಶಂಕು, ಚಾ ಮಾಡ್ತೀನಿ ಹೋಗಿ ಬಿಡ್ಬೇಡ' ಎಂದರು.

'ಏನು, ಮೋಣುನ ಈ ಸಾರಿ ವ್ಯಾಪಾರಕ್ಕೆ ಕರ್ಕೊಂಬರ್ಲಿಲ್ವಾ' ಮೋಣು ಕಾಣದಿದ್ದಕ್ಕೆ ಕೇಳಿದೆ.

ಕುವೆಂಪುಗೆ ಸಿಗದ ಕಥೆ

'ಅವನ ವಿಚಾರ ಎತ್ಬ್ಯಾಡ' ಎಂದು ಒಂದು ಕ್ಷಣ ನಿಟ್ಟುಸಿರೆಳೆದ ಸಾಬರು ತನ್ನಿಂದ ಹೇಳದೇ ಇರಲು ಸಾಧ್ಯವೇ ಇಲ್ಲವೆಂಬಂತೆ ಬಂದ ಉದ್ವೇಗವನ್ನು ನಿಯಂತ್ರಿಸುತ್ತ 'ಅವನ್ಗೆ ನಾವೊಂದು ಒಳ್ಳೆ ಹುಡ್ಗೀನ ನೋಡಿದ್ವು ಮಾರಾಯಾ. ಅವನ ಕೇಳಿದ್ರೆ ಯಾವುದೋ ದರಿದ್ರ ಹುಡುಗೀನ ಮದ್ವೆ ಆಗ್ತೀನಿ ಅಂತಿದಾನೆ. ಈಗ ಒಂದೆರೆಡು ಲಕ್ಷ ಇವನ್ಗೆ ತಂಗುಡ್ರೆ ಒಬ್ಬಳು ಮಗಳನಾದ್ರೂ ಹೊರ್ಗೆ ಕಳಿಸ್ಬಹುದು.. ಬಡೋರ ಹುಡುಗಿ ದುಡ್ಡು ತಗಳೊಲ್ಲ ಅಂತಿದಾನೆ... ಹಾಳಾಗ್ಲಿ ಬಿಡು' ಸಾಬರು ಜೋರಾಗಿ ಉಸಿರೆಳೆದುಕೊಂಡವರು ತಾನು ಅಪರೂಪಕ್ಕೆ ಬಂದವನಿಗೆ ತನ್ನ ರಗಳೆಗಳನ್ನೆಲ್ಲಾ ಹೇಳಿಕೊಳ್ಳುತ್ತಿದ್ದೇನೇನೂ ಎಂದೆನಿಸಿ ಮಾತು ಬದಲಿಸಿ 'ಅಂದ್ಹಾಗೆ ನೀನು ಪಾಯಸ ಹಾಕ್ಸೋದು ಯಾವಾಗ' ಎಂದರು.

ಟೀ ಹಿಡಿದು ಬಂದ ಬೀಬಮ್ಮ 'ಶಂಕೂ ನೀನು ಹೇಳೊ.. ಅವ ಹಾಗೆ ಹೇಳ್ಬಹುದ.. ನಿನ್ನಪ್ಪಂಗೆ ಹನ್ನಂದು ಜನ ಮಕ್ಕಳು . ಕಾಯಿಲೆ ಕಸಾಲೆಯಾಗಿ ಉಳಿದೋರು ನಿವ್ವೈದು ಜನ ' ಸಾಬರ ಮಾತಿನಿಂದ ಬೀಬಮ್ಮನ ಯಾವುದೋ ನೆನಪುಗಳು ಕೆದರಿದವು.

'ಬೀಬಮ್ಮ ... ಬೇಜಾರು ಮಾಡ್ಕೋಬೇಡಿ, ಏನು ಅವ್ನು ದೊಡ್ಡ ಮನುಷ್ಯ ಆಗಿದಾನ? .. ಇರ್ಲಿ ಅವನ್ಗೆ ಬೈದು ಕೇಳ್ತಿನಿ... ಏನಂದಾ ಅವ' ಬೀಬಮ್ಮನನ್ನ ಸಮಾಧಾನಿಸಬೇಕಿದ್ದ ನನ್ನಲ್ಲಿ ದರಿದ್ರ ಕುತೂಹಲವೂ ಇಣುಕಿತ್ತು.

ಬೀಬಮ್ಮನ ಕಣ್ಣಲ್ಲಿ ನೀರಿತ್ತು. 'ಎಂತ ಹೇಳಾದು ಮಾರಾಯ. ವರ್ಷಕ್ಕೊಂದು ಮಗು ಹುಟ್ಟಿಸ್ತಾ ಇರಿ, ವರದಕ್ಷಿಣೆ ತಗೊಳ್ತಾ ಅವರ್ಗೆಲ್ಲ ಮದ್ವೆ ಮಾಡ್ತಾ ಇರ್ತೀನಿ ಅಂತಾನಲ್ಲೋ ಅವಾ' ಬೀಬಮ್ಮ ಜೋರಾಗಿ ಅಳಲು ಶುರು ಮಾಡಿದರು. 'ಮೋಣುವಿಗೆ ನೀವು ಹೇಳಿದ ಹುಡುಗಿಯನ್ನು ಮದುವೆಯಾಗಲು ಒಪ್ಪಿಸುವ ಜವಾಬ್ದಾರಿ ನನಗಿರಲಿ' ಎಂದು ನನಗೇ ವಿಶ್ವಾಸವಿಲ್ಲದ ಮಾತುಗಳನ್ನು ಹೇಳಿ, ಬೀಬಮ್ಮನ ಕಣ್ಣೀರಿನ ಹೊಳೆಗೆ ಕಟ್ಟು ಹಾಕಿದೆ. ಆದರೆ ಆಮೇಲೆ ನಾನು ಬೆಂಗಳೂರು ಸೇರಿದ ಒಂದು ವರ್ಷ ಮೋಣು ವನ್ನಾಗಲೀ, ಸಾಬರನ್ನಾಗಲೀ ಕಾಣಲಾಗಲೀ ಇಲ್ಲ. ಮತ್ತೆ ಬೆಂಗಳೂರಿನಿಂದ ರಜೆ ಹಾಕಿ ಬಂದರೂ, ಸಾಬರ ಕುಟುಂಬವಿದ್ದರೂ ನನ್ನ ಮಾತನ್ನು ಉಳಿಸಿಕೊಳ್ಳಲಾಗದ ಅಪರಾಧಿ ಭಾವ ಅವರನ್ನು ಭೇಟಿಯಾಗಲು ಬಿಡಲೇ ಇಲ್ಲ.

ನಿನ್ನೆ ಬೆಂಗಳೂರಿನಿಂದ ರಜೆ ಹಾಕಿ ಬಂದ ನಾನು ಇಂದು ಮನೆಯಲ್ಲಿದ್ದ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಓದುತ್ತಿದ್ದಂತೆ ಕರ್ಮೀನ್ ಸಾಬಿ, ಪುಡಿ ಸಾಬಿ ಕುದುರೆ ತಗಂಡು ಅಡಿಕೆ ವ್ಯಾಪಾರಕ್ಕೆ ಹೋಗುತ್ತಿದ್ದಂತೆ ನಜೀರ್ ಸಾಬರ ಸಂಸಾರ ನೆನಪಿಗೆ ಬಂದು ಪುಸ್ತಕ ಮಡಿಚಿಟ್ಟು 'ಮೋಣು ಮದುವೆಯಾಯಿತಾ' ಎಂದು ಸಂಧ್ಯಾಳಿಗೆ ಕೇಳಿದೆ.

'ಮೋಣು ಹಠ ತೊಟ್ಟು ಅವನು ಇಷ್ಟ ಪಟ್ಟ ಹುಡುಗಿಯನ್ನೇ ಮದುವೆಯಾದ. ಅಡಿಕೆ ವ್ಯಾಪಾರಕ್ಕೆ ಊರಿಗೆ ಬಾರದಿದ್ದರೂ ಸಾಗರದಲ್ಲಿಯೆ ಗುಜರಿ ವ್ಯಾಪಾರ ಮಾಡುತ್ತಾ ಸಫಿಯಾಳ ಮದುವೆಯನ್ನು ಮಾಡಿದ. ಮದುವೆಗೆ ಕರೆಯಲಿಕ್ಕೆ ಪತ್ರಿಕೆ ಹಿಡಿದು ಮೋಣುವೇ ಬಂದಿದ್ದ' ಅಂದಳು ಸಂಧ್ಯಾ.

ಮತ್ತೆ ಪುಸ್ತಕ ಕೈಗೆತ್ತಿಕೊಂಡರೆ ಕರ್ಮೀನ್ ಸಾಬಿ, ಪುಡಿ ಸಾಬಿ ಕಾದಂಬರಿಯಲ್ಲಿ ಬರುತ್ತಿದ್ದಂತೆ ನನಗೆ ನಜೀರ್ ಸಾಬರು, ಮೋಣು, ಬೀಬಮ್ಮ, ಫರ್ಜಾನ, ಸಫಿಯಾ, ಜರೀನಾ ಎಲ್ಲರೂ ಮುಂದೆ ಬಂದು ಕರ್ಮೀನ್ ಸಾಬಿ, ಪುಡಿಸಾಬಿ, ಲುಂಗಿಸಾಬಿಯ ಪಾತ್ರಗಳೆಲ್ಲ ಅಸ್ಪಷ್ಟವಾಗತೊಡಗಿದವು...

ಸ್ತ್ರೀವಾದದ ಬಹುಮುಖಗಳು

'ಮಹಿಳಾಲೋಕ'ವು ಮಹಿಳಾ ಸಂಬಂಧೀ ಮತ್ತು ಮಹಿಳಾ ಅಧ್ಯಯನ ಸಂಬಂಧೀ ವಿಷಯಗಳ ಕುರಿತು 'ಹೊಸತು' ಪತ್ರಿಕೆಯ ಐದು ವರ್ಷಗಳ ಸಂಚಿಕೆಗಳಲ್ಲಿ ಬಂದ ಆಯ್ದ ಲೇಖನಗಳ ಸಂಪಾದಿತ ಕೃತಿ. ಇದು ಈಗಾಗಲೇ ಪ್ರಕಟಿತ ಲೇಖನಗಳ ಪುನರಾವರ್ತನೆಯ ಕೆಲಸವೆನಿಸಿದರೂ ಇದಕ್ಕೆ ಚಾರಿತ್ರಿಕ ಮಹತ್ವವಿದೆ. ಪ್ರೊ. ಜಿ. ರಾಮಕೃಷ್ಣ ಅವರು 'ಯಾವುದೇ ವಿಷಯಕ್ಕೆ ಸಂಬಂಧಿಸಿದ ಲೇಖನಗಳು ಒಂದೆಡೆ ಸಿಕ್ಕಿದರೆ ಬೌದ್ಧಿಕ ಮತ್ತು ಕ್ರಿಯಾತ್ಮಕ ಚರ್ಚೆಗೆ ಅನುವು ಮಾಡಿಕೊಟ್ಟಂತಾಗುತ್ತದೆ' ಎಂದು ಆರಂಭದಲ್ಲಿ ಕೊಡುವ ಸಮರ್ಥನೆಯು ಯಥಾರ್ಥವೂ, ಅರ್ಥಪೂರ್ಣವೂ ಆಗಿದೆ.



ಪ್ರಸ್ತುತ 'ಮಹಿಳಾಲೋಕ'ದಲ್ಲಿ ಒಟ್ಟು ಮೂವತ್ತ ನಾಲ್ಕು ಲೇಖನಗಳಿದ್ದು, ಇವುಗಳಲ್ಲಿ ಕೆಲವು ಲೇಖನಗಳು ಕೃಷಿ ಕಾರ್ಮಿಕ, ಹೊರದುಡಿಮೆ, ಅಸಂಘಟಿತ ವಲಯದ ಕಾರ್ಮಿಕರು ಮುಂತಾದ ವಿವಿಧ ವಲಯದ ಕಾರ್ಮಿಕರ ಸ್ಥಿತಿಗತಿಗಳನ್ನು ವಿಶ್ಲೇಷಿಸುತ್ತವೆ. ಇನ್ನು ಕೆಲವು ಲೇಖನಗಳು ಮಹಿಳೆಯ ಅವಕಾಶಗಳ ಇತಿಮಿತಿಗಳನ್ನು, ಮಹಿಳೆಯ ದುಡಿಮೆ, ದೇಹ ಮತ್ತು ಚಿಂತನೆಗಳು ಅಪಮೌಲ್ಯೀಕರಣಕ್ಕೆ ಒಳಗಾಗುತ್ತಿರುವ ಬಗೆಗಳನ್ನು ಚರ್ಚೆಗೆ ಎತ್ತಿಕೊಂಡಿವೆ.

ಮಹಿಳಾಪರ ಕಾನೂನುಗಳು ; ಕಾಲಕಾಲಕ್ಕೆ ಕಾನೂನುಗಳ ತಿದ್ದುಪಡಿಯ ಅಗತ್ಯ ಸಾರ್ವಜನಿಕ ಹಿತಾಸಕ್ತಿಯ ದಾವೆಗಳ ಮಹತ್ವ; ಪತ್ರಿಕೆಗಳಲ್ಲಿ ಬಂದ ಸಂವೇದನಾಶೀಲ ವರದಿ ಆಧರಿಸಿ ಕೋರ್ಟುಗಳು ಮಹಿಳಾ ಸಮಸ್ಯೆಗಳಿಗೆ ಸ್ಪಂದಿಸಿದ ಬಗೆಗಳನ್ನು ಹೇಮಲತಾ ಮಹಿಷಿಯವರ ಲೇಖನ ವಿವರಿಸುತ್ತದೆ. ಎಸ್. ಗಾಯತ್ರಿಯವರ ಲೇಖನವು 'ಲೈಂಗಿಕ ಕಿರುಕುಳ'ದ ಅರ್ಥ, ವ್ಯಾಪ್ತಿ, ಸುಪ್ರೀಮ್ ಕೋರ್ಟ್ ನಿರ್ದೇಶನ ಅದರ ಸಹಾಯದಿಂದ ಬದುಕಿನಲ್ಲಿ ಶೋಷಣೆಯ ಬಲೆಯಿಂದ ಹೊರಜಿಗಿದು ಗೆದ್ದವರ ಕಥನವನ್ನು ನೀಡುವ ಮೂಲಕ ಗಮನ ಸೆಳೆಯುತ್ತದೆ.

ಸಂಕುಲಜೀವ ಅವರ 'ಸೀತೆ ಅಹಲ್ಯೆ ನಾವು ನೀವು', ಪ್ರೊ. ಬಿ.ವಿ. ವೀರಭದ್ರಪ್ಪ ಅವರ 'ಪ್ರಾಚೀನ ಭಾರತದ ಸ್ತ್ರೀವಾದಿಗಳು', ಎಚ್.ಎಸ್. ಮಂಜುರಾಜ್ ಅವರ 'ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದವಳು' ಇವು ಹೊಸ ಒಳನೋಟಗಳನ್ನು ನೀಡುವ, ವಿಷಯವನ್ನು ಭಿನ್ನ ಆಯಾಮಗಳಿಂದ ಚರ್ಚಿಸಲು ಉದ್ದೇಶಿಸಿರುವ ಕಾರಣಕ್ಕೆ ಗಮನ ಸೆಳೆಯುತ್ತವೆ.

ಕಾಶ್ಮೀರದ ಲಲ್ಲೇಶ್ವರಿ, ಅಮೇರಿಕಾದ ಶ್ವೇತಭವನದ ಮುಂದೆ ಇಪ್ಪತ್ತು ವರ್ಷಗಳಿಂದ 'ಶಾಂತಿ ಕಾವಲು' ಕುಳಿತ ಕೋಸಿ, ಮರಾಠಿ ಆತ್ಮಕಥನಗಳ ಲೇಖಕಿಯರು, ಕಾಬೂಲಿವಾಲಾನ ಬಂಗಾಳಿ ಹೆಂಡತಿ- ಇವರನ್ನು ಪರಿಚಯಿಸುವ ಲೇಖನಗಳು ವಿಶಿಷ್ಟವಾದ ಮತ್ತು ಮಾಹಿತಿಪೂರ್ಣ ಲೇಖನಗಳಾಗಿವೆ.

ಸಂಪಾದಕಿ ನೇಮಿಚಂದ್ರ ಅವರು ಹೇಳುವಂತೆ 'ಒಟ್ಟು ಸಮಾಜ ಸುಧಾರಣೆಗೆ ಮಹಿಳಾ ಸಂಘಟನೆಯ ಅನಿವಾರ್ಯತೆಯನ್ನು ಇಲ್ಲಿನ ಲೇಖನಗಳು ವಿಶೇಷವಾಗಿ ಚರ್ಚಿಸಿವೆ. ಒಟ್ಟು ಕೃತಿಯಲ್ಲಿ ಶೇಕಡಾ ಐವತ್ತರಷ್ಟು ಲೇಖನಗಳು ಮಹಿಳಾ ಸಂಬಂಧೀ ವಿಚಾರಗಳ ಬಗ್ಗೆ ಚಿಂತಿಸಿದ ಪುರುಷರ ಲೇಖನಗಳಾಗಿವೆ. ಇವು ಒಟ್ಟು ಅಧ್ಯಯನಕ್ಕೆ ಏಕಮುಖ ಧೋರಣೆಯನ್ನು ತಪ್ಪಿಸಿ ಬಹುಮುಖೀ ಆಯಾಮವನ್ನು ನೀಡಲು ಶ್ರಮಿಸಿವೆ ಎಂಬುದು ಧನಾತ್ಮಕ ಅಂಶವಾಗಿದೆ. ಸ್ತ್ರೀವಾದಿ ಚಿಂತಕರ ಒಂದು ದೊಡ್ಡ ಗುಂಪನ್ನು 'ಮಹಿಳಾಲೋಕ' ಒಂದೆಡೆಗೆ ತಂದಿದೆ. ಇಂತಹ ಪ್ರಯತ್ನ ಸ್ವಾಗತಾರ್ಹ.

-ಡಾ. ಸಬಿಹಾ ಭೂಮಿಗೌಡ

ಪಿರಮಿಡ್ಡಿನೊಳಗೆ

ನಿನಗೆ ಗೊತ್ತೇ ಗೆಳತಿ
ಪಿರಮಿಡ್ಡಿನೊಳಗೆ ಎಲ್ಲವೂ ಇದ್ದಂತೆಯೇ ಇರುವುದಂತೆ.
ನಿಜ, ಇಲ್ಲಿ ಎಲ್ಲವೂ ಹಾಗೆಯೇ ಇದೆ.
ಸೂರ್ಯ ಚಂದ್ರರು ಬಂದು ಹೋಗುವುದ ಬಿಟ್ಟರೆ
ಬೇರಾವ ಚೋದ್ಯವೂ ಉಳಿದಿಲ್ಲ.
ಇಲ್ಲಿ ಯಾವುದೂ ಬದಲಾಗುತ್ತಿಲ್ಲ.
ದಿನ ಬೆಳಗಾದರೆ ಅದೇ ಪ್ರಶ್ನೆ.
ಸುತ್ತೆಲ್ಲ ಬರೇ ಶೂನ್ಯ.

ಸದಾ ಬೆಳಕಿಗಾಗಿ ಕಾತರಿಸುತ್ತಿದ್ದ ಕಣ್ಣುಗಳು
ರಾತ್ರಿ ಬೆಳಗಾಗುವುದೇ ಬೇಡವೆಂದು ಹರಸುತ್ತಿವೆ.
ಇದೇನು ವಿಕೃತಿ ಗೆಳತಿ?
ಈ ಬದುಕಿನ ಚಿತ್ರ ವಿಚಿತ್ರ ತಿರುವುಗಳು
ಯಾರದೋ ಕೈಗೊಂಬೆಗಳಾಗಿ
ಮತ್ಯಾರದೋ ಪಾಪದ
ಪ್ರಾಯಶ್ಚಿತ್ತಕ್ಕೆ ಪಾಲುದಾರರಾಗಿ....
ಯಾವಾಗ
ಬಯಸಿದಂತೆ ಬದುಕುವುದು ಗೆಳತಿ?

ಭರವಸೆಯ ಬೆಳಕು
ಪಿರಮಿಡ್ಡಿನ ಭದ್ರ ಗೋಡೆಗಳನ್ನು ಭೇದಿಸದು.
ಈ ಕಷ್ಟಗಳೂ ಅಷ್ಟೇ, ಹೊರಹೋಗಲೊಲ್ಲವು.
ಕಣ್ಣೀರನ್ನೇ ಕುಡಿದು ಎಷ್ಟು ದಿನ ಬದುಕಲಿ.
ಸುಖದ ಸುಂದರ ಮುಖವಾಡವಿರುವಂತೆಯೇ
ವಿದಾಯ ಹೇಳುತ್ತೇನೆ.
ಈ ಶೋಕ, ಪಿರಮಿಡ್ಡಿನ ಬದುಕು
ಎಲ್ಲವೂ ನನ್ನೊಂದಿಗೇ ಸಮಾಧಿಯಾಗಿಬಿಡಲಿ.

-ಹೇಮಾ ವೆಂಕಟೇಶ್

ಪ್ರಯತ್ನವಾದಿಗಳಿಗೆ ಮಾತ್ರ ವಿಜಯಶ್ರೀ ಒಲಿಯುವಳು, ಹೇಡಿಗಳಿಗಲ್ಲ -ನೆಹರು

ಅಣಿಕ

ಟಿವಿಯಲ್ಲಿ ಸುದ್ದಿ ನೋಡುತ್ತಾ ಕುಳಿತಿದ್ದೆ. ಸುದ್ದಿಸ್ಫೋಟ ಅಂತ ಬಂತು. ಕುತೂಹಲದಿಂದ ಅದನ್ನು ಓದಿದೆ. ವಿಷಯವೇನಪ್ಪ ಅಂದ್ರೆ ಯಾವುದೋ ತಲೆ ಮಾಸಿದ ನಿರ್ದೇಶಕನಿಗೂ, ಆತ ನಿರ್ದೇಶಿಸಿದ ಚಿತ್ರದ ನಟಿಗೂ ವಿವಾಹ ನಿಶ್ಚಯ ಆಯಿತಂತೆ. ಆತ ನಿರ್ದೇಶಿಸಿದ್ದು ಚಿತ್ರವನ್ನೋ ಅಥವಾ ನಟಿಯನ್ನೋ ಅನ್ನುವ ಅನುಮಾನ ಬಂದು ಈ ಸಂಶಯವನ್ನು ವೀಕ್ಷಕ ಮಹಾಪ್ರಭುಗಳಿಗೂ ಬಿತ್ತಬೇಕು ಎನ್ನುವ ಆಶಯದಿಂದ ಈ ಸುದ್ದಿ ಸ್ಫೋಟಿಸಿರಬೇಕು ಅಂದುಕೊಂಡೆ. ಈ ಸುದ್ದಿ ಓದಿದ ನಂತರ ಚಲನಚಿತ್ರ ನಿರ್ದೇಶನ ಮಾಧ್ಯಮ ಅನ್ನುವ ಮಾತನ್ನು ನಟಿ ನಿರ್ದೇಶಕನ ಮಾಧ್ಯಮ ಅಂತ ಮಾರ್ಪಡಿಸಿಕೊಂಡೆ. ಸಾಕಪ್ಪ ಈ ಸುದ್ದಿ ಸ್ಫೋಟಗಳ ಕಾಟ ಅಂತ ಟಿವಿ ಆಫ್ ಮಾಡಿ ಬದುಕಿಕೊಂಡೆ.

ಮಾರನೆ ದಿನ ಪತ್ರಿಕೆ ಮನೆಗೆ ಬಂದ ತಕ್ಷಣ ಕಣ್ಣುಜ್ಜಿಕೊಂಡು ಮೊದಲ ಪುಟದ ಮೇಲೆ ಕಣ್ಣಾಡಿಸಿದೆ. ಮಾಮೂಲಿನಂತೆ ಹೆಡ್ ಲೈನ್ ಸುದ್ದಿ-ಅದೇ ಭಯೋತ್ಪಾದಕರ ಕಾಟ, ಗಲಭೆ, ವಾಹನಗಳಿಗೆ ಬೆಂಕಿ ಇಂತಹದ್ದರಲ್ಲಿ ಯಾವುದೋ ಇರಬಹುದು ಎಂದುಕೊಂಡು ಅದರ ಕಡೆಗೆ ಗಮನ ನೀಡಲಿಲ್ಲ. ಒಂದು ಬಾಕ್ಸ್ ಐಟಂ ಸುದ್ದಿ ಇತ್ತು. ಅದೇನಪ್ಪ ಅಂದರೆ ಯಾವುದೋ ಸಿನಿಮಾ ನಟಿ ಶೂಟಿಂಗ್ ಸಮಯದಲ್ಲಿ ಬೈಸಿಕಲ್ಲಿನಿಂದ ಬಿದ್ದು ಕೈ ಕಿರುಬೆರಳಿಗೆ ತುಸು ಗಾಯ ಮಾಡಿಕೊಂಡಳಂತೆ! ಬರೀ ಕೊಲೆ, ಪುಂಡಾಟ, ಭಯೋತ್ಪಾದಕತೆ, ಅಪಘಾತ, ಸರಣಿ ಬಾಂಬ್ ಸ್ಫೋಟ ಇಂತಹವುಗಳನ್ನೇ ಓದಿ ಓದಿ ಬೇಸರ ಬಂದಿರುವ ಓದುಗ ಮಹಾಶಯರಿಗೆ ಕಾಮಿಕ್ ರಿಲೀಫ್ ಕೊಡಲು ಬುದ್ಧಿವಂತ ಪತ್ರಕರ್ತರು ಇಂತಹ ಸುದ್ದಿ ಪ್ರಕಟಿಸಿರಬೇಕು ಅನ್ನಿಸಿತಾದರೂ ಕೊಂಚ ಯೋಚಿಸಿದ ನಂತರ ಚಲನಚಿತ್ರ, ನಟ-ನಟಿಯರು ಕ್ಯಾಕರಿಸಿದರೂ, ಕೆಮ್ಮಿದರೂ ಅದು ಅಮೋಘ ಸುದ್ದಿಯಾಗಿ ಗೋಚರಿಸುತ್ತದೆ ಎಂಬ ಸತ್ಯದ ಸಾಕ್ಷಾತ್ಕಾರವಾಯಿತು.

ಈ ಸತ್ಯದ ಅರಿವಾದಾಗ... ನಾನೂ ಯಾಕೆ ಸಿನಿಮಾ ನಟನಾಗಿ ಪ್ರಸಿದ್ಧಿಗೆ ಬರಬಾರದು ಎಂಬ ಆಸೆ ಯಾವುದೋ ಮೂಲೆಯಲ್ಲಿ ಕಾಣಿಸಿಕೊಂಡಿತು. ಸಿನಿಮಾ ರಂಗದ ಪರಿಚಿತನ ಬಳಿ ಇದನ್ನ ತೋಡಿಕೊಂಡೆ. ಅವನು ಯಾಕಾಗಬಾರದು ಅಂತ ಉತ್ಸಾಹ ತೋರಿಸಿ ಫೋಟೋ ಸೆಷನ್‌ಗೆ ಅಂತ ಒಂದಷ್ಟು ದುಡ್ಡು ಕಿತ್ತುಕೊಂಡು ಫೋಟೋಗಳನ್ನು ತೆಗೆಸಿದ. ಕ್ಯಾಮೆರ ಮಿಸ್ಟೇಕು ಅಂತ ಕಾಣುತ್ತೆ. ಒಂದರಲ್ಲೂ ನಾನು ಚೆನ್ನಾಗಿ ಬಿದ್ದಿರಲಿಲ್ಲ. ಕ್ಯಾಮರಾಮನ್‌ನ ಕೇಳಿದರೆ 'ನೀವು ಇರೋದೆ ಹಾಗೆ' ಅಂತ ಮೂಗು ಮುರಿದ.

ನನ್ನ ಮನಸ್ಸು ಮುದುಡಿದರೂ ಗೆಳೆಯ ಗೆಲುವಾಗೇ ಇದ್ದ. 'ಹಿಂದಿನ ಕೊರವಂಜಿ ಓದಿದ್ಯಾ' ಅಂದ. 'ಇಲ್ಲ ಯಾಕೆ' ಕೇಳಿದೆ. 'ದಿಲೀಪ್ ಕುಮಾರ್ ದುಃಖದ ಸೀನು ಬಂದಾಗಲೆಲ್ಲ ಯಾವುದೇ ಸಿನಿಮಾದಲ್ಲಿ ಮುಖ ಮುಚ್ಚಿಕೊಳ್ತಿದ್ದ ಅಂತ ಬಂದಿತ್ತು. ಹಂಗೇ ನೀನೂ ಮಾಡಿದರಾಯ್ತು' ಅಂದ. ಅದೂ ಸರಿ ಅನ್ನಿಸಿತು. ದುಃಖದಸೀನಿಗೇನೋ ಸರಿ, ಬೇರೆ ಸನ್ನಿವೇಶಗಳಿಗೆ? ಆಗಲೂ ಮುಖ ಮುಚ್ಚಿಕೊಂಡೇ ಇರಬೇಕಾ ಹೇಗೆ?

ನನಗೆ ಮುಖ ತೋರಿಸಬೇಡ ಎಂದು ರೇಗಿದ ಕೃಷ್ಣ ದೇವರಾಯನ ಆಸ್ಥಾನಕ್ಕೆ ತೆನಾಲಿರಾಮಕೃಷ್ಣ ಮಡಕೆಯಿಂದ ಮುಖಮುಚ್ಚಿ ಬರುತ್ತಾನಲ್ಲ ಹಾಗಾಗುತ್ತೆ ನನ್ನ ಕತೆಯೂ. ಮುಖವನ್ನೇ ತೋರಿಸದ ಹೀರೋ ನಾನಾದರೆ ಪ್ರಸಿದ್ಧಿಗೆ ಬರುವುದು ಹೇಗೆ ಅನ್ನೋ ವಿಷಯವನ್ನು ಸಾಂಗವಾಗಿ ಗೆಳೆಯನಿಗೆ ವಿವರಿಸಿದೆ. ಅವನ ಹತ್ತಿರ ಅದಕ್ಕೂ ಒಂದು ಸೊಲ್ಯೂಷನ್ ಇತ್ತು. 'ನೀನು ನಕ್ಕಾಗ ಅತ್ತ ಹಾಗೆ ಕಾಣುತ್ತಲ್ಲ, ಅದನ್ನೇ ಅಳುವ ಸೀನಿಗೆ ಹಾಕಿಕೊಂಡ ರಾಯಿತು' ಅಂದ. 'ಸಿನಿಮಾದಲ್ಲಿ ನಟಿಸುವ ಅವಕಾಶ ಕಲ್ಪಿಸುತ್ತೀನಿ' ಅನ್ನೋ ಭರವಸೆ ನೀಡಿ ಹೋದ. ಖರ್ಚಿಗೆ ಅಂತ ಒಂದಷ್ಟು ಹಣ ಪಡೆದ. ಅದು ದೊಡ್ಡ ವಿಷಯ ಅಲ್ಲ ಬಿಡಿ.

ಒಂದೆರಡು ದಿವಸದಲ್ಲೇ ಗೆಳೆಯನ ಫೋನು ಬಂತು. ಅವನು ನನಗೆ ಸಿನಿಮಾದಲ್ಲಿ ಅವಕಾಶ ಕಲ್ಪಿಸಲು ಇನ್ನಿಲ್ಲದಷ್ಟು ಪ್ರಯತ್ನಿಸಿದನಂತೆ. ಕಲೆಯ ಗಂಧ ಇಲ್ಲದ ನಿರ್ಮಾಪಕರು, ನಿರ್ದೇಶಕರುಗಳೇ ತುಂಬಿರುವ ಸಿನಿಮಾ ರಂಗದಲ್ಲಿ ನನ್ನ ನಟನಾ ಸಾಮರ್ಥ್ಯಕ್ಕೆ ಬೆಲೆ ಇಲ್ಲವಾಗಿದೆಯಂತೆ. ವರ್ಷಕ್ಕೆ ಒಂದೋ ಎರಡೋ ಸಿನಿಮಾದಲ್ಲಿ ನಟಿಸಿದರೇನೂ ಭಾಗ್ಯವಿಲ್ಲವಂತೆ. ದಿನಾ ಜನಮನ, ಮನೆಗಳಿಗೆ ಲಗ್ಗೆ ಹಾಕಲು ಧಾರಾವಾಹಿಗಳೇ ಸೂಕ್ತವಂತೆ. ಅದರಲ್ಲಿ ಪ್ರಯತ್ನಿಸುತ್ತೇನೆ. ಇದು ಆ ಕರೆಯ ಸಾರಾಂಶ.

ಗೋಹೋ ಪಿಕ ಪಿಕ



ಇದೂ ಒಳ್ಳೆಯ ಯೋಜನೆಯೇ ಅಂದುಕೊಂಡ ನಾನು ಅಂದಿನಿಂದ ಧಾರಾವಾಹಿಗಳನ್ನು ನೋಡಲು ಪ್ರಾರಂಭಿಸಿದೆ. ಈ ವೀಕ್ಷಣೆಯ ಫಲವೇ ಈ ಕೆಳಕಂಡ ಸೂತ್ರಗಳು.

ಮೊದಲನೆಯ ಸೂತ್ರ ಏನು ಅಂದರೆ ಧಾರಾವಾಹಿಯ ವೀಕ್ಷಕರಿಗೆ ಬುದ್ಧಿ ಇಲ್ಲ; ಅವರ ತಲೆಯಲ್ಲಿ ತುಂಬಿರುವುದು ಬರಿ ಲದ್ದಿ; ಅವರೆಲ್ಲ ಮೂರ್ಖರು ಎಂಬುದರ ಬಗ್ಗೆ ದೃಢವಾದ ನಂಬಿಕೆ ಇರಬೇಕು. ಇದನ್ನು ನಂಬಿದರೆ ಮಾತ್ರ ಧಾರಾವಾಹಿಯನ್ನು ಯಶಸ್ವಿಯಾಗಿ ಯದ್ವಾ ತದ್ವಾ ಎಳೆಯುತ್ತಾ ಹೋಗಬಹುದು.

ಧಾರಾವಾಹಿಯ ಕತೆಗೂ, ನಿಜ ಜೀವನಕ್ಕೂ ಯಾವುದೇ ಅಂದರೆ ಬಾದರಾಯಣ ಸಂಬಂಧವೂ ಇರಕೂಡದು. ಇದು ಎರಡನೆ ಸೂತ್ರ. ಉದಾಹರಣೆಗೆ ಧಾರಾವಾಹಿಯ ಪಾತ್ರಗಳೆಲ್ಲವೂ ಕೋಟ್ಯಾಧೀಶರೇ ಆಗಿರಬೇಕು; ಉದ್ಯೋಗ ಪತಿಗಳಾಗಿರಬೇಕು; ವ್ಯವಹಾರವೆಲ್ಲ ಮನೆಯ ಮಹಿಳೆಯರ ಕೈಯಲ್ಲೇ ಇರಬೇಕು.... ಅರೆ ಈ ದೇಶದಲ್ಲಿ ಹೀಗೆ ನಡೆಯಲು ಸಾಧ್ಯವೆ? ವೀಕ್ಷಕರು ಇದನ್ನು ಸಹಿಸುತ್ತಾರೆಯೆ? ಎಂಬ ಪ್ರಶ್ನೆ ಉದ್ಭವಿಸಿದರೆ ನೀವು ಧಾರಾವಾಹಿ ನಿರ್ಮಿಸಲು ಅನರ್ಹರು!

ಮೂರನೆ ಸೂತ್ರವು ನಿರ್ದೇಶಕ ಪ್ರಗತಿಪರನೋ ಅದರ ವಿರೋಧಿಯವನೋ ಎಂಬುದನ್ನು ಅವಲಂಬಿಸಿದೆ. ಪ್ರತಿಗಾಮಿ ಆದರೆ ಚಿಂತೆ ಇಲ್ಲ, ವಿವಾಹ ಬಾಹಿರ ಸಂಬಂಧ ತುರುಕಿ ವೀಕ್ಷಕರಲ್ಲಿ ವಿವಿಧ ರಸಗಳನ್ನು ಉಂಟುಮಾಡಬಹುದು. ಪ್ರಗತಿಪರ ನಿರ್ದೇಶಕನಾದರೆ ಪ್ರಪಂಚದ ಎಲ್ಲಾ ಸಮಸ್ಯೆಗಳನ್ನೂ ಧಾರಾವಾಹಿಯಲ್ಲಿ ತುರುಕಬೇಕು. ಜಾಗತೀಕರಣ ಅವರಿಗೆ ಅತಿ ಮೆಚ್ಚು.

ಇದೇ ಇಲ್ಲದಿದ್ದರೆ ಇದೆಂತಹ ಧಾರಾವಾಹಿ? ಬಹುರಾಷ್ಟ್ರೀಯ ಕಂಪನಿಗಳ ಮೋಸದ ಮಾತುಗಳಿಗೆ ಮರುಳಾಗಿ ರೈತನೊಬ್ಬ 'ಪಿಕ ಪಿಕ' ಬೆಳೆ ಬೆಳೆದ. ಮೊದಲ ವರ್ಷ ಲಕ್ಷಾಂತರ ರೂಪಾಯಿ ಲಾಭ ಪಡೆದ. ಹಳ್ಳಕ್ಕೆ ಬಿದ್ದ ಕುರಿಗಳಂತೆ ಆ ಪ್ರದೇಶದ ರೈತರೆಲ್ಲರೂ ಅದನ್ನು ಬೆಳೆದರು. ಕಂಪನಿ ಕೈ ಎತ್ತಿತು. ರೈತರು ಕಂಗಾಲಾದರು. ಕೋಟ್ಯಂತರ ರೂಪಾಯಿ ನಷ್ಟ ಅನುಭವಿಸಿದರು. ಕೆಲವರು ಆತ್ಮಹತ್ಯೆಗೆ ಶರಣಾದರು. ಇಂತಹ ಕತೆ ಚಿತ್ರಿಸಿದರೆ.... ನೀವು ಬುದ್ಧಿ ಜೀವಿ ನಿರ್ದೇಶಕರು! ನಿರ್ಮಾಪಕರು! ಯಾವನಾದರೂ ತಲೆ ಕೆಟ್ಟ ವೀಕ್ಷಕ 'ಸಮಸ್ಯೆ ಸರಿಸ್ವಾಮಿ, ಪರಿಹಾರ ವೇನು?' ಎಂದು ಕೇಳಿಯಾನೆಂಬ ಆತಂಕ ಬೇಡ. ಸೂತ್ರ ಒಂದು ನೆನಪಿರಲಿ. ಈ ಸೂತ್ರಕ್ಕೂ ಅಪವಾದವೆಂಬಂತೆ ಇಂತಹ ಪ್ರಶ್ನೆ ಎದುರಾಯಿತು ಅನ್ನಿ. 'ಗೋಹೋ ಪಿಕ ಪಿಕ' ಅನ್ನಿ. ಸಾರ್ವಜನಿಕ ಸಮಾರಂಭಗಳಲ್ಲಿ ಹೀಗೆ ಹೇಳುವುದು ಉತ್ತಮ. ನಿಮ್ಮ ಉತ್ತರದಿಂದ ಸೂತ್ರ ಒಂದರ ಪ್ರೇಕ್ಷಕರು ಗಹಗಹಿಸಿ ನಗುತ್ತಾರೆ. ಪ್ರಶ್ನೆ ಕೇಳಿದವನು ಅಪಮಾನಿತ ನಾಗುತ್ತಾನೆ. ಇಂತಹ ಪ್ರಶ್ನೆ ಕೇಳುವರು ಇತರೆ ಯಾರೇ ಇದ್ದರೂ ತೆಪ್ಪಗಾಗುವುದು ಖಂಡಿತ. ಅದು ಸರಿ ಇದು ಏನು 'ಗೋಹೋ ಪಿಕ ಪಿಕ' ಅಂದಿರಾ... ಅದೇ ಸ್ವಾಮಿ 'ಹೋಗೋ ಕಪಿ ಕಪಿ' ಅಂತ!

ಇದಕ್ಕೆ ಸಂಬಂಧಿಸಿದಂತೆ ಇನ್ನೊಂದು ಉದಾಹರಣೆ : ಶಿಕ್ಷಣದ ವ್ಯಾಪಾರೀಕರಣ ಕುರಿತ ಕತೆ. ಅದೇ ತಂತ್ರ. ಮೆಡಿಕಲ್‌ಗೋ, ಇಂಜಿನಿಯರಿಂಗ್‌ಗೋ ಸೀಟು ಸಿಗಲಿಲ್ಲ ಅಂತ ಪ್ರತಿಭಾವಂತ ಯುವತಿ/ಯುವಕನ ಸಾವು! ಇದನ್ನು ನೋಡಿದಾಗ ಯಾವ ತಾಯಿಯ ಕರುಳು ಚುರುಕ್ ಅನ್ನುವುದಿಲ್ಲ? ಯಾವ ವೀಕ್ಷಕನ ಕಣ್ಣಲ್ಲಿ ನೀರು ಕಾಣಿಸುವುದಿಲ್ಲ? ಅಷ್ಟಕ್ಕೆ ಮುಗಿಯಿತು ಬುದ್ಧಿಜೀವಿಯ ಕರ್ತವ್ಯ. ಈ ಸಮಸ್ಯೆಗೆ ಪರಿಹಾರ? 'ಗೋಹೋ ಪಿಕ ಪಿಕ!'

ಕತೆಗೆ ಸನ್ನಿವೇಶಗಳು ಪೂರಕವಾಗಿ ಇರಬೇಕು ಎಂದಿಲ್ಲ, ಹಾಗೆ ನೋಡಿದರೆ ಧಾರಾವಾಹಿ ಕತೆಗೆ ಸನ್ನಿವೇಶಗಳು ಪೂರಕವಾಗಿರಬಾರದು ಎಂಬುದೇ ನಾಲ್ಕನೆಯ ಸೂತ್ರ. ವೀಕ್ಷಕರಿಗೆ ಬೇಸರ ತರಿಸುತ್ತಿದೆ ಎಂದಾಗ ಒಂದು ಹೊಸ ಪಾತ್ರ ತನ್ನಿ. ಯಾಕೆ ತರಬೇಕು? ಅದರ ಅವಶ್ಯಕತೆಯೇನು ಎಂಬುದು ಮುಖ್ಯ ಅಲ್ಲ, ವೀಕ್ಷಕ ಮಹಾಪ್ರಭುವಿಗೆ ಬೇಸರ ತರಿಸಬಾರದು ಎಂಬುದು ನಿಮ್ಮ ಧ್ಯೇಯ ಆಗಿರಲಿ. ಬುದ್ಧಿವಂತ ನಿರ್ದೇಶಕರು ಇತ್ತೀಚೆಗೆ ಒಂದು ಹೊಸ ಉಪಾಯ ಕಂಡುಹಿಡಿದಿದ್ದಾರೆ. ಅದನ್ನು ಒಂದು ಉದಾಹರಣೆ ಸಹಿತ ವಿವರಿಸಲಾಗಿದೆ : ಬೇರೆ ಬೇರೆ ಜಾತಿಯ ಯುವಕ ಯುವತಿಯ ನಡುವೆ ಪ್ರೀತಿ ಅಂಕುರಿಸಿದೆ. ಹೀಗೆ ಅಂಕುರಿಸುವುದಕ್ಕೇ ಹಲವು ದಿನಗಳ ಕಾಲ ಧಾರಾವಾಹಿ ಎಳೆಯಬಹುದು. ಅದು ಹಾಗಿರಲಿ ಇದಕ್ಕಿಂತಲೂ ಭಯಂಕರ ಪ್ರಗತಿಪರ ನಿರ್ದೇಶಕನಾದರೆ ಯಾವುದೋ ಮಠದ ಸ್ವಾಮಿ ಬಂದು ಹುಡುಗಿಯನ್ನು ಪ್ರೀತಿಸುವಂತೆ ತೋರುವುದು. ಇದೇ ಅಲ್ಲವೆ ಬಹಳ ಮಠಗಳಲ್ಲಿ ನಡೆಯುತ್ತಿರುವುದು ಎಂದು ಮೂಗು ಮುರಿಯಬೇಡಿ. ನೀವು ಹೇಳುತ್ತಿರುವುದು ಗುಪ್ತವಾಗಿ ಪ್ರೀತಿಸುವುದು. ಇದು ಹಾಗಲ್ಲ, ಸನ್ಯಾಸತ್ವವನ್ನು ತ್ಯಜಿಸಿ ಪ್ರೀತಿಸುವುದು. ಕ್ರಾಂತಿಕಾರಕ ಐಡಿಯಾ ಅಲ್ಲವಾ... ಆ ಮೇಲೆ ಏನಾಗಬಹುದು? ಮಠದವರಿಂದ ಬೆದರಿಕೆ ಕರೆ! ಹಣದ ಆಮಿಷ! ಇದನ್ನು ತಡೆದುಕೊಳ್ಳುವುದು ಹೇಗೆ? ಆಗ ಆತನಿಗಿರುವ ಮಾರ್ಗ ಎಂದರೆ, ದೈನಿಕ ಧಾರಾವಾಹಿಯ ಕೊನೆಯಲ್ಲಿ ಒಂದು ಪ್ರಶ್ನೆ ಹಾಕುವುದು - ಇಂತಹ ವಿವಾಹ ನಿಮಗೆ ಸಮ್ಮತಿಯೆ? ನಿಮ್ಮ ಅಭಿಪ್ರಾಯವನ್ನು ಈ ವಿಳಾಸಕ್ಕೆ ತಿಳಿಸಿ. ಜನರು ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾರೋ, ಬಿಡುತ್ತಾರೋ ಅಲಾಯಿದ. ನಿರ್ದೇಶಕ ಮಾತ್ರ ಇಷ್ಟು ಸಾವಿರ ಜನ ಈ ರೀತಿ ಅಭಿಪ್ರಾಯ ಸೂಚಿಸಿದ್ದಾರೆ, ಇಷ್ಟು ಸಾವಿರ ಜನ ಈ ರೀತಿ ಅಭಿಪ್ರಾಯ ಸೂಚಿಸಿದ್ದಾರೆ. ಆದುದರಿಂದ ವೀಕ್ಷಕರ ಅಭಿಪ್ರಾಯದ ಮೇರೆಗೆ ಅವರು ಮದುವೆಯಾಗು ವುದನ್ನು ತಡೆದು, ಕತೆ ಬದಲಾಯಿಸಲಾಯಿತು ಎಂದು ಹೇಳಿದರಾಯಿತು! ಎಷ್ಟು ಜನರು ಬೇಡ ಎಂದರು ಯಾವನಿಗೂ ತೋರಿಸಬೇಕಾಗಿಲ್ಲ! ಹೇಳಿದ್ದನ್ನು ಕೇಳುವ ಸೂತ್ರ ಒಂದರ ಜನ ಇವರು! ಒಂದು ವೇಳೆ ಯಾವನಾದರೂ ಈ ಸೂತ್ರಕ್ಕೆ ಅಪವಾದ ಇದ್ದು 'ಸಾರ್ವತ್ರಿಕ ಅಭಿಪ್ರಾಯವೇ ಸತ್ಯ ಅಲ್ಲ' ಅಂದರೆ 'ಗೋಹೋ ಪಿಕ ಪಿಕ' ಸೂತ್ರ ಇದ್ದೇ ಇದೆ!


ಧಾರಾವಾಹಿ ನಿರ್ಮಾಪಕ, ನಿರ್ದೇಶಕರು ನೆನಪಿಡಬೇಕು. ಕತೆಯಲ್ಲಿ ಒಂದು ಕೊಲೆ, ಕೋರ್ಟಿನ ಸೀನುಗಳು ಇರಬೇಕು. ಕೊಲೆಗಾದರೋ ಒಂದೇ ದಿನ ಸಾಕಾಗಬಹುದು. ನಂತರದ ಕೋರ್ಟು ಸೀನುಗಳನ್ನು ನಿರ್ದೇಶಕರ ಜೀವನಪರ್ಯಂತ ಎಳೆಯಬಹುದು. ಖರ್ಚು ಕಡಿಮೆ.

ಬುದ್ಧಿಯ ಚಮತ್ಕಾರ ಒಂದಿದ್ದರೆ ಸಾಕು. ಜನ ಮೆಚ್ಚುಗೆ ಖಚಿತ. ಯಾಕೆಂದರೆ ಅವನು ಸೂತ್ರ ಒಂದರ ವೀಕ್ಷಕ ಮಹಾಪ್ರಭು! ಜನರಿಗೆ ಅಸಹನೆ ಮೂಡಿತು ಅನ್ನಿ. ಸೂತ್ರ ನಾಲ್ಕರ ಅಂತರ್ಜಾತಿ ವಿವಾಹ ತಡೆದ ವಿವರಣೆ ನೋಡಿ. ಆದರೆ ಒಂದೇ ವ್ಯತ್ಯಾಸ. 'ನಾನು ಕೊಲೆಗಾರ ಯಾರು ಎಂದು ತಿಳಿಸಿದ ನಂತರ ಈ ಧಾರಾವಾಹಿ ನಿಲ್ಲಿಸಬೇಕೆಂದಿದ್ದೆ. ಆದರೆ ಟಿವಿ ಚಾನೆಲ್‌ರವರು ಅದನ್ನು ಮುಂದುವರೆಸಿ ಎಂದಿದ್ದಾರೆ...' ಇತ್ಯಾದಿ ಹೇಳಿ. ಅಭಿಪ್ರಾಯ ಭೇದ ಬಂದರೆ, ಬಂದರೆ ಏನು ಬಂದೇ ಬರುತ್ತೆ, ಬಂದರೇನಂತೆ, ಇದ್ದೇ ಇದೆ ಆ ಸೂತ್ರ 'ಗೋಹೋ ಪಿಕ ಪಿಕ!'

-ಎಚ್.ಎಲ್. ಕೇಶವಮೂರ್ತಿ

ದುಡ್ಡಿರುವ ದಡ್ಡ ಡಾಕ್ಟರ್ ಆಗಬಹುದೇ?

ಡಾ. ರಾಜ್‌ರವರ ಬಗ್ಗೆ ಉತ್ತಮ ಲೇಖನಗಳನ್ನು ಪ್ರಕಟಿಸಿದ್ದೀರಿ. ಚಿವರಿನ ಮನುಷ್ಯ ಬಂಗಾರದ ಮನುಷ್ಯನಾಗಿ ರೂಪಾಂತರ ಗೊಂಡಿದ್ದನ್ನು ಶಿವಸುಂದರ್‌ರವರು ಪಸ್ಪಷ್ಟವಾಗಿ ಮೂಡಿಸಿದ್ದಾರೆ. ರಾಜ್ ಶ್ರೀಮಂತಿಕೆಯನ್ನು ಹೊಂದಿದ್ದರೂ ತುಂಬಾ ಸರಳತೆಯಿಂದಿದ್ದರು. ತಮ್ಮ ಅನೇಕ ಮಾತುಗಳಲ್ಲಿ ಹಿಂದಿನ ಜೀವನವನ್ನು ನೆನಪಿಸಿಕೊಳ್ಳುತ್ತಿದ್ದರು. ಉದಾತ್ತ ಜೀವನ, ಉನ್ನತ ಚಿಂತನೆ ಹೊಂದಿದ್ದ ರಾಜ್ ನಮ್ಮಿಂದ ದೈಹಿಕವಾಗಿ ಮರೆಯಾಗಿರಬಹುದು, ಆದರೆ ಅವರು ಅಭಿಮಾನಿಗಳಲ್ಲಿ ಅಮರ.



-ಎಂ. ಸದಾಶಿವ, ತುಮಕೂರು

ರಾಜಕೀಯದಲ್ಲಿ ಎಲ್ಲ ಕಡೆಗೂ ಸಲ್ಲುವ ಖ್ಯಾತಿಯ, ಯಾವಾಗಲೂ ಗೆಲ್ಲುವ ಕುದುರೆ ಎನಿಸಿರುವ ಎರಡೂ ದಂಡೆಯ ಮೇಲೆ ಕೈಯಿಟ್ಟು 'ಕಿಲಸ' ಸಾಧಿಸಿಕೊಳ್ಳುವ ಚಾಣಾಕ್ಷತೆಯ ನೇತಾರ ನಮ್ಮ ಎಂ.ಪಿ. ಪ್ರಕಾಶ್. ಅಷ್ಟೇ ಅಲ್ಲದೇ ಅಭಿನೇತಾ, ನ್ಯಾಯವಾದಿ, ಸಮಾಜವಾದಿ, ಸಾಹಿತ್ಯಾಭಿಮಾನಿ, ಲೇಖಕ, ವಾಗ್ಮಿ ಎಂದೆಲ್ಲ ಪ್ರಸಿದ್ಧರಾಗಿದ್ದಾರೆ ಈ ಮಾಜಿ ಉಪಮುಖ್ಯಮಂತ್ರಿ. ಹಾಲಿ 'ಅಪ್ಪ-ಮಗ'ನ 'ಜೆಡಿಎಸ್' ಪಕ್ಷದ ರಾಜ್ಯಾಧ್ಯಕ್ಷರಾಗಿ ಇತ್ತೀಚೆಗೆ ಪಟ್ಟಾಭಿಷಿಕ್ತರಾದ ಎಂ.ಪಿ. ಪ್ರಕಾಶ್ ನಾಲ್ವತ್ತೈದು ವರ್ಷಗಳ ಹಿಂದೆ ಮುಂಬೈ ವಿಶ್ವವಿದ್ಯಾಲಯದಲ್ಲಿ ನನ್ನ ಸಹಪಾಠಿ ಹಾಗೂ ಹಾಸ್ಟೆಲ್‌ಮೇಟ್ ಆಗಿದ್ದರು. ಸ್ವಭಾವತಃ ಒಳ್ಳೆಯ ಮನುಷ್ಯ -ಹಮ್ಮು ಬಿಮ್ಮು ರೀವಿ ಠೇಂಕಾರ ಪ್ರದರ್ಶಿಸದ ಸರಳ ಸಜ್ಜನ ವ್ಯಕ್ತಿ. "ರಾಜಕೀಯ ಬಿಟ್ಟು ಬೇರೇನು ಮಾಡುವುದು -ನಾನೀಗ ತಿರುಗಿ ಬಾರದ ಬಿಂದು ತಲುಪಿದ್ದೇನೆ" ಎಂದು ಸಂದರ್ಶನವೊಂದರಲ್ಲಿ ಅವರೇ ಒಪ್ಪಿಕೊಂಡಿದ್ದಾರೆ. ಹೆಗಡೆಯವರ ಪಾಳೆಯ ತ್ಯಜಿಸಿ ಮಣ್ಣಿನ ಮಗನ ಶಿಬಿರದಲ್ಲಿ ಆಶ್ರಯ ಪಡೆದಿರುವ ಪ್ರಕಾಶ್, ಅವಮಾನ, ಹೇವ, ಸಂಕೋಚ, ಮುಜುಗರ ಮುಂತಾದ ಶಬ್ದಗಳನ್ನೆಲ್ಲ ಕಟ್ಟಿ ಗೂಟಕ್ಕೆ ನೇತು ಹಾಕಿ ಅಧಿಕಾರದಂಗಳದಲ್ಲಿ ಗ್ರೇಟ್ ಸರ್ವೈವರ್ ಎಂಬ (ಅಪ)ಕೀರ್ತಿಗೆ ಭಾಜನರಾಗಿ ಗೌಡರ ಭಜನೆಯಲ್ಲಿ ತೊಡಗಿದ್ದಾರೆ.

-ಪ್ರೊ. ಆರ್.ವಿ. ಹೊರಡಿ, ಧಾರವಾಡ

ವೈದ್ಯಕೀಯದಂತಹ ಶಿಕ್ಷಣ ಕ್ಷೇತ್ರದಲ್ಲಿ ಮೀಸಲಾತಿ ವಿರೋಧಿಸಿ ಪ್ರತಿಭಟನೆ ನಡೆಸುತ್ತಿರುವವರ ವಾದ ಪ್ರತಿಭೆ ಕಡಿಮೆ ಇದ್ದವರು ವೈದ್ಯರಾಗಬಾರದೆಂದು. ಆದರೆ ಹೆಚ್ಚು ಹೆಚ್ಚು ಡೊನೇಶನ್ ಕೊಟ್ಟು ಮೆಡಿಕಲ್ ಸೀಟು ಗಿಟ್ಟಿಸಿದ ದಡ್ಡರು ಡಾಕ್ಟರ್‌ರಾಗುವುದರ ಬಗ್ಗೆ ಇವರು ಏಕೆ ವಿರೋಧಿಸುತ್ತಿಲ್ಲ? ದುಡ್ಡಿರುವ ದಡ್ಡನೊಬ್ಬ ಡಾಕ್ಟರ್ ಆಗಬಹುದಾದರೆ ಮೀಸಲಾತಿಯಡಿಯಲ್ಲಿ ಬಡವನೊಬ್ಬ ಡಾಕ್ಟರ್ ಆಗುವುದನ್ನು ವಿರೋಧಿಸುವುದು ಯಾವ ನ್ಯಾಯ?

-ಬಸವರಾಜ ಬೆಸ್ತರ್, ಹರಪನಹಳ್ಳಿ

ಹೊಗ ತೆಗ ಟೀ

ಗಲ್ಲಿಗೊಂದು ಪಕ್ಷ
ಬೀದಿಗೊಂದು ವೇಷ
ಓಟು ಪಡೆಯಲು
ನಾನಾ ಸಮಾವೇಷ
ಗದ್ದೀಲೆ ಅವರೇ ಆವೇಶ
ವರ್ಷಕ್ಕೊಂದು ಸರ್ಕಾರ
ತತ್ವ ಸಿದ್ಧಾಂತಕ್ಕೆ ಧಿಕ್ಕಾರ
ಅಧಿಕಾರ ಮೋಜೇ ಈಗ ಸಾಕ್ಷಾತ್ಕಾರ.
ಸಮಯ ಸಾಧಕರ ಅವತಾರ

-ಅ.ರಾ. ಮಂಜುನಾಥ್, ಗೆದರೆ

ಶಿವರಾಜ್ ಆತ್ಮಕತೆಗೆ ಕಾಯುತ್ತಾ....



ಈ ವಾರದ ಡಾ. ರಾಜ್‌ಕುಮಾರ್ ಮತ್ತು ಪುತ್ರ ಶಿವರಾಜ್‌ಕುಮಾರ್ ಇವರ ಚಿತ್ರ ಹೊತ್ತು ಬಂದ ಪತ್ರಿಕೆ ನೋಡಲು ಬಲು ಸುಂದರವೆನಿಸಿತು. ಈ ವಾರದಿಂದ ಶುರುವಾದ ರಾಜ್ ಕುಟುಂಬದ ಹಿರಿಯ ಪುತ್ರ ನಟ ಶಿವರಾಜ್‌ಕುಮಾರ್ ಅವರ ಆತ್ಮಕತೆ ಓದಿ ಖುಷಿ ಯಾಯಿತು. ಡಾ. ರಾಜ್ ಅವರ ಸಾವು ನಾಡಿನ ಜನಕ್ಕೆ ಮತ್ತು ಅವರ ಕುಟುಂಬಕ್ಕೆ ನೋವು ತರಿಸಿದೆ. ಶಿವರಾಜ್‌ಕುಮಾರ್ ಅವರ ಆತ್ಮಕತೆ ಪ್ರತಿ ಸಂಚಿಕೆಯಲ್ಲೂ ತಪ್ಪದೆ ಮೂಡಿಬರಲಿ.

-ರಮಜಾನ ಕೆ. ಕೊರ್ತಿ, ಬಾದಾಮಿ

ಪ್ರಯತ್ನ-ಸಾಹಸವೇ ಲಕ್ಷ್ಮಿಯ ನಿವಾಸಸ್ಥಾನ -ಅನಾಮಿಕ

ಅಪ್ಪಾಜಿಗೇ ನಾನು 'ಅಪ್ಪಾಜಿ' ಆಗಿದ್ದಾಗ

ಆಗ ನಮ್ಮ ಮನೆಯಲ್ಲಿ ನಾನೇ ಚಿಕ್ಕವನಾಗಿದ್ದರೂ, ಮನೆಯಲ್ಲಿನವರೆಲ್ಲರೂ-ಅಪ್ಪಾಜಿ ಸೇರಿದಂತೆ- ನನ್ನನ್ನೇ 'ಅಪ್ಪಾಜಿ' ಅಂತ ಕರೆಯುತ್ತಿದ್ದರು. ಇವತ್ತು ಈ ಮಾತನ್ನು ನಿಮ್ಮ ಮುಂದೆ ಹೇಳುತ್ತಿರುವಾಗ ಒಂದೆಡೆ ಸಂತೋಷವಾಗುತ್ತಿದೆ; ಇನ್ನೊಂದೆಡೆ ನನ್ನ ಹೃದಯ ತುಂಬಿ ಬರುತ್ತಿದೆ.


ನನ್ನನ್ನು ಅಪ್ಪಾಜಿ ಎಂದು ಆಗ ಎಲ್ಲರು ಕರೆಯಲು ಮುಖ್ಯ ಕಾರಣ ನಾನು ಚಿಕ್ಕವನಿದ್ದಾಗ ನೋಡಲು ನನ್ನ ಅಪ್ಪಾಜಿಯ ಅಪ್ಪಾಜಿ -ಅಂದರೆ ನನ್ನ ತಾತನ-ತರಹ ಕಾಣಿಸುತ್ತಿದ್ದೆನಂತೆ. ಹೀಗಾಗಿ ಅವರ ಫೀಲ್‌ಗೋಸ್ಕರ ಅಪ್ಪಾಜಿಯವರು ನನ್ನನ್ನು ಅಪ್ಪಾಜಿ ಎಂದು ಕರೆಯುತ್ತಿದ್ದರು. ಇದನ್ನೆಲ್ಲ ಈಗ ನೆನೆಸಿಕೊಳ್ಳುವಾಗ ನನ್ನ ಕಣ್ಣೆದಿರು ನನ್ನ ಅಪ್ಪಾಜಿಯ ನಗುಮುಖ ಕಾಣಿಸುತ್ತಿದೆ.

ನನ್ನ ಅಪ್ಪ- ಅಮ್ಮ ಮದುವೆಯಾಗಿ ಸುಮಾರು ಎಂಟು ವರ್ಷಗಳಾಗಿದ್ದರೂ ಅವರಿಗೆ ಮಕ್ಕಳಾಗಿರಲಿಲ್ಲ, ಆ ದಿನಗಳಲ್ಲಿ ನಮ್ಮದು ಜಾಯಿಂಟ್ ಫ್ಯಾಮಿಲಿ. ಅಪ್ಪಾಜಿ, ನಾಗತ್ತೆ ಶಾರದತ್ತೆ, ನನ್ನ ತಾಯಿ, ವರದಣ್ಣ, ಶಾರದಮ್ಮ ಎಲ್ಲರೂ ಮದರಾಸಿನಲ್ಲಿ ಒಟ್ಟಿಗೆ ಒಂದೇ ಮನೆಯಲ್ಲಿ ಜೀವನ ನಡೆಸುತ್ತಿದ್ದರು.

ನಿರೂಪಣೆ: ಸದಾಶಿವ ಶೆಣೈ


2

ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!



ನನ್ನ ಅಪ್ಪಾಜಿಗೆ ಇಬ್ಬರು ತಂಗಿಯರು. ಶಾರದತ್ತೆ ಮತ್ತು ನಾಗತ್ತೆ. ಇಬ್ಬರು ತಂಗಿಯರಿಗೂ ಮದುವೆಯಾಗಿ ಮಕ್ಕಳಾಗಿದ್ದರು. ಮೊದಲ ತಂಗಿ ನಾಗತ್ತೆಗೆ ನಾಲ್ಕು ಜನ ಮಕ್ಕಳು: ಗೋಪಾಲ, ಗೋವಿಂದು, ಭರತ್ ಮತ್ತು ಶೇಖರ್. ಎರಡನೇ ತಂಗಿ ಶಾರದತ್ತೆಗೆ ಮೂರು ಜನ ಮಕ್ಕಳು: ಸೀನು, ರಾಮ ಮತ್ತು ಗೀತ.

ಹೀಗೆ ಅವಿಭಕ್ತ ಕುಟುಂಬದಲ್ಲಿ ಎಲ್ಲರೂ ಸಂತೋಷವಾಗಿದ್ದರೂ ನನ್ನ ಅಪ್ಪಾಜಿಗೆ ಇನ್ನೂ ಮಕ್ಕಳಾಗಿಲ್ಲವಲ್ಲಾ ಎಂಬ ಕೊರಗು ಮನೆಯವರಿಗಿತ್ತಂತೆ. ಆದರೆ ಅಪ್ಪಾಜಿ ಮಾತ್ರ ಇದರ ಬಗ್ಗೆ ತಲೆ ಕೆಡಿಸಿ ಕೊಳ್ಳದೆ "ಎಲ್ಲವೂ ಆ ಭಗವಂತನ ಇಚ್ಛೆ" ಎನ್ನುತ್ತಾ ಸುಮ್ಮನಿರುತ್ತಿದ್ದರಂತೆ. ತಮ್ಮ ತಂಗಿಯರ ಮಕ್ಕಳ ಜೊತೆ ಆಟವಾಡುತ್ತಾ, ಅವರೇ ತಮ್ಮ ಮಕ್ಕಳೆಂದು ಪ್ರೀತಿಯಿಂದ ಅಪ್ಪಾಜಿ ನೋಡಿಕೊಳ್ಳುತ್ತಿದ್ದರಂತೆ.



ಹೀಗೆ ನಮ್ಮ ಕುಟುಂಬ ಸಂತೋಷ ಮತ್ತು ಅಸಂತೋಷದ ಜೊತೆಜೊತೆಗೇ ಸಾಗುತ್ತಿದ್ದಾಗ, ಕುಟುಂಬದ ಸದಸ್ಯರೆಲ್ಲರೂ ನಿರೀಕ್ಷಿಸುತ್ತಿದ್ದ ಆ ದಿನ ಕೊನೆಗೂ ಬಂದೇ ಬಿಟ್ಟಿತು. **After 8 years of married life** ಅಪ್ಪ-ಅಮ್ಮನಿಗೆ ಮಗು ಹುಟ್ಟಿತು. ಅದು ನಾನು. **I was born.**

ನಾನು ಹುಟ್ಟಿದ್ದು ಮದರಾಸಿನ ಕಲ್ಯಾಣಿ ಆಸ್ಪತ್ರೆಯಲ್ಲಿ, ಆಗ ಕನ್ನಡ ಚಿತ್ರರಂಗ ಮದರಾಸಿನಲ್ಲಿತ್ತಾದ್ದರಿಂದ ನಮ್ಮ ಮನೆ ಕೂಡ ಅಲ್ಲೇ ಇತ್ತು, ನಾನು ಬೆಳೆದದ್ದು ಮದರಾಸಿನಲ್ಲಿ. ಆ ದಿನಗಳಲ್ಲಿ ನಮ್ಮ ಮನೆಯಲ್ಲಿ ತುಂಬಾ ಜನರಿದ್ದರೂ ಎಲ್ಲರೂ ಸಂತೋಷದಿಂದ್ದೆವು. ನಾನು ಮತ್ತು ನನ್ನ ಕಸಿನ್ಸ್‌ಗಳೆಲ್ಲ ಒಟ್ಟಿಗೆ ಆಟವಾಡುತ್ತಿದ್ದೆವು, ಒಟ್ಟೊಟ್ಟಿಗೆ ಊಟಮಾಡುತ್ತಿದ್ದೆವು. ನನ್ನ ಅಪ್ಪಾಜಿ ಮನೆಯ ದೊಡ್ಡಣ್ಣನಾಗಿದ್ದರೂ, ನಾನು ಅವರ ಮಗನಾಗಿದ್ದರೂ ನನಗಾಗಿ ಎಂದೂ ವಿಶೇಷವಾದ ಊಟವಾಗಲೀ, ಸೌಲಭ್ಯವಾಗಲೀ ಇರುತ್ತಿರಲಿಲ್ಲ, ಮನೆಯಲ್ಲಿದ್ದ ಎಲ್ಲ ಮಕ್ಕಳಂತೆ ನಾನೂ ಸಾಲಿನಲ್ಲಿ ಕುಳಿತು ಊಟಮಾಡುತ್ತಿದ್ದೆ. ಸ್ವಲ್ಪ ದೊಡ್ಡವನಾದ ಮೇಲೆ ಎಲ್ಲರಂತೆ ನಾನು ಕೂಡ ಬಸ್‌ನಲ್ಲಿ ಸ್ಕೂಲಿಗೆ ಹೋಗುತ್ತಿದ್ದೆ. ಹೀಗೆ ನಾನು ಚಿಕ್ಕವನಾಗಿದ್ದಾಗಲೇ ಅಪ್ಪ-ಅಮ್ಮ ನನ್ನಲ್ಲಿ ಸಹಬಾಳ್ವೆ, ಸಮಪಾಲು ಎಂಬ ಮೌಲ್ಯಗಳನ್ನು ಹೇಳಿಕೊಟ್ಟರು. ಅದನ್ನು ಮೌಲ್ಯಗಳು ಎಂಬಂತಲ್ಲದೆ ನಿಜ ಜೀವನದ, ಸಹಜ ಬದುಕಿನ ಅಂಗ ಎಂಬುದನ್ನು ತೋರಿಸಿಕೊಟ್ಟರು. ಅವರೂ ಕೂಡ ಹಾಗೆ ಜೀವಿಸುತ್ತಾ ಮಾರ್ಗದರ್ಶಿಗಳಾಗಿದ್ದರು.

ನಾನು ಹುಟ್ಟಿದಾಗ ಇಡೀ ಮನೆಯಲ್ಲಿ ಸಡಗರ, ಸಂಭ್ರಮ, ಹಬ್ಬದ ವಾತಾವರಣ ಸೃಷ್ಟಿಯಾಯಿತಂತೆ. ಅಷ್ಟೊತ್ತಿಗೆಲ್ಲಾ ನನ್ನ ಅಪ್ಪಾಜಿಯವರು ಸ್ಟಾರ್ ಆಗಿದ್ದರಿಂದ ಅವರೊಂದಿಗೆ ಕೆಲಸ ಮಾಡಿದ್ದ ಹೀರೋಯಿನ್‌ಗಳಿಗೆ, ಸಹನಟರಿಗೆ, ಉದ್ಯಮದವರಿಗೆ ತುಂಬಾ ಖುಷಿ ಆಯಿತಂತೆ. "ರಾಜಣ್ಣನಿಗೆ ಗಂಡು ಮಗು ಆಯಿತು" ಅಂತ ಎಲ್ಲರೂ ಸಂತೋಷಪಟ್ಟರಂತೆ. ಹೀಗಂತ ನಾನು ದೊಡ್ಡವನಾದ ನಂತರ ನನಗೆ ಅವರಿವರು ಹೇಳಿದ್ದನ್ನು ಈಗ ನಿಮಗೆ ಹೇಳುತ್ತಿದ್ದೇನೆ.

ಆಗ ನಾನೇ ಮನೆಯಲ್ಲಿ ಚಿಕ್ಕವನಾಗಿದ್ದರಿಂದ ಸಹಜವಾಗಿಯೇ ನನ್ನನ್ನು ಎಲ್ಲರೂ ಮುದ್ದು ಮಾಡುತ್ತಿದ್ದರು. ನನ್ನ ಚಿಕ್ಕಪ್ಪ ವರದಣ್ಣ ಅವರಿಗಂತೂ ನಾನೆಂದರೆ ಪಂಚಪ್ರಾಣ. ಶಾರದತ್ತೆ ಮತ್ತು ನಾಗತ್ತೆ ಕೂಡ ನನ್ನನ್ನು ಮುದ್ದು ಮಾಡುತ್ತಾ ಬೆಳೆಸುತ್ತಿದ್ದರು. ನನ್ನ ಅವ್ವ- ಅಂದರೆ ನನ್ನ ತಂದೆಯ ತಾಯಿ ಲಕ್ಷ್ಮವ್ವ ಅವರಿಗಂತೂ ನಾನೆಂದರೆ ಜೀವ. ಅವರು ನನಗೆ ತುಂಬಾ ಕ್ಲೋಸಾಗಿದ್ದರು. ನನಗೆ ಊಟ ಮಾಡಿಸುವುದು, ತಿಂಡಿ ತಿನ್ನಿಸುವುದರಲ್ಲೇ ಅವರು ಸುಖ ಸಂತೋಷ ಕಂಡುಕೊಳ್ಳುತ್ತಿದ್ದರು. ನಾನು ಮುಂದೆ ಎಲ್‌ಕೆಜಿಗೆ ಹೋಗುತ್ತಿದ್ದಾಗ ನನ್ನನ್ನು ಸ್ಕೂಲಿಗೆ ಕರೆದುಕೊಂಡು ಮತ್ತು ಸ್ಕೂಲಿನಿಂದ ವಾಪಾಸು ಕರೆದುಕೊಂಡು ಬರುತ್ತಿದ್ದದ್ದು ಇದೇ ನನ್ನ ಪ್ರೀತಿಯ ಅಜ್ಜಿ ಲಕ್ಷ್ಮವ್ವ.

ನನ್ನ ಮೊದಲ ವರ್ಷದ ಹುಟ್ಟು ಹಬ್ಬವನ್ನು ಬಹಳ ಅದ್ದೂರಿಯಾಗಿ ಆಚರಿಸಿದರಂತೆ. ನನಗೆ ಆ ಸಮಾರಂಭದ ಬಗ್ಗೆ ಒಂದಿಷ್ಟೂ ನೆನಪಿಲ್ಲ, **It was a great celebration.** ಅದನ್ನು ಮನೆಯವರೆಲ್ಲ ನಾನು ದೊಡ್ಡವನಾದ ಮೇಲೆ ಅನೇಕ ಬಾರಿ ಹೇಳುತ್ತಿದ್ದರು.

ಏಕೆಂದರೆ ಮೊದಲೇ ಹೇಳಿದಂತೆ ನಾನು ಹುಟ್ಟುವಷ್ಟರಲ್ಲಿ ಅಪ್ಪಾಜಿ ಸ್ಟಾರ್ ಆಗಿದ್ದರು. ಅದಕ್ಕಿಂತಲೂ ಮುಖ್ಯವಾಗಿ ಮದುವೆಯಾದ ಎಂಟು ವರ್ಷದ ನಂತರ ಹುಟ್ಟಿದ ಮಗು, ಅದರಲ್ಲೂ ಗಂಡು ಮಗು ಹುಟ್ಟಿದ್ದು ಎಲ್ಲರಲ್ಲೂ ಸಂತೋಷ ಮೂಡಿಸಿತ್ತಂತೆ. ಎಲ್ಲದಕ್ಕಿಂತ ಮುಖ್ಯವಾಗಿ ನಮ್ಮ ತಾತ ಪುಟ್ಟಸ್ವಾಮಯ್ಯ ಅವರ ಹಿರಿಯ ಮಗ- .ಅಂದರೆ ನನ್ನ ಅಪ್ಪಾಜಿಗೆ- ಗಂಡು ಮಗು ಹುಟ್ಟಿದ್ದು ಒಂದು ರೀತಿಯಲ್ಲಿ ವಂಶವೃಕ್ಷ ಬೆಳೆದಂತೆ ಎಂದು ಅವರೆಲ್ಲ ಸಂಭ್ರಮಿಸಲು ಮುಖ್ಯ ಕಾರಣ. ಈ ಎಲ್ಲ ಕಾರಣಗಳಿಂದಾಗಿ ನನ್ನ ಮೊದಲ ವರ್ಷದ ಬರ್ತ್‌ಡೇ ತುಂಬಾ ಅದ್ದೂರಿಯಾಗಿ ನಡೆಯಿತಂತೆ.

ನಾನು ನಂಜುಂಡೇಶ್ವರನ ವರದಿಂದಾಗಿ ಹುಟ್ಟಿದೆ ಎಂಬುದು ನಮ್ಮ ಕುಟುಂಬದ ಅನೇಕ ಸದಸ್ಯರ ಬಲವಾದ ನಂಬಿಕೆ. ಹೀಗಾಗಿ ನಂಜುಂಡೇಶ್ವರನ ಬಗ್ಗೆ ನಮಗೆಲ್ಲರಿಗೂ ಇಂದಿಗೂ ವಿಶೇಷವಾದ ಭಯ, ಭಕ್ತಿ ಗೌರವ ಇದ್ದೇ ಇದೆ. ಈ ಕಾರಣದಿಂದಲೇ ನಂಜುಂಡೇಶ್ವರನನ್ನು ನೆನಪಿಸಿಕೊಳ್ಳುವಂತಹ ಹೆಸರನ್ನು ಅಪ್ಪಾಜಿ ಅವರೇ ನನಗೆ ಇಟ್ಟರಂತೆ.



ಅಪ್ಪಾಜಿ ನನಗೆ ಇಟ್ಟ ಹೆಸರು ಏನು ಗೊತ್ತಾ? ನಾಗರಾಜು ಶಿವ ಪುಟ್ಟಸ್ವಾಮಿ! ಇದು ನನ್ನ ಮೂಲ ಹೆಸರು.

ಅಂದು ನಾಗರಾಜು ಶಿವ ಪುಟ್ಟಸ್ವಾಮಿಯಾಗಿದ್ದ ನಾನು ಇಂದು ನಿಮ್ಮೆಲ್ಲರ ಪ್ರೀತಿಯ ಶಿವರಾಜ್‌ಕುಮಾರ್ ಆಗಿ ಹೇಗೆ ರೂಪಾಂತರಗೊಂಡೆ ಎಂದು ಕೆಲವೊಮ್ಮೆ ನಾನು ಸುಮ್ಮನೆ ಕುಳಿತು ಆಲೋಚಿಸುತ್ತೇನೆ. ಆಗ ಹಲವು ಬಾರಿ ನನಗೇ ಆಶ್ಚರ್ಯವಾಗುತ್ತದೆ. ನಾನು ನಡೆದು ಬಂದಿರುವ ದಾರಿಯು ನನ್ನನ್ನೇ ಚಕಿತಗೊಳಿಸಿ, ಇದೆಲ್ಲ ಹೇಗೆ ಸಾಧ್ಯವಾಯಿತು? ಎಂದು ಅನೇಕ ಬಾರಿ ನಾನು ನನ್ನನ್ನೇ ಪ್ರಶ್ನಿಸಿಕೊಂಡಿದ್ದೇನೆ. ತಮಾಷೆಯ ಸಂಗತಿ ಯಾವುದು ಗೊತ್ತಾ? ಈ ಪ್ರಶ್ನೆಗಳಿಗೆ ಉತ್ತರಗಳು ಸಿಗುವುದಿರಲಿ, ಆ ಪ್ರಶ್ನೆಗಳೆಲ್ಲ ಇಂದಿಗೂ ನನ್ನಲ್ಲಿ ಪ್ರಶ್ನೆಗಳಾಗಿಯೇ ಉಳಿಯುತ್ತವೆ. ಹಾಗಾದಾಗಲೆಲ್ಲ ನನಗೆ ನೆನಪಾಗುವುದು ನನ್ನ ಅಪ್ಪಾಜಿಯವರ ಮಾತುಗಳು. ಅವರು ಯಾವಾಗಲೂ ಹೇಳುತ್ತಿದ್ದರು : "ಎಲ್ಲವೂ ದೈವೇಚ್ಛೆ, ಆತನೇ ಎಲ್ಲವನ್ನೂ ನಡೆಸುವವನು" ಎಂದು. ಅಪ್ಪಾಜಿಯ ಆ ಮಾತುಗಳು ನನ್ನ ಅತ್ಯಂತ ನೋವಿನ ಸಂದರ್ಭಗಳಲ್ಲೂ, ಸಂತೋಷದ ಸಮಯ ದಲ್ಲೂ ನನಗೆ ನೆರವಾಗಿವೆ, ನೆಮ್ಮದಿ, ಸ್ಫೂರ್ತಿ ನೀಡಿವೆ.

ನಾನು ಚಿಕ್ಕವನಾಗಿದ್ದಾಗ ನಡೆದ ಒಂದು ಘಟನೆ ಬಗ್ಗೆ ಇಲ್ಲಿ ಹೇಳಬೇಕು ಅನ್ನಿಸುತ್ತಿದೆ. ಒಂದು ದಿನ ನನ್ನನ್ನು ಮನೆಯ ಹಿರಿಯರು ಶಾಪಿಂಗ್‌ಗೆ ಕರೆದುಕೊಂಡು ಹೋಗಿದ್ದರಂತೆ. ಆಗ ಬಹುಶಃ ನನಗೆ ಎರಡು ವರ್ಷ ಇದ್ದಿರಬಹುದು. ಮದರಾಸಿನಲ್ಲಿ ಪ್ಯಾರಿಸ್ ಕಾರ್ನರ್ ಎಂಬ ದೊಡ್ಡ ಅಂಗಡಿಯಲ್ಲಿ ನಡೆದ ಆ ಘಟನೆಯ ಬಗ್ಗೆ ನನಗೆ ಸ್ವಲ್ಪ ಸ್ವಲ್ಪ ನೆನಪಿದೆ.

ಅಂದು ಹಿರಿಯರು ಶಾಪಿಂಗ್ ಮಾಡುತ್ತಿದ್ದಾಗ ಹೇಗೋ ನಾನು ಅವರಿಂದ ಬೇರೆಯಾದೆ. ಸ್ವಲ್ಪ ಹೊತ್ತಿನ ನಂತರ ನಾನು ತಪ್ಪಿಸಿಕೊಂಡದ್ದನ್ನು ಗಮನಿಸಿ ಎಲ್ಲರಿಗೂ ಕಳವಳ, ಟೆನ್ಷನ್, ಆತಂಕ. ಅಂತಹ ಜನನಿಬಿಡ ಪ್ರದೇಶದಲ್ಲಿ ಕಳೆದುಹೋದ ಮಗು ಮತ್ತೆ ಸಿಗುತ್ತದೋ ಇಲ್ಲವೋ ಎಂಬ ಆತಂಕ ಎಲ್ಲರೂ ಅನುಭವಿಸಿದರು. "ಎಂಟು ವರ್ಷದ ನಂತರ ನಮ್ಮ ಕುಟುಂಬಕ್ಕೆ ಬಂದಿದ್ದ ಬೆಳಕನ್ನು ಇಷ್ಟು ಬೇಗ ಹಿಂದಕ್ಕೆ ಪಡೆದುಕೊಂಡೆಯಾ?" ಎಂದು ದೇವರನ್ನು ನಿಂದಿಸಲು ಕೆಲವರು ಶುರು ಮಾಡಿದರಂತೆ.

ನನಗಾಗಿ ಪ್ಯಾರಿಸ್ ಕಾರ್ನರ್‌ನಲ್ಲಿ ಅವರೆಲ್ಲ ಹುಡುಕುತ್ತಿರುವಾಗ ಸ್ವಲ್ಪ ಸಮಯದ ಬಳಿಕ ಅಂದು ಮೂಲೆಯಲ್ಲಿ ನಾನು ಕಾಣಿಸಿಕೊಂಡನಂತೆ. ಅಲ್ಲಿ ಯಾವುದೋ ಒಂದು ಮಗು ಬಟ್ಟೆ ಇಲ್ಲದೆ ಮಲಗಿದ್ದನ್ನು ನೋಡಿದ್ದ ನಾನು ನನ್ನ ಬಟ್ಟೆಯನ್ನು ಬಿಚ್ಚಿ ಆ ಮಗುವಿಗೆ ಕೊಟ್ಟು ಬರುತ್ತಿದ್ದೆನಂತೆ. ಅದನ್ನು ನೋಡಿ ನಮ್ಮ ಮನೆಯ ಹಿರಿಯರಿಗೆಲ್ಲ ಬಂದಿದ್ದ ಸಿಟ್ಟು ಮಾಯವಾಗಿ ಸಂತೋಷವಾಯಿತಂತೆ. ಮಾನವೀಯತೆ, ಅನುಕಂಪ ಇವೆಲ್ಲವೂ ನನ್ನಲ್ಲಿ ಬಾಲ್ಯದಲ್ಲೇ ಕಾಣಿಸಿಕೊಂಡಿದ್ದನ್ನು ಅನೇಕ ಬಾರಿ ನನ್ನ ಕುಟುಂಬದ ಸದಸ್ಯರು ಈಗಲೂ ಹೇಳುತ್ತಿರುತ್ತಾರೆ.

ನನಗೆ ಮೂರು ವರ್ಷ ತುಂಬುವ ಮುನ್ನ ಸಹಜವಾಗಿಯೇ ನನ್ನನ್ನು ಎಲ್‌ಕೆಜಿಗೆ ಸೇರಿಸುವ ನಿರ್ಧಾರವನ್ನು ನನ್ನ ತಂದೆ-ತಾಯಿ ಕೈಗೊಂಡರು. ಅಲ್ಲೇ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿದ್ದ ಸರಸ್ವತಿ ವಿದ್ಯಾಲಯಕ್ಕೆ ನನ್ನನ್ನು ಸೇರಿಸಿದರು. ನನ್ನನ್ನು ಸ್ಕೂಲಿಗೆ ಕರೆದುಕೊಂಡು ಹೋಗುವ ಜವಾಬ್ದಾರಿಯನ್ನು ಮೊದಲೇ ಹೇಳಿದಂತೆ ನನ್ನ ತಂದೆಯ ಅವ್ವ ಲಕ್ಷ್ಮವ್ವ ನೋಡಿಕೊಳ್ಳುತ್ತಿದ್ದರು.

ಆ ಸಂದರ್ಭದಲ್ಲಿನ ಕೆಲವು ತಮಾಷೆಯ, ಸವಿನೆನಪಿನ ಘಟನೆಗಳು ನನ್ನ ಮನಸ್ಸಿನಲ್ಲಿ ಈಗಲೂ ಅಚ್ಚಳಿಯದೆ ಉಳಿದಿವೆ....

(ಮುಂದಿನ ವಾರಕ್ಕೆ....)




'ನಾಗ'-111ನೇ ಲಾಗ!

ಈ 'ನಾಗ' ಸಿಂಪಲ್ 'ನಾಗ'ನಲ್ಲ; ಠುಸ್ಸ್ ನಾಗ! ಕಷ್ಟಪಟ್ಟು ಥಿಯೇಟರ್ ಹೊಕ್ಕ 'ನಾಗ' ಬಂದೇಟಿಗೆ ಲಾಗ ಹೊಡೆದಿದ್ದಾನೆ. ಲಗಾಟ ಹೊಡೆಯುವುದು 'ನಾಗ'ನಿಗೆ ಕಾಮನ್ ಆಗಿ ಹೋಗಿದೆ ಬಿಡಿ.

"ನನಗೆ ನಟಿಸಲು ಬರಲ್ಲ; ನಾನು ನಿರ್ದೇಶಕರ ಕೂಸು" ಎಂದು ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದಾನೆ ಹೀರೋ 'ನಾಗ'! 'ನಾಗ'ನ ಪಂಚ್‌ಲೈನ್ ``The Real guts of village guy''ನಲ್ಲಿ `of a village guy' ಎಂದಿರಬೇಕಿತ್ತು, ಆದರೆ 'ನಾಗ'ನ ಟೀಮ್ `a' ಹಾರಿಸಿಬಿಟ್ಟಿದೆ! ಕಾರಣ ಕೇಳಿದರೆ ``A ಹಾಕಿಬಿಟ್ಟರೆ ವಯಸ್ಕರ ಚಿತ್ರ ಅಂದುಕೊಂಡುಬಿಡ್ತಾರೆ..." ಅಂತ ಹೇಳಿಲ್ಲ ಪಾಪ. ಈ ಹೀರೋನ ಮುಂದಿನ ಚಿತ್ರದ ವಸ್ತು ಜಾಗತೀಕರಣವಂತೆ. 'ಜಾಗತೀಕರಣ' ಪದದಲ್ಲಿ `ೀ' ಬಿಟ್ಟು ಹೋಗದಿರಲಿ....

ಅದೆಲ್ಲ ಬದಿಗಿರಲಿ. 'ನಾಗ' ಚಿತ್ರವನ್ನು ಯಾರೂ ವಿಮರ್ಶಿಸುತ್ತಿಲ್ಲ, ಏಕೆಂದರೆ ಡಿಫಮೇಷನ್ ಕೇಸ್‌ಗಳ ಭಯ!





ರವಿ ಬದಲಾಗಿದ್ದಾರಂತೆ... ಚಂದ್ರನೂ ಬದಲಾಗಲೇಬೇಕು!

ಶಾಟ್ ಕಟ್

'ಒಡಹುಟ್ಟಿದವಳು' ಚಿತ್ರ ನಿರ್ಮಿಸುತ್ತಿರುವ ಕೆ. ಮಂಜು ಪ್ರಕಾರ ರವಿಚಂದ್ರನ್ ಬದಲಾಗಿದ್ದಾರಂತೆ. ಈ ಮೊದಲು ಮಳೆಯಲ್ಲಿ ನೆನೆಯುವ ದೃಶ್ಯಗಳಿಗೆ ಬಿಸಿನೀರಿನ ಮಳೆಯೇ ಬೇಕೆನ್ನುತ್ತಿದ್ದವರು ಈಗ ತಣ್ಣೀರಿಗೆ ಓಕೆ ಎನ್ನುತ್ತಾರಂತೆ... ರಿಸ್ಕ್ ಫೈಟ್‌ಗಳಲ್ಲಿ ಡ್ಯೂಪ್ ಕೇಳುತ್ತಿದ್ದವರು ಈಗ ತಾವೇ ಅಭಿನಯಿಸುತ್ತಿದ್ದಾರಂತೆ...

ಸಾಲು ಸಾಲು ಸೋತ ಚಿತ್ರಗಳನ್ನು ಕೊಟ್ಟಾದ ಮೇಲೆ ರವಿಯೂ ಬದಲಾಗುತ್ತಾನೆ... ಚಂದ್ರನೂ ಬದಲಾಗಬೇಕಲ್ಲವೆ?

ಮೊದಲು ಅಷ್ಟೊಂದು ಮಾತಾಡದಿದ್ದ ಕೆ. ಮಂಜು ಅವರೂ ಬದಲಾಗಿದ್ದಾರೆ. ಈ ಬದಲಾವಣೆ 'ರಾಮ ಶಾಮ ಭಾಮ' ಗೆಲುವಿನ ಖುಷಿಗೋ ಅಥವಾ 'ಗುಡ್‌ಲಕ್' ಬದುಕಿಗೆ ಆಗುತ್ತಿರುವ ಕಷ್ಟಕ್ಕೋ?

R.B.P. LANKESH, Kannada Weekly Price Rs. 10/- 17-5-2006 RNI No. KARKAN2005/14648 Regd.No.KA/BG(S)/2036/2005-

ಮಿನುಗುತಾರೆ ಅಲ್ಲ ಮಾನ್ಯ



'ಅಂದು ಕಲ್ಪನಾ-ಇಂದು ಮಾನ್ಯ!'

ಹೀಗಂತ 'ಬೆಳ್ಳಿ ಬೆಟ್ಟ' ಚಿತ್ರಕ್ಕೆ ಸಂಬಂಧಪಟ್ಟ ಜಾಹಿರಾತಿನಲ್ಲಿ ಒಂದು ವಾಕ್ಯವಿದೆ. ಇದು ಸಂಪೂರ್ಣವಾಗಿ ಜನರನ್ನು ಅಡ್ಡ ಹಾದಿಗೆ ಎಳೆಯುವ ಜಾಹಿರಾತು.

ಈ ಮಾನ್ಯಳಿಗೂ ಕಲ್ಪನಾಳಿಗೂ ಯಾವ ರೀತಿಯ ಸಂಬಂಧವೂ ಇಲ್ಲ. ಕಲ್ಪನಾ ಮಾಡುತ್ತಿದ್ದ ಅದ್ಭುತವಾದ ಪಾತ್ರವನ್ನೇನೂ ಮಾನ್ಯ ಈ ಚಿತ್ರದಲ್ಲಿ ಮಾಡಿಲ್ಲ. ಈಕೆ ಕಲ್ಪನಾಳ ನೆರಳು ಕೂಡಾ ಆಗಲು ಸಾಧ್ಯವಿಲ್ಲ. 'ಬೆಳ್ಳಿ ಬೆಟ್ಟ' ಚಿತ್ರ ಕಲ್ಪನಾ ನಟಿಸಿದ್ದ ಚಿತ್ರವೊಂದರ ರಿಮೇಕ್ ಆಗಿದ್ದಲ್ಲಿ 'ಅಂದು ಕಲ್ಪನಾ-ಇಂದು ಮಾನ್ಯ' ಎಂದಿದ್ದರೆ ತಪ್ಪಾಗುತ್ತಿರಲಿಲ್ಲ. 'ಬೆಳ್ಳಿಬೆಟ್ಟ' ಖಂಡಿತವಾಗಿಯೂ ಕಲ್ಪನಾ ನಟಿಸಿದ ಚಿತ್ರದ ರಿಮೇಕ್ ಅಲ್ಲವೇ ಅಲ್ಲ.

ಇದೆಲ್ಲಾ ಈ ಚಿತ್ರದ ನಿರ್ದೇಶಕ, ನಿರ್ಮಾಪಕರಿಗೆ ಗೊತ್ತಿಲ್ಲದ ವಿಷಯವಲ್ಲ. ಆದರೂ ಕನ್ನಡ ಚಿತ್ರರಂಗದ ಅದ್ಭುತ ನಟಿಯೊಬ್ಬಳನ್ನು ನಿನ್ನೆ ಮೊನ್ನೆ ಬಂದ, ಇನ್ನೂ ನಾಯಕಿಯಾಗಿ ಅಂಬೆಗಾಲಿಡುತ್ತಿರುವ ನಟಿಗೆ ಹೋಲಿಸುವುದೆಂದರೆ ಮಿನುಗುತಾರೆ ಕಲ್ಪನಾಗೆ ಮಾಡುವ ಅವಮಾನವೇ ಸರಿ!

ಜಾಹಿರಾತು, ಪ್ರಚಾರದ ಹೆಸರಲ್ಲಿ ನಡೆಯುವ ಈ ತರಹದ ಅಸಂಬದ್ಧಗಳಿಗೆ ಕಡಿವಾಣ ಹಾಕುವವರು ಯಾರು?

ಆಂಟಿಯರ ಸಾಹಸ





ಹದಿನೈದು ವರ್ಷಗಳ ಹಿಂದೆ ಆರತಿ ಮತ್ತು ಜಯಮಾಲಾ ಕನ್ನಡ ಚಿತ್ರರಂಗದ ರತಿವರ್ಚಸ್ಸಿನ ನಾಯಕಿಯರಾಗಿದ್ದರು. ಈಗ ಇವರಿಬ್ಬರೂ ಆಂಟಿಯರಾಗಿದ್ದರೂ, ಚಿತ್ರರಂಗದಲ್ಲಿ ಸಕ್ರಿಯವಾಗಿರುವುದೇ ವಿಶೇಷ.

ಅಮೆರಿಕಾದಲ್ಲಿ ದಶಕಗಳ ಕಾಲ ವಾಸಿಸಿದ ನಂತರ ಗಾಂಧಿನಗರಕ್ಕೆ ಕಾಲಿಟ್ಟ ಆರತಿ 'ಮಿಠಾಯಿ ಮನೆ' ಎಂಬ ಮಕ್ಕಳ ಚಿತ್ರ ನಿರ್ದೇಶಿಸಿ, ಅದಕ್ಕೆ ರಾಜ್ಯ ಪ್ರಶಸ್ತಿಯನ್ನು ಪಡೆದ ಸಂಭ್ರಮದಲ್ಲಿದ್ದಾರೆ. ಆದರೆ ಈ ಚಿತ್ರವನ್ನು ಪ್ರೇಕ್ಷಕರು ನೋಡುವಂತೆ ವ್ಯವಸ್ಥೆ ಮಾಡಿಲ್ಲವೆಂಬುದೇ ಆಕೆಯ ಮೇಲಿರುವ ಆರೋಪ.

ಈಗ ಜಯಮಾಲಾ ತನ್ನ ನಿರ್ಮಾಣದ 'ತುತ್ತೂರಿ' ಚಿತ್ರವನ್ನು ಕಮರ್ಷಿಯಲ್ ಚಿತ್ರದ ತರಹ ರಾಜ್ಯದ ಎಲ್ಲೆಡೆ ಬಿಡುಗಡೆ ಮಾಡಲು ಓಡಾಡುತ್ತಿದ್ದಾರೆ.

ಅದೇನೆ ಇರಲಿ, ಹಳೆ ಕಾಲದ ಈ ನಾಯಕಿಯರಿಬ್ಬರು ಮಕ್ಕಳ ಚಿತ್ರ ನಿರ್ಮಿಸಿರುವುದೇ ಒಂದು ಕುತೂಹಲ. ಜಯಂತಿ, ಭಾರತಿ, ಸುಮಲತಾ ಮೊದಲಾದವರು ಸಭೆ-ಸಮಾರಂಭಗಳಲ್ಲಿ ಮುಖ್ಯ ಅತಿಥಿಗಳಾಗುವುದಕ್ಕೆ ಸೀಮಿತವಾಗಿರುವ ಈ ಸಂದರ್ಭದಲ್ಲಿ ಇವರಿಬ್ಬರ ಸಾಹಸ ಮೆಚ್ಚಬೇಕಾಗುತ್ತದೆ.

ವಿಜಯ ಅರಳುವನೇ?



ವಿಜಯ ರಾಘವೇಂದ್ರ ಎಂಬ ಯುವ ನಾಯಕನಟನ ವೃತ್ತಿ ಜೀವನ ನಿಜಕ್ಕೂ ಕವಲುದಾರಿಯಲ್ಲಿದೆ. ಆತನ ಕಿರಿಯ ಸಹೋದರ ಮುರಳಿ ತರಹ!

'ಶ್ರೀ' ಚಿತ್ರದಲ್ಲಿ ವಿಭಿನ್ನ ಫೈಟಿಂಗ್ ಮಾಡಿ 'ಆಕ್ಷನ್ ಹೀರೋ' ಆಗಿ ಬಿ ಮತ್ತು ಸಿ ಕೇಂದ್ರಗಳಿಗೆ ತಲುಪುತ್ತೇನೆ ಎಂಬ ನಿರೀಕ್ಷೆ ಸುಳ್ಳಾಗಿದೆ.

ಅದರ ಬೆನ್ನಿಗೆ ತಮ್ಮ ಸ್ವಂತ ಬ್ಯಾನರ್‌ನಲ್ಲಿ 'ಸೇವಂತಿ ಸೇವಂತಿ' ಎಂಬ ಪ್ರೇಮಕಥಾ ಚಿತ್ರದಲ್ಲಿ ವಿಜಯ ರಾಘವೇಂದ್ರ ನಟಿಸಿದರು. ಅದೂ ಹ್ಯಾಟ್ರಿಕ್ ಹಿರೋಯಿನ್, ಯಶಸ್ವಿ ನಾಯಕಿ ರಮ್ಯ ಜೊತೆ ನಟಿಸಿದರೂ ಚಿತ್ರ ಫ್ಲಾಪ್ ಆಗಿದೆ.

ಈಗ ಸದ್ಯಕ್ಕೆ ಅಲ್ಲೂಸಲ್ಲದ, ಇಲ್ಲೂಸಲ್ಲದ ವಿಜಯ್ ಕೊನೆಯ ಛಾನ್ಸ್ ಎಂಬಂತೆ 'ಕಲ್ಲರಳಿ ಹೂವಾಗಿ' ಎಂಬ ಐತಿಹಾಸಿಕ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಮೂರನೆಯ ಪ್ರಯತ್ನ ಕ್ಲಿಕ್ ಆಗಬಹುದೇ? ಎಂಬ ಕಾತರದಲ್ಲಿದ್ದಾರೆ ವಿಜಯ್ ತಂದೆ ಚಿನ್ನೇಗೌಡರು.

ಕುಂಬಕರ್ಣ ಗಂಗರಾಜ್



ಚಲನಚಿತ್ರ ವಾಣಿಜ್ಯ ಮಂಡಳಿ ಪದಾಧಿಕಾರಿಗಳು ಚೆನ್ನಾಗಿ ನಿದ್ರೆ ಹೊಡೆಯುತ್ತಿದ್ದಾರೆ.

ಯಾಕೆ ಗೊತ್ತಾ? ಕಳೆದ ಎರಡು ವಾರಗಳಿಂದ ತ್ರಿವೇಣಿ ಚಿತ್ರಮಂದಿರದಲ್ಲಿ ತಮ್ಮ ಚಿತ್ರ ಬಿಡುಗಡೆಯೆಂದು 'ತುತ್ತೂರಿ' ಮತ್ತು 'ಗುಡ್‌ಲಕ್' ಚಿತ್ರದ ನಿರ್ಮಾಪಕರು ಜಾಹಿರಾತು ನೀಡುತ್ತಿದ್ದಾರೆ.

ಒಂದೇ ದಿನ, ಒಂದೇ ಥಿಯೇಟರ್‌ನಲ್ಲಿ ಎರಡು ಹೊಸ ಚಿತ್ರಗಳು ಬಿಡುಗಡೆ ಆಗುವುದು ಹೇಗೆ ಸಾಧ್ಯ? ಇದೇ ಸಮಯಕ್ಕೆ ಇದೇ ಚಿತ್ರಮಂದಿರದಲ್ಲಿ 'ಜೂಲಿ' ಚಿತ್ರವನ್ನು ಬಿಡುಗಡೆ ಮಾಡುವುದೆಂದೂ ನಿರ್ಧರಿಸಲಾಗಿತ್ತು. ಆದರೆ ಈ ಎರಡು ಚಿತ್ರ ನಿರ್ಮಾಪಕರ ಹೋರಾಟ ನೋಡಿ 'ಜೂಲಿ' ಯಾಕೋ ಹಿಂದೇಟು ಹಾಕಿದಳು.

ಈಗ 'ತುತ್ತೂರಿ' ಮತ್ತು 'ಗುಡ್‌ಲಕ್' ಚಿತ್ರಗಳ ನಿರ್ಮಾಪಕರು ಪರಸ್ಪರ ಆರೋಪ ಮಾಡುತ್ತಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಒಬ್ಬರ ವಿರುದ್ಧ ಇನ್ನೊಬ್ಬರು ಕೆಂಡ ಕಾರುತ್ತಿದ್ದಾರೆ.

ಚೇಂಬರ್ ಅಧ್ಯಕ್ಷ ಗಂಗರಾಜುಗೆ ಇಷ್ಟು ಚಿಕ್ಕ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲವೇ? ಇಂತಹ ಬೀದಿ ಜಗಳ, ಗೋಷ್ಠಿ ಕಾಳಗ ತಪ್ಪಿಸಲು ಅವರಿಂದ ಸಾಧ್ಯವಿರಲಿಲ್ಲವೇ? ಚೇಂಬರ್ ಸರ್ವಾಧಿಕಾರಿಗಳು ನಿದ್ರೆ ಹೊಡೆಯುತ್ತಿದ್ದಾರೆ ಎಂದು ಹೇಳದೆ ಇನ್ನೇನು ತಾನೇ ಹೇಳಲು ಸಾಧ್ಯ?

ಗೆಲ್ಲುವ 'ಅಜಯ್'



'ಅಜಯ್' ಚಿತ್ರದ ಬಗ್ಗೆ ನಾಲ್ಕು ಮಾತುಗಳು.

ಇದು ತೆಲುಗಿನ 'ಒಕ್ಕುಡು' ಚಿತ್ರದ ರೀಮೇಕ್. ಆದರೂ ಪುನೀತ್ ರಾಜ್‌ಕುಮಾರ್ ನಟಿಸಿರುವ ಈ ಚಿತ್ರ ಒಮ್ಮೆ ನೋಡಲು ಯಾವ ಮೋಸವೂ ಇಲ್ಲ.

ಮುಖ್ಯವಾಗಿ ಕನ್ನಡಿಗ ಪ್ರಕಾಶ್ ರೈ ಎಂತಹ ಅದ್ಭುತ ನಟ ಎಂಬುದು ಗೊತ್ತಾಗಬೇಕಾದರೆ ಇದನ್ನೊಮ್ಮೆ ನೋಡಬೇಕು. ಆತನ ಡೈಲಾಗ್ ಡೆಲವರಿಯ ಶೈಲಿ, ನಟನೆಯ ಅಬ್ಬರ, ಮ್ಯಾನರಿಸಂಗಳೆಲ್ಲವೂ ಸೂಪರ್ಬ್ ಆಗಿವೆ. ಪುನೀತ್ ನಾಯಕನಾದರೂ ಮನಸ್ಸಿನಲ್ಲಿ ಉಳಿಯುವುದು ರೈ ನಟನೆ. ತೆಲುಗಿನಲ್ಲೂ ಈ ಪಾತ್ರವನ್ನು ರೈ ನಿರ್ವಹಿಸಿದ್ದರು.



ಪುನೀತ್ ಕೂಡಾ ಅತ್ಯಂತ ಲವಲವಿಕೆಯಿಂದ ನಟಿಸಿ, ಕುಣಿದು, ಹೊಡೆದಾಡಿ ತನ್ನ ಪಾತ್ರಕ್ಕೆ ಜೀವ ತುಂಬಿದ್ದಾರೆ. ನಾಯಕಿ ಅನುರಾಧಾ ಬಗ್ಗೆ ಹೇಳಲು ಹೆಚ್ಚೇನೂ ಇಲ್ಲ.

ಈ ಚಿತ್ರಕ್ಕೆ ಕೋಟ್ಯಂತರ ರೂಪಾಯಿ ಸುರಿದ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಕನ್ನಡ ಚಿತ್ರರಂಗದ ಮಟ್ಟಿಗೆ ಒಂದು ಅತ್ಯಂತ ಅದ್ಧೂರಿ ಮತ್ತು ದುಬಾರಿ ಚಿತ್ರ ನಿರ್ಮಿಸಿದ್ದಾರೆ.

ಪುನೀತ್ ಲವಲವಿಕೆ, ಪ್ರಕಾಶ್ ರೈಯ ಅದ್ಭುತ ನಟನೆ ಮತ್ತು ರಾಕ್‌ಲೈನ್ ಚೆಲ್ಲಿದ ಹಣ ಈ ಮೂರು ಕಾರಣಕ್ಕಾದರೂ 'ಅಜಯ್' ಚಿತ್ರವನ್ನು ಒಮ್ಮೆ ನೋಡಬಹುದು.

-ಶೆ

ಬಿಸಿಬಿಸಿ ಹುಡುಗಿಯರು, ಲವಲವಿಕೆಯ ಮಕ್ಕಳು





ಇದು ಬೇಸಿಗೆ ಸ್ಪೆಷಲ್!

ಮುಂದಿನ ವಾರ ಮೂರು ಕನ್ನಡ ಚಿತ್ರಗಳು ಬಿಡುಗಡೆಯಾಗಲಿವೆ. ಮೂರೂ ಚಿತ್ರಗಳು ವಿಭಿನ್ನ ಆಯಾಮ ಹೊಂದಿವೆ.

ಜಯಮಾಲಾ ಅವರ 'ತುತ್ತೂರಿ' ಒಂದು ಮಕ್ಕಳ ಚಿತ್ರ. ರಂಜನೆ, ಬೋಧನೆಗಳೆರಡೂ ಇರುವ ಈ ಚಿತ್ರವನ್ನು ಮಕ್ಕಳು ನೋಡಿ ಆನಂದಿಸಬಹುದು.

'ಗುಡ್‌ಲಕ್' ಎಂಬುದು ಅಪ್ಪಟ ವ್ಯಾಪಾರಿ ಚಿತ್ರ. ಕನ್ನಡತಿಯರಾದ ರಾಧಿಕಾ ಮತ್ತು ದಾಮಿನಿ ಪೈಪೋಟಿ ಮೇಲೆ ವಸ್ತ್ರ ತ್ಯಾಗ ಮಾಡಿ ಅತ್ಯಂತ ಕನಿಷ್ಠ ಉಡುಪಿನಲ್ಲಿ ಕಾಣಿಸಿಕೊಂಡಿದ್ದಾರೆ. ಬೇಸಿಗೆಯ ಬಿಸಿಯ ನಡುವೆಯೂ ಕನ್ನಡತಿಯರ ಬಿಸಿಬಿಸಿ ದೃಶ್ಯ ನೋಡಿ ಪಡ್ಡೆ ಹುಡುಗರು ಕಣ್ಣು ತಂಪು ಮಾಡಿಕೊಳ್ಳಬಹುದು.

ಮೂರನೇಯದು 'ಬೆಳ್ಳಿ ಬೆಟ್ಟ'. ಇದು ಕೌಟುಂಬಿಕ ಚಿತ್ರ. ಕುಟುಂಬದ ಸದಸ್ಯರೆಲ್ಲಾ ಒಟ್ಟು ಕುಳಿತು ನೋಡಿ ಆನಂದಿಸಬಹುದು.

ಈ ಮೂರರಲ್ಲಿ ಯಾವುದು ಬೇಕು? ಆಯ್ಕೆ ನಿಮಗೆ ಬಿಟ್ಟದ್ದು!

ಮಲ್ಲಿಗೆ ಮಣಿ!



ಹಸಿವಿನ ಹುಡುಗಿ ಮಲ್ಲಿಕಾ ಡಾರ್ಲಿಂಗ್‌ಗೆ ಸೀರಿಯಸ್ ಪಾತ್ರಗಳಲ್ಲಿ ನಟಿಸುವ ಉತ್ಕಟ ಬಯಕೆಯೊಂದಿದೆ.... ಇದನ್ನರಿ ಸೀರಿಯಸ್ ಡೈರೆಕ್ಟರ್ ಮಣಿರತ್ನಂ ತನ್ನ 'ಗುರು' ಚಿತ್ರದಲ್ಲಿ ಮಲ್ಲಿಗೆ ಐಟಂ ಸಾಂಗ್ ನೀಡಿಬಿಡುವುದೇ? 'ಸೀರೆ'ಯಿಲ್ಲದ ಈ ಸೀರಿಯಸ್ ಪಾತ್ರದಲ್ಲಿ ಮಲ್ಲಿ ಸಖತ್ ಸೀರಿಯಸ್ಸಾಗಿ ಎಕ್ಸ್‌ಪೋಸ್ ಮಾಡಿದ್ದಾಳಂತೆ...

ಆ ಹಾಡಿನ ಚಿತ್ರೀಕರಣ ನಮ್ಮೂರಲ್ಲಿ ಆಗಲಿಲ್ಲವಲ್ಲ ಎಂದು ಬಾದಾಮಿಯ ಬಾಲಕರು ಬೇಜಾನ್ ಬೇಸರಗೊಂಡಿದ್ದಾರಂತೆ!

ಬೇಲೂರ 'ಶಿಲಾಬಾಲೆ' ಬಾದಾಮಿಗೆ ಬರುತ್ತಾಳಾ? ಆಶಾವಾದಿಗಳಾಗಿರೋಣ.....

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 2667642 Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44